ರಂಜನೆ ಬೋಧನೆ ಪ್ರಬೋಧನೆ

ಗೌರಿ ಲಂಕೇಶ್

ಅಕ್ಟೋಬರ್ 30, 2013 ಪುಟ 20 ರೂ. 14/-

ಸಂದರ್ಶನ
ನಟ ಶಂಕರ್ ಆರ್ಯನ್



ಧರ್ಮಸ್ಥಳ



ಸೌಜನ್ಯಳನ್ನು ಕೊಂದವರ್ಯಾರು?

- ಭೂ ಅವ್ಯವಹಾರ
- ಕೊಲೆ-ಅತ್ಯಾಚಾರ
- ಸತ್ಯಕ್ಕೆ ಅಪಚಾರ

ರಾಘಣ್ಣನಿಗೆ ಏನಾಗಿದೆ?



ಕಾರವಾರ-ಮಂಗಳೂರು

ಇಲ್ಲಿ ಕದ್ದ ಅದಿರಿನ ಲೆಕ್ಕ ಎಲ್ಲಿ?

ಮಂಡ್ಯ





ಜಾತಿ ಕ್ರೌರ್ಯಕ್ಕೆ ಪ್ರೇಮಿಗಳ ಬಲಿ

B.B.M.P

ಲಂಚಕೋರ ನವೀನ್‌ಕುಮಾರ್ ಜೈಲಿಗೆ

ಉಪನ್ಯಾಸಕರಿಗೆ ಸರ್ಕಾರಿ ಪೆಟ್ಟು



• ಪಾರ್ವತೀಶ
bparvateesha@gmail.com


ಬಿಡಿ ಚಿತ್ರಗಳು

ಸಂಪಾದಕ

ಕಾಂಗ್ರೆಸ್ ನಾಯಕರ ಕೋಮುವಾದ

ಕರ್ನಾಟಕದಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಸರ್ಕಾರ ಹಾಗೂ ಕಾಂಗ್ರೆಸ್ ನಾಯಕರ ವರ್ತನೆಗಳನ್ನು ನೋಡುತ್ತಿದ್ದರೆ ಇವರು ಬದಲಾಗುವ ಜನ ಅಲ್ಲ ಅನಿಸುವಂತಿದೆ. ಅಷ್ಟೇ ಅಲ್ಲ ಕಾಂಗ್ರೆಸ್ ಪಾರ್ಟಿ ಹಿಂದಿನ ಅನುಭವಗಳಿಂದ ಯಾವ ಪಾಠಗಳನ್ನು ಕಲಿಯುವಂತೆ ಕಾಣುತ್ತಲೂ ಇಲ್ಲ.


ಕಳೆದ ವಾರ ರಾಜ್ಯದ ಹಲವೆಡೆ ದಸರಾ ಆಚರಣೆ ನಡೆಯಿತು. ಅದೇ ರೀತಿ ದಾವಣಗೆರೆಯಲ್ಲೂ ನಡೆದ ದಸರಾ ಕಾರ್ಯಕ್ರಮದಲ್ಲಿ ಸ್ಥಳೀಯ ಕಾಂಗ್ರೆಸ್ ಶಾಸಕ ಎಸ್.ಎಸ್. ಮಲ್ಲಿಕಾರ್ಜುನ ಭಾಗವಹಿಸಿದ್ದಾರೆ. ಆದರೆ ಅದು ಮೈಸೂರಿನಲ್ಲಿ ನಡೆಯುವ ದಸರಾದಂತೆ ಒಂದು ಸರ್ಕಾರಿ ಕಾರ್ಯಕ್ರಮವಾಗಿರಲಿಲ್ಲ, ಬದಲಾಗಿ ವಿಶ್ವ ಹಿಂದೂ ಪರಿಷತ್ ಆಯೋಜಿಸಿದ್ದ ಕಾರ್ಯಕ್ರಮವಾಗಿತ್ತು, ಈ ಹಿಂದೆ ಮೈಸೂರು, ಮಡಿಕೇರಿಗಳಲ್ಲಿ ಹಾಗೂ ಕೆಲವು ಧಾರ್ಮಿಕ ಕೇಂದ್ರಗಳಲ್ಲಿ ಮಾತ್ರ ಆಚರಿಸಲಾಗುತ್ತಿದ್ದ ದಸರಾವನ್ನು ಇತ್ತೀಚೆಗೆ ನಾಡಹಬ್ಬ ಎಂಬಂತೆ ಬಿಂಬಿಸುತ್ತಾ ಹೆಚ್ಚುಹೆಚ್ಚು ಸ್ಥಳಗಳಲ್ಲಿ ಆಚರಿಸುವ ಪರಿಪಾಠ ಶುರುವಾಗಿದೆ. ಇದು ಸಂಘಪರಿವಾರದ ಗುಂಪುಗಳ ಪ್ರಮುಖ ಅಜೆಂಡಾ ರೀತಿಯಲ್ಲಿ ಬಿಂಬಿಸಲ್ಪಡುತ್ತಿದೆ. ಇದು ಸರಿಯೋ ತಪ್ಪೋ ಅಥವಾ ಇವೆಲ್ಲಾ ಎಷ್ಟು ಪ್ರಸ್ತುತ ಎಂಬ ಚರ್ಚೆಯನ್ನು ಕೊಂಚ ಬದಿಗಿರಿಸಿ ಕಾಂಗ್ರೆಸ್ ನಾಯಕರ ವರ್ತನೆಗಳನ್ನೇ ಮತ್ತೆ ಪರಿಶೀಲಿಸೋಣ. ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗ ದಳದಂತಹ ಸಮಾಜ ವಿರೋಧಿ ಗುಂಪುಗಳು ಜನಸಾಮಾನ್ಯರ ನಡುವೆ ತಮ್ಮನ್ನು ತಾವು ಚಲಾವಣೆಗೆ ತಂದುಕೊಳ್ಳಲು ದಸರಾ ಆಚರಣೆ ತರದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಈ ಗುಂಪುಗಳ ರಾಜಕೀಯ ಮುಖವಾಗಿ ಬಿಜೆಪಿ ಪಾರ್ಟಿ ಇದೆ. ಕಾಂಗ್ರೆಸ್‌ಗೆ ಇದು ಗೊತ್ತಿರದ ಸಂಗತಿ ಏನಲ್ಲ, ಹಾಗಿದ್ದಾಗಲೂ ಇವರು ಕೋಮುವಾದಿ ಸಂಘಟನೆಗಳು ಏರ್ಪಡಿಸುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಯಾವುದೇ ಹಿಂಜರಿಕೆ ಇಲ್ಲದೆ ಹೋಗಿ ಪಾಲ್ಗೊಳ್ಳುತ್ತಿದ್ದಾರೆ. ಈಗ್ಗೆ ಮೂರ್ನಾಲ್ಕು ವರ್ಷಗಳ ಹಿಂದೆ ಇದೇ ಸಂಘ ಪರಿವಾರಿಗಳು ರಾಜ್ಯದ ಅನೇಕ ಕಡೆ ನಡೆಸಿದ 'ಹಿಂದೂ ಸಮಾಜೋತ್ಸವ' ಕಾರ್ಯಕ್ರಮಗಳಲ್ಲೂ ಕಾಂಗ್ರೆಸ್ ನಾಯಕರು ಭಾಗವಹಿಸುತ್ತಿದ್ದರು. ಇಂತಹ ಕಾರ್ಯಕ್ರಮ ನಡೆಸುವಾಗ ಹಿಂದೂತ್ವವಾದಿಗಳು "ನಮ್ಮ ರಾಜಕೀಯ ಸಿದ್ಧಾಂತ, ಪಕ್ಷಗಳು ಬೇರೆಬೇರೆ ಇರಬಹುದು. ಆದರೆ ಹಿಂದೂ ಸಮಾಜದ ಏಳಿಗೆಗಾಗಿ ಎಲ್ಲರೂ ಇದರಲ್ಲಿ ಭಾಗಿಯಾಗಬೇಕು" ಎಂದು ಪ್ರಚಾರ ನಡೆಸುತ್ತಿದ್ದರು. ಅದನ್ನು ಒಪ್ಪಿದವರಂತೆ ಕಾಂಗ್ರೆಸ್ ನಾಯಕರೂ ಪಾಲ್ಗೊಳ್ಳುತ್ತಿದ್ದರು.



ಮಲ್ಲಿಕಾರ್ಜುನ

ಸಂಘ ಪರಿವಾರದ ಕೋಮುವಾದಿ ಸಿದ್ಧಾಂತ, ಸಾಮಾಜಿಕ ತಾರತಮ್ಯ ಫ್ಯಾಸಿಸ್ಟ್ ರಾಜಕೀಯಂಗಳನ್ನು ಪ್ರಶ್ನಿಸುವ, ವಿರೋಧಿಸುವ, ಇರಾದೆಯನ್ನು ರಾಜ್ಯ ಕಾಂಗ್ರೆಸ್ ನಾಯಕರು ಮೈಗೂಡಿಸಿಕೊಂಡ ಉದಾಹರಣೆಗಳು ಬಹಳ ಕಡಿಮೆ. ಹೊಸ ಸರ್ಕಾರ ಬಂದ ಮೇಲೂ ಇದು ನಾನಾರೀತಿಯಲ್ಲಿ ವ್ಯಕ್ತಗೊಳ್ಳುತ್ತಲೇ ಹೋಗುತ್ತಿದೆ. ಧುಂಢಿ ಕಾದಂಬರಿ ವಿವಾದವೆದ್ದಾಗ ಕಾಂಗ್ರೆಸ್ ಸರ್ಕಾರ ಕೋಮುವಾದಿಗಳ ಪರವಾಗೇ ವರ್ತಿಸಿತು. ಅನಂತಮೂರ್ತಿಯವರು ಗೋಮಾಂಸದ ವಿಚಾರ ಪ್ರಸ್ತಾಪಿಸಿದಾಗ ಒಂದು ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಏನನ್ನೂ ಹೇಳಲಿಲ್ಲ ಅಥವಾ ಹಿಂದೂತ್ವವಾದಿಗಳ ವಿರುದ್ಧ ನಿಲ್ಲಲಿಲ್ಲ. ಇತ್ತೀಚೆಗೆ ಜೇವರ್ಗಿಯಲ್ಲಿ ನಡೆದ ರಂಭಾಪುರಿ ಸ್ವಾಮಿಯ ಅಡ್ಡಪಲ್ಲಕ್ಕಿ ಮೆರವಣಿಗೆ ವಿವಾದದಲ್ಲೂ ಕಾಂಗ್ರೆಸ್ ಸರ್ಕಾರ ಪ್ರಜಾಸತ್ತಾತ್ಮಕ ನಿಲುವು ತಳೆಯುವ ಬದಲಿಗೆ 'ಅಂದಿರಿಕಿ ಮಂಚಿವಾಡು' ನಿಲುವು ತಳೆಯಿತು. ಈಗ ಕಾಂಗ್ರೆಸ್ಸಿಗರ ಎಡಬಿಡಂಗಿ ನಿಲುವು ಮತ್ತೊಮ್ಮೆ ಬಯಲಾಗುತ್ತಿರುವುದು ಧರ್ಮಸ್ಥಳದಲ್ಲಿ ನಡೆದ ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ. ಮಣಿಪಾಲದಲ್ಲಿ ನಡೆದ ವಿದ್ಯಾರ್ಥಿನಿಯೋರ್ವಳ ರೇಪ್‌ಕೇಸನ್ನು ಕೇವಲ ನಾಲ್ಕು ದಿನದಲ್ಲಿ ಪತ್ತೆಹಚ್ಚಿದ ಪೊಲೀಸರಿಗೆ ಸೌಜನ್ಯ ಹತ್ಯೆಯಾಗಿ ಒಂದು ವರ್ಷವಾದರೂ ತನಿಖೆ ಮುಗಿಸಿ ಆರೋಪಿಗಳನ್ನು ಬಂಧಿಸಲಾಗಲಿಲ್ಲವೆಂದರೆ ಏನನ್ನಬೇಕು?

ಸಹಜವಾಗಿಯೇ ಇದು ಜನರಲ್ಲಿ ಆಕ್ರೋಶ ಹುಟ್ಟಿಸಿದೆ. ಧರ್ಮಸ್ಥಳದಲ್ಲಿರುವ ಸಮಾಜಕಂಟಕರ ಗುಂಪೊಂದು ಅನೇಕ ವರ್ಷಗಳಿಂದ ಕೊಲೆ, ಅತ್ಯಾಚಾರಗಳನ್ನು ನಡೆಸಿಕೊಂಡು ಬರುತ್ತಿದೆ. ಕಳೆದ ಆರೆಂಟು ವರ್ಷಗಳಲ್ಲಿ ಧರ್ಮಸ್ಥಳದಲ್ಲೇ 462 ಅಸಹಜ ಸಾವುಗಳು ಸಂಭವಿಸಿರುವ ಬಗ್ಗೆ ಪೊಲೀಸ್ ದಾಖಲೆಗಳೇ ಹೇಳುತ್ತಿದೆ. ಸರ್ಕಾರ ಹಾಗೂ ಪೊಲೀಸರು ಈ ಅಸಹಜ ಘಟನೆಗಳ ಕೂಲಂಕುಶ ತನಿಖೆ ನಡೆಸುವ ಬದಲಾಗಿ ಕಾಂಗ್ರೆಸ್ ಮಂತ್ರಿಗಳು ಕಾನೂನನ್ನು ಉಲ್ಲಂಘಿಸುತ್ತಿರುವ ಪಟ್ಟಭದ್ರರ ಪರವಾಗಿ ದನಿಗೂಡಿಸುತ್ತಿದ್ದಾರೆ. ಬಿ.ಎಲ್. ಶಂಕರ್, ಅಭಯಚಂದ್ರ ಜೈನ್, ವಿನಯ್ ಕುಮಾರ್ ಸೊರಕೆ ಮುಂತಾದ ಕಾಂಗ್ರೆಸ್ ನಾಯಕರಿಗೆ ಈ ನೆಲದ ಕಾನೂನು, ನ್ಯಾಯಕ್ಕಿಂತ ಯಾರೋ ಧಾರ್ಮಿಕ ಮುಖಂಡರ ಮರ್ಯಾದೆಯೇ ಮುಖ್ಯವಾಗಿ ಹೋಗಿದೆಯೆಂದರೆ ಜನ ಈಗ ಯಾರನ್ನು ನಂಬಬೇಕು?



ಬಿ.ಎಲ್.ಶಂಕರ್

ಒಂದು ಸರ್ಕಾರದ ಸಚಿವ, ಶಾಸಕರುಗಳೇ ದೌರ್ಜನ್ಯ ನಡೆಸುವವರ ಪರವಾಗಿ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸುವವರ ಪರವಾಗಿ ನಿಂತರೆ ಪೊಲೀಸರು ಧೈರ್ಯವಾಗಿ, ನಿಷ್ಪಕ್ಷಪಾತವಾಗಿ ತನಿಖೆ ನಡೆಸುವುದು ಸಾಧ್ಯವೆ?

ಅದು ಸೌಜನ್ಯಳ ಕೊಲೆ ವಿಚಾರವಿರಲಿ ಅಥವಾ ಸಾವಿರಾರು ಎಕರೆಯ ಅಕ್ರಮ ಭೂಮಾಲೀಕತ್ವದ ವಿಚಾರವಾಗಲಿ ಅವುಗಳ ಸರಿತಪ್ಪುಗಳು ತೀರ್ಮಾನವಾಗಬೇಕಿರುವುದು ಕಾನೂನಿನ ಚೌಕಟ್ಟಿನಲ್ಲೇ ವಿನಃ ಪಟ್ಟಭದ್ರರಿಗೆ ಬೆಂಬಲ ಕೊಡುವ ಮೂಲಕ ಅಲ್ಲ.

ಕರ್ನಾಟಕದ ಜನಸಾಮಾನ್ಯರು ಕಾಂಗ್ರೆಸ್‌ನವರ ಈ ಅವಕಾಶವಾದಿ ಹಾಗೂ ಕೋಮುವಾದಿ ಕೆಲಸಗಳನ್ನು ಅರ್ಥಮಾಡಿಕೊಳ್ಳಲಾಗದಷ್ಟು ದಡ್ಡರಲ್ಲ.

ಕಾಂಗ್ರೆಸ್‌ನವರಿಗೆ ಇದು ಬೇಗ ಅರ್ಥವಾದರೆ ಉತ್ತಮ. ■

"ನೀವು ಒಳ್ಳೆಯ ನಟ" ಅಂದೆ, "ಅದು ನನ್ ತಪ್ಪಲ್ಲ" ಅಂದರು

ಇದನ್ನು ಸ್ವಲ್ಪ ಸಿಟ್ಟು, ಬೇಸರದಲ್ಲೇ ಬರೆಯಬೇಕಾಗಿದೆ. ಕಳೆದ ವಾರ, ನಾನು ಬೆಳೆದಿದ್ದ ಟೊಮೊಟೊ ಹಾಗೂ ಚೆಂಡು ಹೂವನ್ನು ಅರ್ಜೆಂಟಾಗಿ ಮಾರ್ಕೆಟ್‌ಗೆ ಸಾಗಿಸಬೇಕಿತ್ತಾದ್ದರಿಂದ ಬೆಳಿದಾಳೆಗೆ ಹೊರಟಿದ್ದೆ. ದಾರಿಯ ಖರ್ಚಿಗೆ (ಸಮಯ ಕಳೆಯಲು) ಯಾರು ಜೊತೆ ಸಿಗಬಹುದೆಂದು ಹುಡುಕಾಡುತ್ತಿದ್ದಾಗ ಯೋಗೇಶ್ ಮಾಸ್ಟರ್ ನಾನು ಬರುತ್ತೇನೆಂದರು, ಹೊರಟೆವು.

ಹಳ್ಳಿ ತಲುಪಿದ ಅರ್ಧ ಗಂಟೆಯಲ್ಲೇ ಅಲ್ಲಿ ಚಿಕ್ಕ ಪುಟ್ಟ ಮಕ್ಕಳಿಗೆ ಒಂದು ಹಾಡು, ಡ್ಯಾನ್ಸ್ ಕಲಿಸಿ, ನಮ್ಮೊಂದಿಗೆ ಟೊಮೊಟೊ ಕಿತ್ತು, ಚೀಲಕ್ಕೆ ತುಂಬಿಸಿ ನೆರವಾದ ಯೋಗೇಶ್‌ರ ವ್ಯಕ್ತಿಗತ ವಿಚಾರಗಳನ್ನು ನನಗೆ ತಿಳಿಯಲು ಸಾಧ್ಯವಾಗಿದ್ದು ಅವತ್ತೆ. ಚಿಕ್ಕಷ್ಟು ಹಣ್ಣು-ಹೂ ಗಾಡಿಗೆ ತುಂಬಿಕೊಂಡು ವಾಪಸ್ ಬರುತ್ತಿರುವಾಗ ನಾನು "ನಿಮ್ಮದು ಎಷ್ಟು ಪುಸ್ತಕ ಪ್ರಕಟವಾಗಿದೆ?" ಅಂತ ಕೇಳಿದೆ. "ಧುಂಢಿ ಏಳನೆಯ ಪುಸ್ತಕ" ಅಂದರು. ಅವರ "ಶ್ರೀಮತಿ ಜಾನಕಿರಾಂ" ಎಂಬ ಅಪ್ರಕಟಿತ ಆಧುನಿಕ ರಾಮಾಯಣ ನಾಟಕವನ್ನು ನಾನು ಓದಿದ್ದೆ. "ಪ್ಯಾರೇ ಪಾಕ್" ಎಂಬ ಇನ್ನೊಂದು ಹೊಸ ಅಪ್ರಕಟಿತ ಕಾದಂಬರಿಯೊಂದನ್ನು ಓದಲು ನನಗೆ ಯೋಗೇಶ್ ಕೊಟ್ಟಿದ್ದಾರೆ. ಇದು 18, 19 ಹಾಗೂ 20ನೇ ಶತಮಾನದಲ್ಲಿ ಘಟಿಸುವ ಮೂರು ವಿಭಿನ್ನ ಪ್ರೇಮಕಥಾನಕವು. ನಾನು ಇವನ್ನೆಲ್ಲ ಲೆಕ್ಕ ಹಾಕುತ್ತಾ

"ನೀವು ಒಟ್ಟು ಎಷ್ಟು ಪುಸ್ತಕ ಬರೆದಿದ್ದೀರಿ?" ಅಂತ ಕೇಳಿದೆ. ಅದಕ್ಕೆ ಯೋಗೇಶ್ ಕೊಟ್ಟ ಉತ್ತರ ಕೇಳಿ ನಾನು ಕಾರ್ ನಿಲ್ಲಿಸಿ ಐದು ನಿಮಿಷ ಸುಧಾರಿಸಿಕೊಳ್ಳಬೇಕಾಗಿ ಬಂತು.

ಮೂವತ್ತು ನಾಟಕಗಳು!

ನೂರಾ ಅರವತ್ತು ಕಾದಂಬರಿಗಳು!!

ಸಾವಿರದ ಐನೂರಕ್ಕೂ ಹೆಚ್ಚು ಕವಿತೆಗಳು!!!

–ಇದು ಯೋಗೇಶ್ ಮಾಸ್ಟರ್‌ರ ಕಳೆದ ಇಪ್ಪತ್ತು ವರ್ಷಗಳ ಬರವಣಿಗೆಯ ಒಟ್ಟು ಮೊತ್ತ!

ಒಂದು ಪದ್ಯ ಬರೆದ ತಕ್ಷಣ ಅದನ್ನು ಇಂಗ್ಲಿಷ್, ಸ್ಪಾನಿಶ್, ಫ್ರೆಂಚ್ ಭಾಷೆಗೆಲ್ಲಾ ಅನುವಾದ ಮಾಡಿಸಿ ಸಂಭ್ರಮಿಸುವ ಜನರ ಮಧ್ಯೆ ನೂರಾರು ಕಾದಂಬರಿ ಬರೆದೂ ಅವನ್ನು ಪ್ರಕಟಿಸುವ ಆಸಕ್ತಿಯನ್ನೇ ತೋರಿಸದಿದ್ದ ಯೋಗೇಶ್ ಬಗ್ಗೆಯೇ ನನಗೆ ಬೇಸರ ಎನಿಸಿತು. ಇದಕ್ಕೆ ಕಾರಣಗಳೇನೇ ಇರಬಹುದು. ನಾನು


"ನಿಮ್ಮ ಧುಂಢಿಗೆ ಕೋಮುವಾದಿಗಳು ನಿಷೇಧ ಹಾಕಿಸಿದರು. ಆದರೆ ಉಳಿದ ಪುಸ್ತಕಗಳಿಗೆ ನೀವೇ ಸ್ವಯಂನಿಷೇಧ ಹಾಕಿಕೊಂಡಿದ್ದೀರಿ" ಅಂತ ಗೇಲಿ ಮಾಡಿದೆ.

ಸಂಕೋಚ, ಸೀಮಿತ ಓಡನಾಟ ಇತ್ಯಾದಿ ಕಾರಣದಿಂದಾಗಿ ಪುಸ್ತಕ ಪ್ರಕಟಿಸಲಾಗಲಿಲ್ಲ ಎಂದರು ಯೋಗೇಶ್. ಆದರೆ ಒಬ್ಬ ಬರಹಗಾರ, ಕ್ರೀಡಾಪಟು ಅಥವಾ ಕಲಾವಿದರಾದವರು ತಮ್ಮ ಕೆರಿಯರ್ ಕುರಿತಂತೆ ಸರಿಯಾಗಿ plan ಮಾಡಿಕೊಳ್ಳದಿದ್ದರೆ ಸಮಯ ಯಾರಿಗೂ ಕಾಯುವುದಿಲ್ಲ, ಇದರರ್ಥ ನಾವು carreerist ಆಗಿರಬೇಕೆಂದಲ್ಲ ಆದರೆ ನಮಗೆ ಸಿಗಬಹುದಾದ ಕಾಲಾವಕಾಶ, ಇರುವ ಸಾಮರ್ಥ್ಯ, ಸಾಧ್ಯತೆಗಳನ್ನು ಸರಿಯಾಗಿ ಅಂದಾಜು ಮಾಡಿಕೊಳ್ಳದೆ ಹೋದರೆ, ಅವೆಲ್ಲವನ್ನು ಸರಿಯಾದ ದಿಕ್ಕಿನತ್ತ channalise ಮಾಡಿಕೊಳ್ಳದೆ ಹೋದರೆ ಯಾವ ಕ್ಷೇತ್ರದಲ್ಲೂ ಏನನ್ನೂ ಸಾಧಿಸಲಾಗುವುದಿಲ್ಲ.



ಬಿಳಿದಾಳೆಯ ಮಕ್ಕಳೊಂದಿಗೆ ನಾಟಕಕಾರ ಯೋಗೇಶ್ ಮಾಸ್ಟರ್

ಅಂತಹ 'ಹಾದಿ'ಯನ್ನು ಖಚಿತ ಮಾಡಿಕೊಂಡು ದೃಢ ನಿರ್ಧಾರದೊಂದಿಗೆ ಮುಂದೆ ಸಾಗುವಾಗ ಏಳು-ಬೀಳು, ಮೆಚ್ಚುಗೆ-ನಿಂದನೆ, ಸೂಕ್ತ ಅವಕಾಶ ಸಿಗುವುದು-ಸಿಗದಿರುವುದು, ಹಾಗೆ ಸಿಗುವ ಅವಕಾಶವನ್ನು ಸರಿಯಾಗಿ ಬಳಸುವುದು ಅಥವಾ ಬಳಸದೆ ಹೋಗುವುದೆಲ್ಲಾ ಘಟಿಸುತ್ತಿರುತ್ತವೆ. ಒಟ್ಟಿನಲ್ಲಿ ಬದುಕು ನಿಂತ ನೀರಾಗದೆ ಚಲಿಸುತ್ತಿರುತ್ತದೆ.



ನಟ ಕಿಶೋರ್

ತೇಜಸ್ವಿ ತೀರಿಕೊಳ್ಳುವ ಕೆಲ ತಿಂಗಳ ಹಿಂದೆ ವಿಮರ್ಶಕ ಜಿ.ಎಚ್. ನಾಯಕರೊಂದಿಗೆ ಮಾತನಾಡುತ್ತಾ "ನಾನು ಕತೆಗಾರನಾಗದೆ, ಯಾವುದೋ ಯುನಿವರ್ಸಿಟಿಯಲ್ಲಿ ಮೇಷ್ಟ್ರಾಗಿ ಏನೂ ಮಾಡದೆ, ಬರೆಯದೆ ಇದ್ದುಬಿಟ್ಟಿದಿದ್ದರೆ ನಿಮಗೆ ನನ್ ಬಗ್ಗೆ ಜಿಗುಪ್ಸೆ ಬರ್ತಿರಲಿಲ್ಲವಾ?" ಅಂದಿದ್ದರಂತೆ.

'ಕಾಂಜೀವರಂ' ಸಿನಿಮಾ ಬೆಂಗಳೂರಿಗೆ ಬಂದಾಗ ನಾವೆಲ್ಲಾ ನೋಡಿ ಬಂದೆವು. ಪ್ರಕಾಶ್ ರೈಗೆ ಅತ್ಯುತ್ತಮ ನಟ ನ್ಯಾಷನಲ್ ಅವಾರ್ಡ್ ತಂದುಕೊಟ್ಟ ಸಿನಿಮಾ ಅದು. ಅವತ್ತು ರಾತ್ರಿ ನಮ್ಮೊಂದಿಗೆ ಹರಟೆಗೆ ಸಿಕ್ಕ ರೈ "ನಾನು ಇನ್ನೂ ಇಪ್ಪತ್ತು ವರ್ಷ ಸಿನಿಮಾದಲ್ಲೇ ಇದ್ದರೂ ಕೂಡ ನನಗಿದ್ದ ಒಟ್ಟು potential ನಲ್ಲಿ ಕಾಲುಭಾಗ ಬಳಕೆಯಾಗಬಹುದೆನಿಸುತ್ತೆ" ಅಂದಿದ್ದರು. ಆ ಮಾತಿನ ಅರ್ಥವಿಷ್ಟೆ. ರೈ ಸಿನಿಮಾ ಕೆರಿಯರ್ ಕೊಂಚ ತಡವಾಗಿ ಶುರುವಾಗಿತ್ತು, ಕನ್ನಡ ಸಿನಿಮಾ ಜನರಿಗೆ ಪ್ರಕಾಶ್ ರೈಗಿದ್ದ ನಟನಾ ಪ್ರತಿಭೆ ಅರ್ಥವೇ ಆಗಿರಲಿಲ್ಲ, ಇಲ್ಲಿ ಅವಕಾಶಕ್ಕಾಗಿ ಅಲೆಯುತ್ತಾ ಕೆಲವು ವರ್ಷ ವ್ಯರ್ಥವಾದರೆ, ನಂತರ ತಮಿಳಿನಲ್ಲಿ ಕಾಲೂರಿ ಲೈಮ್‌ಲೈಟ್‌ಗೆ ಬರಲು ಇನ್ನು ಸ್ವಲ್ಪ ವರ್ಷಗಳು ಕಳೆದುಹೋದವು. ಆಮೇಲೂ ಅವರಿಗೆ ಸಿಕ್ಕಿದ್ದು ವಿಲನ್ ಪಾತ್ರಗಳೆ. ಆದರೆ ರೈ ಒಳಗಿದ್ದ ಕಲಾವಿದ, ಸ್ವಂತದ ಸಿನಿಮಾ ನಿರ್ಮಾಣಕ್ಕಿಳಿದು, ಸವಾಲೆನಿಸುವ ಪಾತ್ರಗಳನ್ನು ಮಾಡುತ್ತಾ, ಮೆಚ್ಚುಗೆ, ಪ್ರಶಸ್ತಿಗಳನ್ನು ಪಡೆಯುತ್ತಾ ಸಾಗುತ್ತಿದ್ದಾನೆ.

ಏನನ್ನಾದರೂ ಸಾಧಿಸಬೇಕೆಂದುಕೊಳ್ಳುವವರು ಸರಿಯಾದ ಸಮಯದಲ್ಲಿ ಸೂಕ್ತವಾದ ಸ್ಥಳದಲ್ಲಿ ಇರಬೇಕಾದ್ದು ಇದಕ್ಕೆ ಬಹಳ ಮುಖ್ಯ.

2013ರ ಹೊಸವರ್ಷ ಸ್ವಾಗತಿಸಲು ನಾವೊಂದಿಷ್ಟು ಗೆಳೆಯರು 'ಶಿಷ್ಯ' ಸಿನಿಮಾ ನಿರ್ದೇಶಕ ಮಧು ಮಳಲಿಯವರ ಮನೆಯಲ್ಲಿ ಸೇರಿದ್ದೆವು. ಅವತ್ತು ನಟ ಕಿಶೋರ್ ಕೂಡಾ ಇದ್ದರು. ನನ್ನ ಮೆಚ್ಚಿನ ನಟ ಈ ಕಿಶೋರ್. ಅವತ್ತು ಕೊಂಚ sober ಮೂಡ್‌ನಲ್ಲಿದ್ದಂತೆ ಕಂಡ ಕಿಶೋರ್ ಜೊತೆ ಅದೂ ಇದೂ ಹರಟುತ್ತಾ "ನಮ್ಮನೇಲಿ ಎಲ್ರಿಗೂ ಕಿಶೋರ್ ಇಷ್ಟ, ನನಗೂ ನೀವು ಮೆಚ್ಚಿನ ನಟ" ಅಂದೆ.

ಕಿಶೋರ್ ಮೆಲುದನಿಯಲ್ಲಿ "ಅದು ನನ್ ತಪ್ಪಲ್ಲ" ಅಂದರು. ಅವರ ಮಾತಿಗೆ ಇಡೀ ಗುಂಪು ನಕ್ಕಿತಾದರೂ ಕಿಶೋರ್ ದನಿಯಲ್ಲಿ ಕೊಂಚ ವಿಷಾದ, ಬೇಸರ ಧ್ವನಿಸಿದಂತೆ ನನಗೆನ್ನಿಸಿತು. ಬಹುಶಃ ಅವರ ಸಿನಿಮಾ ಕೆರಿಯರ್ ಸಹ ಕೊನೆಯಿರದ ಕಾಯುವಿಕೆಗಳನ್ನೆಲ್ಲಾ ಹಾದು ಬಂದಿರಲಿಕ್ಕೂ ಸಾಕು. ಒಂದು ದಶಕದ ಹಿಂದೆಯೇ ತೆರೆಯ ಮೇಲೆ ಮಿಂಚಬೇಕಿದ್ದ ಕಿಶೋರ್ ಸ್ವಲ್ಪ ತಡವಾದರೂ ತಾನೊಬ್ಬ ಅದ್ಭುತ ನಟ ಎಂಬುದನ್ನು ಮತ್ತೆಮತ್ತೆ ಸಾಬೀತುಮಾಡುತ್ತಲೇ ಬರುತ್ತಿದ್ದಾರೆ.

ಅವರ 'ಜಟ್ಟ' ಸಿನಿಮಾ ಇದಕ್ಕೆ ಇನ್ನೊಂದು ಸಾಕ್ಷಿಯಂತಿದೆ. ನಿರ್ದೇಶಕ ಗಿರಿರಾಜ್ ಒಳ್ಳೆಯ ಪ್ರಯತ್ನ ಮಾಡಿದ್ದಾರೆ. ಕೊಂಚ ವಾಚ್ಯ ಅನಿಸಿದರೂ ಒಮ್ಮೆ ನೋಡಬೇಕಾದ ಸಿನಿಮಾ ಇದು. ಗೆಳೆಯ ಯೋಗೇಶ್ ಮಾಸ್ಟರ್ ಕತೆ-ಕಾದಂಬರಿ ಬರೆದು ಅವಿತಿಡುವ ಬದಲಿಗೆ ಅವುಗಳಲ್ಲಿ ಕೆಲವನ್ನಾದರೂ ಪುಸ್ತಕ ರೂಪದಲ್ಲಿ ಪ್ರಕಟಿಸುವ ಬಗ್ಗೆ ಯೋಚಿಸಲಿ ಅಂತ ಸೂಚಿಸಲು ಇಷ್ಟೆಲ್ಲಾ ಹರಟಬೇಕಾಯಿತು.


ಕಾಲ ಯಾರಿಗೂ ಕಾಯುವುದಿಲ್ಲ... ಅಲ್ಲವೆ? ■

58 ದಲಿತರು ಕೊಲೆಯಾದದ್ದು ನಿಜ, ಆದರೆ ಯಾರೂ ಅವರನ್ನು ಕೊಲ್ಲಲಿಲ್ಲ! - ಹೀಗೊಂದು ತೀರ್ಪು



• ಗೌರಿ ಲಂಕೇಶ್
editorlankesh@gmail.com

"ಇತ್ತೀಚಿಗೆ ನ್ಯಾಯಾಲಯವೊಂದು ಇಂತಹ ತೀರ್ಪನ್ನು ನೀಡಿದ್ದು ಎಲ್ಲೂ ಹೆಚ್ಚು ಸುದ್ದಿಯಾಗಲಿಲ್ಲ. ಅದಕ್ಕೆ ಕಾರಣ ಕೊಲೆಯಾದವರು ಅಸಹಾಯಕ ದಲಿತರಾಗಿದ್ದಿರಬಹುದು ಅಥವಾ ಈ ತೀರ್ಪು ಹೊರಬಿದ್ದ ವೇಳೆಯಲ್ಲೇ 'ದೇವರೇ' ಕ್ರಿಕೆಟ್ ಆಟದಿಂದ ನಿವೃತ್ತಿ ಘೋಷಿಸಿದ್ದರಿಂದ ದೇಶದ ಪ್ರಮುಖ ಮಾಧ್ಯಮಗಳು ಆ ಬಗ್ಗೆ ರೋದಿಸುವುದರಲ್ಲೇ ಮಗ್ನವಾಗಿದ್ದರಿಂದ ಅವುಗಳ ಗಮನ ಬಡ ದಲಿತರ ವೇದನೆಯತ್ತ ತಿರುಗಲಿಲ್ಲ!



ದಲಿತರ ಮಾರಣಹೋಮದ ಬಗ್ಗೆ ಹಲವು ವಿವರಣೆಗಳನ್ನು ನೀಡಿದರೆ ಅದೆಷ್ಟು ಭೀಕರವಾಗಿತ್ತು ಎಂದೂ, ಅದರ ಬಗ್ಗೆ ಈಗ ಹೊರಬಿದ್ದಿರುವ ತೀರ್ಪು ಎಂತಹದ್ದು ಎಂದೂ ಓದುಗರಿಗೆ ಅರ್ಥವಾಗುತ್ತದೆ.

ಇದು ನಡೆದದ್ದು ಬಿಹಾರ್ ರಾಜ್ಯದಲ್ಲಿ, ರಾಜಧಾನಿ ಪಾಟ್ನಾದಿಂದ ಕೇವಲ ಹತ್ತು ಕಿಲೋಮೀಟರ್ ದೂರದಲ್ಲಿರುವ ಲಕ್ಷಮನ್‌ಪುರ್ ಬಾಥೆ ಎಂಬ ಹಳ್ಳಿಯಲ್ಲಿ. ಆ ಹಳ್ಳಿಯ ಭೂರಹಿತ ದಲಿತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಪ್ರಾರಂಭಿಸಿದ್ದರು. ಅದಕ್ಕೆ ಸ್ಪಂದಿಸಿದ ಆಗಿನ ರಬ್ರಿ ದೇವಿ ಸರ್ಕಾರ ಆ ಹಳ್ಳಿಯ ಭೂರಹಿತ ದಲಿತರಿಗೆ ಹಂಚಲು 50 ಎಕರೆ ಭೂಮಿಯನ್ನು ಗುರುತಿಸಿತ್ತು. ಇದು ಅಲ್ಲಿನ ಭೂಮಾಲಿಕ ಮತ್ತು ಮೇಲುವರ್ಗದ ಭೂಮಿಹಾರ್ ಸಮುದಾಯವನ್ನು ಕಂಗೆಡಿಸಿತ್ತು. ದಲಿತರಿಗೆ ಭೂಮಿ ನೀಡಿದರೆ ಅವರು ಇನ್ನು ಮುಂದೆ ತಮ್ಮ ಹೊಲಗಳಲ್ಲಿ ಕೆಲಸಕ್ಕೆ ಬರುವುದಿಲ್ಲ, ಮಾತ್ರವಲ್ಲ ಅವರು ಭೂಮಿಯ ಒಡೆಯರಾದರೆ ಅವರ ಮೇಲಿನ ತಮ್ಮ ಪಾರಂಪರಿಕ ಹತೋಟಿ ಉಳಿಯುವುದಿಲ್ಲ ಎಂದು ಭೂಮಿಹಾರ್‌ಗಳು ಕೆಂಡಮಂಡಲವಾದರು. ಆಗ ಅವರೆಲ್ಲ ರಣವೀರ ಸೇನೆ ಎಂಬ ಸಂಘಟನೆಯನ್ನು ಕಟ್ಟಿಕೊಂಡು ದಲಿತರಿಗೆ 'ಪಾಠ' ಹೇಳಲು ನಿರ್ಧರಿಸಿದರು. ಆ ನಿರ್ಧಾರವೇ ಲಕ್ಷಮನ್‌ಪುರ್ ಬಾಥೆಯಲ್ಲಿ ದಲಿತರ ಮಾರಣಹೋಮಕ್ಕೆ ಕಾರಣವಾಯಿತು.

ಅದು 1997ರ ಡಿಸೆಂಬರ್ 1ರ ರಾತ್ರಿ. ಅವತ್ತು ನೂರಾರು ಸಂಖ್ಯೆಯಲ್ಲಿ ಲಕ್ಷಮನ್‌ಪುರ್ ಬಾಥೆ ಹಳ್ಳಿಗೆ ನುಗ್ಗಿದ ಶಸ್ತ್ರಸನ್ನದ್ಧರಾದ ರಣವೀರ ಸೇನೆಯ ಸದಸ್ಯರು ದಲಿತರ ಮನೆಗಳ ಮೇಲೆ ದಾಳಿ ಇಟ್ಟರು. ದಾಳಿಗೆ ಬೆಚ್ಚಿದ ಪುರುಷರು ಓಡಿಹೋಗಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳೇ ಬಲಿಯಾದರು.

ಒಂದೆರಡು ಗಂಟೆಗಳಲ್ಲಿ ಒಟ್ಟು 58 ದಲಿತರ ಹೆಣಗಳು ಉರುಳಿದ್ದವು. ಸತ್ತವರಲ್ಲಿ 18 ಪುರುಷರು, 27 ಮಹಿಳೆಯರು ಮತ್ತು 16 ಮಕ್ಕಳಿದ್ದರು. ಆ ಮಕ್ಕಳಲ್ಲಿ ಒಂದು ವರ್ಷದ ಅನಿತಾ ಎಂಬ ಕೈಗೂಸೂ ಇತ್ತು. ಹಾಗೆಯೇ ಮಡಿದ ಮಹಿಳೆಯರಲ್ಲಿ ಐವರು ಗರ್ಭವತಿಯರಾಗಿದ್ದರು. ಅವರ ಹೊಟ್ಟೆಗಳನ್ನು ಸೀಳಿ ಭ್ರೂಣವನ್ನು ಹೊರಗೆಳೆಯಲಾಗಿತ್ತು. ಅವತ್ತು ಮಡಿದವರಲ್ಲಿ ಐವರು 15 ವಯಸ್ಸು ದಾಟದ ಹೆಣ್ಣುಮಕ್ಕಳಿದ್ದರು. ಅವರೆಲ್ಲರ ಮೇಲೆ ಲೈಂಗಿಕ ದಾಳಿ ಮಾಡಲಾಗಿತ್ತಲ್ಲದೆ, ಆನಂತರ ಅವರ ಸ್ತನಗಳನ್ನು ಕತ್ತರಿಸಿಹಾಕಿದ್ದರು.

ಇದು ನಡೆದಾಗ ರಾಷ್ಟ್ರಪತಿಯಾಗಿದ್ದ ಕೆ.ಆರ್.ನಾರಾಯಣನ್ ಅವರು ಇದನ್ನು 'ರಾಷ್ಟ್ರವೇ ಅವಮಾನದಿಂದ ತಲೆತಗ್ಗಿಸುವಂತಹ ಕೃತ್ಯ' ಎಂದು ಹೇಳಿದ್ದರು.

ಈ ಮಾರಣಹೋಮಕ್ಕೆ ಹಲವಾರು ಪ್ರತ್ಯಕ್ಷ ದರ್ಶಿಗಳಿದ್ದು ಪೊಲೀಸರು ರಣವೀರ ಸೇನೆಯ 26 ಜನರನ್ನು ಬಂಧಿಸಿದ್ದರು. 2010ರಲ್ಲಿ ಪಾಟ್ನಾ ಸಿವಿಲ್ ನ್ಯಾಯಾಲಯ ಬಂಧಿತರಲ್ಲಿ 16 ಜನರಿಗೆ ಮರಣದಂಡನೆಯನ್ನು, 10 ಜನರಿಗೆ ಜೀವಾವಧಿ ಶಿಕ್ಷೆಯನ್ನೂ ನೀಡಿತ್ತು. ಆದರೆ ಮೊನ್ನೆ ಬಿಹಾರದ ಹೈಕೋರ್ಟ್ 'ಸೂಕ್ತ ಸಾಕ್ಷ್ಯಾಧಾರಗಳಿಲ್ಲ' ಎಂದು ಹೇಳಿ ಎಲ್ಲಾ 26 ಜನರನ್ನು ಖುಲಾಸೆಗೊಳಿಸಿದೆ.


ಇತ್ತೀಚೆಗೆ ಅಮಾಯಕರ ಮಾರಣ ಹೋಮಗಳನ್ನು ರಸ್ತೆ ಅಪಘಾತಗಳಿಗೆ ಹೋಲಿಕೆ ಮಾಡುವುದು ಕೆಲವರ ಅಭ್ಯಾಸವಾದಂತಿದೆ. ಇತ್ತೀಚಿಗೆ ಗುಜರಾತ್ ಕೋಮು ಗಲಭೆಯಲ್ಲಿ ಮಡಿದವರನ್ನು 'ಕಾರಿನ ಗಾಲಿಗಳಿಗೆ ಸಿಕ್ಕಿಕೊಂಡ ಕುನ್ನಿಗಳು' ಎಂದು ನರಹಂತಕ ನರೇಂದ್ರ ಮೋದಿ ವರ್ಣಿಸಿದ್ದು ಪ್ರಜ್ಞಾವಂತರ ಮನಸ್ಸಿನಲ್ಲಿ ಹಸಿಯಾಗಿರುವಾಗ ಬಿಹಾರ್ ಹೈಕೋರ್ಟಿನ ನ್ಯಾಯಮೂರ್ತಿಗಳು ಇಂತಹದ್ದೇ ಅಭಿಪ್ರಾಯವನ್ನು ಹೊಂದಿರುವುದು ಸೂಕ್ಷ್ಮ ಮನಸ್ಸಿನವರಿಗೆ ಘಾಸಿ ಮಾಡಿದೆ. ಯಾಕೆಂದರೆ '58 ದಲಿತರು ಕೊಲೆಯಾಗಿದ್ದು ನಿಜ. ಆದರೆ ಅವರನ್ನು ಯಾರೂ ಕೊಲ್ಲಲಿಲ್ಲ' ಎಂಬಂತಹ ತೀರ್ಪನ್ನು ನೀಡಿರುವ ನ್ಯಾಯಮೂರ್ತಿಗಳು 'ಈ ಪ್ರಕರಣದಲ್ಲಿ ಮಡಿದವರ ವಯಸ್ಸು, ಸಂಪಾದನೆಯ ಸಾಮರ್ಥ್ಯ ಇತ್ಯಾದಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಮೋಟಾರ್ ವೆಹಿಕಲ್ಸ್ ಆಕ್ಟ್ 1998ರ ಪ್ರಕಾರ ಪರಿಹಾರಧನವನ್ನು ಸರ್ಕಾರ ಕೊಡತಕ್ಕದ್ದು' ಎಂದು ಸೇರಿಸಿದ್ದಾರೆ. ಅಂದರೆ, ಸ್ಪಷ್ಟ ಉದ್ದೇಶದಿಂದ ಮಾಡಿದ ಈ ಮಾರಣಹೋಮವು ನ್ಯಾಯಾಲಯಕ್ಕೆ ಆಕಸ್ಮಿಕವಾಗಿ ಸಂಭವಿಸಿದ ರಸ್ತೆ ದುರಂತದಂತೆ ಕಂಡಿದೆ ಎಂದೇ ಹೇಳಬೇಕಾಗುತ್ತದಲ್ಲವೇ?

ಈ ತೀರ್ಪು ಹೊರಬಿದ್ದನಂತರ ಭೂಮಿಹಾರರ ಮನೆಗಳಲ್ಲಿ ಸಿಹಿ ಹಂಚುವುದು, ಗುಂಡು ಹಾರಿಸಿ ಸಂಭ್ರಮಿಸುವುದು, ಇತ್ಯಾದಿಗಳು ನಡೆಯುತ್ತಿದ್ದರೆ ದಲಿತರ ಮನೆಗಳಲ್ಲಿ ಭಯಭೀತಿ ಮಡುಗಟ್ಟಿದೆ.

ರಣವೀರ ಸೇನೆ ನಡೆಸಿದ ದಾಳಿಯಲ್ಲಿ ತನ್ನ ಸಂಸಾರದ ಮೂವರನ್ನು ಕಳೆದುಕೊಂಡ ಮತ್ತು ನ್ಯಾಯಾಲಯದ ಮುಂದೆ ಸಾಕ್ಷಿ ನೀಡಿದ್ದ 67 ವರ್ಷ ವಯಸ್ಸಿನ ಲಕ್ಷ್ಮಣ್ ರಾಜವಂಶಿ ಎಂಬ ದಲಿತ "ಬಡವರನ್ನು ರಕ್ಷಿಸಲು ಯಾವ ಕಾನೂನು ಇಲ್ಲ, ಸರ್ಕಾರ, ನ್ಯಾಯಾಲಯ ಮತ್ತು ಆಡಳಿತ ವ್ಯವಸ್ಥೆ ಎಲ್ಲವೂ ಜೊತೆಗೂಡಿ ನಮ್ಮನ್ನು ಕಸಕ್ಕಿಂತ ಕೀಳಾಗಿ ಪರಿಗಣಿಸಿವೆ" ಎಂದು ಕಣ್ಣೀರಿಡುತ್ತಿದ್ದಾರೆ.

ಕಿಸ್ಕಾ ಭಾರತ್ ಮಹಾನ್ ಹೈ!? ■

ಕಾಡುವ ಚಿತ್ರ 'ಜಟ್ಟ'



ಮಂಗಳವಾರ ರಾತ್ರಿ 'ಜಟ್ಟ' ಎಂಬ ಕನ್ನಡ ಸಿನಿಮಾ ನೋಡಿದಾಗಿನಿಂದ ಅದು ನನ್ನನ್ನು ಬಿಟ್ಟೂಬಿಡದೆ ಕಾಡುತ್ತಿದೆ. ಆ ಚಿತ್ರದ ಒಂದು ದೃಶ್ಯ ಮನಸ್ಸಿನ ಮುಂದೆ ಸಾಗಿ ಅಂತ್ಯಗೊಳ್ಳುತ್ತಿದ್ದಂತೆ ಇನ್ನೊಂದು ದೃಶ್ಯ ಮನಸ್ಸನ್ನು ಆವರಿಸಿಕೊಳ್ಳುತ್ತಿದೆ. ಗುರುವಾರ ಈ ಸಂಚಿಕೆಯ ಕೆಲಸ ಮುಗಿಸಿದ ನಂತರ 'ಜಟ್ಟ'ನನ್ನು ಮತ್ತೊಮ್ಮೆ ನೋಡಬೇಕು ಎಂದುಕೊಳ್ಳುತ್ತಿರುವಾಗಲೇ ಬಾಕ್ಸ್ ಆಫೀಸಿನಲ್ಲಿ ಸಾಕಷ್ಟು ಕಲೆಕ್ಷನ್ ಇಲ್ಲ ಎಂಬ ಕಾರಣಕ್ಕೇ ಈ ಚಿತ್ರವನ್ನು ಚಿತ್ರಮಂದಿರಗಳಿಂದ ಎತ್ತಂಗಡಿ ಮಾಡಲಾಗುತ್ತಿದೆ ಎಂಬ ಸುದ್ದಿ ಬಂದಿದೆ. ನಮ್ಮ ಪತ್ರಿಕೆಯನ್ನಾದರೂ ಓದಿ ಹಲವು ಜನ ಈ ಚಿತ್ರವನ್ನು ನೋಡುವಂತಾಗಲಿ ಎಂಬ ಆಶೆ ಇದ್ದರೂ ಆ ಸಿನಿಮಾ ರಾಜ್ಯದ ಹಲವಾರು ಚಿತ್ರಮಂದಿರಗಳಿಂದ ಗುರುವಾರವೇ ಮಂಗಮಾಯವಾಗುವ ಸಾಧ್ಯತೆ ಇದೆ. ಇದೆಲ್ಲದರ ಮಧ್ಯೆಯೂ ಹಲವು ಊರುಗಳಲ್ಲಿ ಪ್ರದರ್ಶನದ ಭಾಗ್ಯ ಉಳಿಸಿಕೊಂಡಿದ್ದರೆ ಕನ್ನಡಿಗರು 'ಜಟ್ಟ'ನನ್ನು ನೋಡಬೇಕೆಂದು ಆಶಿಸುತ್ತೇನೆ.

ಅದಕ್ಕೆ ಕಾರಣ ಇದು ಕನ್ನಡದಲ್ಲಿ ಇತ್ತೀಚಿಗೆ ಬಂದಿರುವ ಉತ್ತಮ ಸಿನಿಮಾಗಳಲ್ಲಿ ಒಂದು ಎಂಬುದು. ಹಲವು ಮಿತಿಗಳ ನಡುವೆಯೂ ಈ ಚಿತ್ರದ ಕತೆ, ಸಂಭಾಷಣೆ, ನಟನೆ, ನಿರ್ದೇಶನ ಎಲ್ಲವೂ ಅದ್ಭುತವಾಗಿವೆ. ಇಂತಹ ಚಿತ್ರಗಳನ್ನು ಜನ ನೋಡದಿದ್ದರೆ, ಈ ಚಿತ್ರ ತಂಡದ ಪ್ರಯತ್ನಗಳನ್ನು ರಾಜ್ಯದ ಪ್ರಜ್ಞಾವಂತರು ಪ್ರೋತ್ಸಾಹಿಸದಿದ್ದರೆ ಮುಂದೆ ಇಂತಹ ಸಾಹಸಗಳನ್ನು ಮಾಡಲು ಯಾರೂ ಮುಂದಾಗುವುದಿಲ್ಲ ಮತ್ತು ಆ ಮೂಲಕ ನಮ್ಮ ಚಿತ್ರೋದ್ಯಮ ಅಕ್ಷರಮಟ್ಟಿಗೆ ನಷ್ಟವನ್ನು ಅನುಭವಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ 'ಜಟ್ಟ' ಕಾಡಿನಲ್ಲಿ ವಾಸಿಸುತ್ತಿರುವ ಓರ್ವ ಮನುಷ್ಯನ ಕತೆಯೂ ಹೌದು, ಆ ಮನುಷ್ಯನ ಹೃದಯದಲ್ಲಿ ಅಡಗಿರುವ ಕಾಡಿನ ಕತೆಯೂ ಹೌದು.

'ಜಟ್ಟ' ಚಿತ್ರದ ನಾಯಕನ ಹೆಸರು. ಅಮಾಯಕನಾದ ಜಟ್ಟ ಕಾಡನ್ನು ಪ್ರೀತಿಸುವ, ರಕ್ಷಿಸುವ ಪ್ರಾಮಾಣಿಕ ಫಾರೆಸ್ಟ್ ಗಾರ್ಡ್. ಆದರೆ ಆತನ ಪತ್ನಿ ಅವನನ್ನು ತೊರೆದು ಬೆಂಗಳೂರಿನ ಯುವ ಫೋಟೋಗ್ರಾಫರ್ ಒಬ್ಬನೊಂದಿಗೆ ಓಡಿಹೋಗಿದ್ದಾಳೆ. ಅದೇ ಹೊತ್ತಿಗೆ 'ಸಂಸ್ಕೃತಿ ರಕ್ಷಕರು' ಇಂತಹದ್ದಕ್ಕೆಲ್ಲ ಕಾರಣ ಪಾಶ್ಚಿಮಾತ್ಯ ಜೀವನ ಶೈಲಿ, ನಶಿಸುತ್ತಿರುವ ಭಾರತೀಯ ಸಂಸ್ಕೃತಿಯ ಎಂದೆಲ್ಲ ಬೊಬ್ಬೆಹೊಡೆಯುತ್ತಿರುತ್ತಾರೆ. ಅದನ್ನೆಲ್ಲ ಕೇಳಿ ಜಟ್ಟ ತನ್ನ ಹೆಂಡತಿ ಓಡಿಹೋಗಿದ್ದೂ ಇಂತಹದ್ದೇ ಪ್ರವೃತ್ತಿಗೆ ಬಲಿಯಾಗಿ ಎಂದು ನಂಬಿರುತ್ತಾನೆ. ಅವನ ಮನಸ್ಸಿನಲ್ಲಿ ಇಂತಹ ತಪ್ಪುಭಿಪ್ರಾಯಗಳ ಕಾಡೇ ಬೆಳೆದುನಿಂತಿರುತ್ತದೆ.

ಒಂದು ದಿನ ಓರ್ವ ಮಾಡರ್ನ್ ಯುವತಿ ಕುಡಿದ ಅಮಲಿನಲ್ಲಿ ಕಾಡಿನಲ್ಲಿ ಕಾರನ್ನು ಚಲಿಸುತ್ತಿರುವಾಗ ಅಪಘಾತ ಸಂಭವಿಸಿ ಮೂರ್ಛೆ ಹೋಗುತ್ತಾಳೆ. ನೀತಿಗೆಟ್ಟ, ಆಕೆಗೆ 'ಸರಿಯಾದ ಸಂಸ್ಕೃತಿ'ಯನ್ನು ಕಲಿಸಿ ಆಕೆಯನ್ನು 'ಸರಿ ದಾರಿ'ಗೆ ತರುವ ಉದ್ದೇಶದಿಂದ ಜಟ್ಟ ಅವಳನ್ನು ಅರಣ್ಯದ ಮಧ್ಯದಲ್ಲಿರುವ ತನ್ನ ನಿರ್ಜನ ಮನೆಯಲ್ಲಿ ಕಟ್ಟಿ ಹಾಕುತ್ತಾನೆ. ಆದರೆ ಆಕೆ ಸಾಮಾನ್ಯ ಯುವತಿಯಲ್ಲ, ಜಟ್ಟನನ್ನು ಮಾತಿನಲ್ಲೇ ಸೋಲಿಸಬಲ್ಲ 'ಜಟ್ಟಿ'ಯಾಕೆ. ಅವರಿಬ್ಬರ ನಡುವೆ ಸಂಸ್ಕೃತಿ, ಮಹಿಳೆಯರ ಹಕ್ಕು, ವೈಯಕ್ತಿಕ ಸ್ವಾತಂತ್ರ್ಯ, ಮನುಷ್ಯರ ನಡುವಿನ ಸಂಬಂಧದ ಸೂಕ್ಷ್ಮತೆ ಕುರಿತು ವಾಕ್‌ಯುದ್ಧಗಳೇ ಸಂಭವಿಸುತ್ತವೆ.

ಆ ಯುವತಿಯ ನಾಪತ್ತೆಯಿಂದಾಗಿ ಜಟ್ಟನ ಹಿರಿಯ ಅಧಿಕಾರಿಯಾದ ಭೀಮಕುಮಾರ್ ಹುದ್ದೆಗೇ ಸಂಚಕಾರ ಎದುರಾಗುತ್ತದೆ. ಭೀಮಕುಮಾರ್ ಪ್ರಾಮಾಣಿಕನೂ ಹೌದು, ಸೂಕ್ಷ್ಮ ಸಂವೇದನೆಯ ವ್ಯಕ್ತಿಯೂ ಹೌದು. ಆತನಿಗೆ ಜಟ್ಟನ ಬಗ್ಗೆ ಕಾಳಜಿ. ಮುಂಗೋಪಿಯೂ, ಪೂರ್ವಾಗ್ರಹಪೀಡಿತನೂ ಆದ ಜಟ್ಟನನ್ನು ಭೀಮಕುಮಾರ್ ತಿದ್ದುತ್ತಲೇ ಆತನನ್ನು ರಕ್ಷಿಸುತ್ತಿರುತ್ತಾನೆ.


ಅತ್ತ ಮನೆಯಲ್ಲಿ ಆ ಯುವತಿಯೊಂದಿಗಿನ ಸೈದ್ಧಾಂತಿಕ ಸಮರ, ಇತ್ತ ಹೊರಗಡೆ ಹಿರಿಯ ಅಧಿಕಾರಿಯ ಕಾಳಜಿ, ಇವೆರಡೂ ಜಟ್ಟನ ಮನಸ್ಸಿನಲ್ಲಿ ಚಿಂತನೆಯಲ್ಲಿ ಬದಲಾವಣೆಗಳಿಗೆ ಕಾರಣವಾಗುತ್ತವೆ. ಆರಂಭದಲ್ಲಿ ಅರಣ್ಯದ ಪ್ರಾಣಿಯಂತೆ ಭಾಸವಾಗುವ ಜಟ್ಟ ತನ್ನ ಮನಸ್ಸಿನಲ್ಲಿರುವ ಕಾಡನ್ನು ನಾಶಮಾಡಿ ಮಾನವೀಯ ಮನುಷ್ಯನಾಗುತ್ತಾನೆ. ಆದರೆ ಸಿನಿಮಾ ಅನಿರೀಕ್ಷಿತ ತಿರುವುಗಳೊಂದಿಗೆ ಕೊನೆಯಾಗುತ್ತದೆ.

ಜಟ್ಟ ಪಾತ್ರದಲ್ಲಿ ಕಿಶೋರ್ ಅದ್ಭುತವಾಗಿ ನಟಿಸಿದ್ದಾರೆ. 'ದಾರಿ ತಪ್ಪಿರುವ' ಯುವತಿಯಾಗಿ ನಟಿಸಿರುವ ಸುಕೃತಾ ವಾಗ್ಲೆ ಮತ್ತು ಜಟ್ಟನ ಪತ್ನಿಯಾಗಿ ನಟಿಸಿರುವ ಪಾವನ ಎಂಬ ಯುವತಿಯರೂ ಕಿಶೋರ್ ಪ್ರತಿಭೆಯ ಮುಂದೆ ಸೇರಿಗೆ ಸವ್ವಾ ಸೇರು ಎಂಬಂತೆ ನಟಿಸಿದ್ದಾರೆ. ಸುಕೃತಾ ವಾಗ್ಲೆಯವರ ಪಾತ್ರ ಒಂದಿಷ್ಟು ವಾಚ್ಯ ಎನಿಸಿದರೂ ಆಕೆಯ ನಟನೆ ಅದನ್ನೆಲ್ಲ ಮರೆಸುತ್ತದೆ. ಹಾಗೆಯೇ ಪಾವನ ಎಂಬ ಸುಂದರ ಪ್ರತಿಭೆ ಇಷ್ಟು ದಿನ ಯಾರ ಕಣ್ಣಿಗೂ ಬೀಳದೆ ಇದ್ದದ್ದು ಕನ್ನಡಿಗರಿಗೆ ಆದ ನಷ್ಟ ಎಂದೇ ಅನ್ನಬೇಕು.

ಮಹಿಳಾವಾದ ಮತ್ತು ಅಂಬೇಡ್ಕರ್‌ವಾದ ಪರವಾದ ಮತ್ತು ಕೋಮುವಾದ ಹಾಗು ಭ್ರಷ್ಟಾಚಾರದ ವಿರುದ್ಧದ ನಿಲುವು ಈ ಚಿತ್ರದಲ್ಲಿ ಎದ್ದು ಕಾಣಿಸುತ್ತದೆ. ಇದರ ಕತೆ, ಸಂಭಾಷಣೆ ಬರೆದಿರುವವರು ಮತ್ತು ಈ ಚಿತ್ರವನ್ನು ನಿರ್ದೇಶಿಸಿರುವವರು ಗಿರಿರಾಜ್. ಸ್ವತಃ ಸಾಹಿತಿಯೂ, ಸಾಹಿತ್ಯಾಭಿಮಾನಿಯೂ ಆಗಿರುವ ಗಿರಿರಾಜ್ ತಮ್ಮ ಪ್ರಗತಿಪರ ಸಿದ್ಧಾಂತವನ್ನು ಈ ಚಿತ್ರದ ಮೂಲಕ ಸಾರುವುದರಲ್ಲಿ ಯಶಸ್ವಿಯಾಗಿದ್ದಾರೆ.

'ಜಟ್ಟ' ಸಿನಿಮಾ ನಿಮ್ಮ ಊರಲ್ಲಿ ಇಲ್ಲದಿದ್ದರೂ ಪಕ್ಕದ ಊರಿನಲ್ಲಿದ್ದರೆ ಬಿಡುವು ಮಾಡಿಕೊಂಡು ನೋಡಬೇಕಾದ ಸಿನಿಮಾ ಇದು ಎಂದು ಮತ್ತೊಮ್ಮೆ ನಮ್ಮ ಓದುಗ ಮಿತ್ರರನ್ನು ಒತ್ತಾಯಿಸುತ್ತೇನೆ.

■ ಗೌರಿ


ಅಮಾನವೀಯ ಅಡ್ಡಪಲ್ಲಕ್ಕಿ ಮೆರವಣಿಗೆ


ಪ್ರತಿಭಟನಾಕಾರರಿಂದ ಅಣಕು ಅಡ್ಡಪಲ್ಲಕ್ಕಿ

ಆನೆಯನ್ನೇರಿ ಹೋದ ರಂಭಾಪುರಿ ಜಗದ್ಗುರು ಸತ್ಯದ ನಿಲವರಿಯದೆ ಹೋದರು!

ಅಡ್ಡಪಲ್ಲಕ್ಕಿಯಲ್ಲಿ ಆಸೀನನಾಗಿ ಮೆರೆಯಲೇಬೇಕೆಂದು ಹಟಹಿಡಿದ ರಂಭಾಪುರಿ ಪೀಠ(ಥ)ದ ಸ್ವಾಮೀಜಿ ಜಟ್ಟಿ ಬಿದ್ದರೂ ಮೀಸೆಗೆ ಮಣ್ಣು ಹತ್ತಿಲ್ಲವೆನ್ನುವಂತೆ 200 ಮೀಟರ್‌ಗಳ ಉದ್ದ ಅಡ್ಡಪಲ್ಲಕ್ಕಿಯಲ್ಲಿ ಮೆರೆದಿದ್ದಾರೆ. ಹದಿನಾಲ್ಕು ದಿನಗಳವರೆಗೆ ಯಾವ ಸಂದರ್ಭದಲ್ಲಿ ಏನು ಘಟಿಸುತ್ತದೋ ಎಂದು ಆತಂಕಗೊಂಡಿದ್ದ ಜೇವರ್ಗಿಯ ಜನತೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ರಂಭಾಪುರಿ ಕಾರ್ಯಕ್ರಮದ ಸ್ವಾಗತಿ ಸಮಿತಿಯ ಕಾರ್ಯಕಾರಿ ಮಂಡಳಿಯಲ್ಲಿ ಶಾಸಕ ಡಾ. ಅಜಯಸಿಂಗ್, ಎಂ.ಎಲ್.ಸಿ. ಅಲ್ಲಮಪ್ರಭು ಪಾಟೀಲ, ಕೇದಾರಲಿಂಗಯ್ಯ ಹಿರೇಮಠ ಮುಂತಾದವರು ಇದ್ದರೂ ಜಿಲ್ಲೆಯ ಪ್ರಗತಿಪರ ಸಂಘಟನೆಗಳ ಕೆ.ನೀಲಾ, ಮೀನಾಕ್ಷಿ ಬಾಳಿ, ಆರ್.ಕೆ.ಹುಡಗಿ, ಶ್ರೀಶೈಲ ಘೂಳಿ, ವಿಜಯಕುಮಾರ ತೇಗಲತಿಪ್ಪಿ ಹಾಗೂ ದಲಿತ ಸಂಘಟನೆಯ ಪ್ರಮುಖರೆಲ್ಲ ಡಾ.ಅಜಯಸಿಂಗ್ ಮನೆಗೆ ಮುತ್ತಿಗೆ ಹಾಕಿ ಕಾರ್ಯಕ್ರಮದಲ್ಲಿ ತಾವು ಭಾಗವಹಿಸಿದರೆ ಹುಷಾರ್! ಎಂಬ ಎಚ್ಚರಿಕೆಯ ಗಂಟೆ ರಾಜಕೀಯ ಧುರೀಣರ ಜಂಘಾಬಲವನ್ನೆ ಕಸಿದುಕೊಂಡಿತು.

ಅಡ್ಡಪಲ್ಲಕ್ಕಿಯ ಉತ್ಸವಕ್ಕೆ ಕೇವಲ ಒಂದು ದಿನ ಇದೆ ಎನ್ನುವವರೆಗೂ ವೇದಿಕೆಯ ಹತ್ತಿರ ಸುಳಿಯದ ಡಾ. ಅಜಯಸಿಂಗ್ ಒಮ್ಮಿಂದೊಮ್ಮೆ ಶರಣರ ಅನುಭಾವ ಪ್ರವಚನ ಕಾರ್ಯಕ್ರಮಕ್ಕೆ ಆಗಮಿಸಿದರು. ಆದರೆ ವೇದಿಕೆ ಹತ್ತಿ ಅಲ್ಲಿ ತಮ್ಮ ವಿಚಾರ ಮಂಡಿಸಲು ಅವಕಾಶವಿಲ್ಲದ್ದರಿಂದ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಬರೀ ಆ ಸಂಘಟಕರ ಸ್ವಾಗತವನ್ನು ಮಾತ್ರ ಸ್ವೀಕರಿಸಿ ಹೋಗಬೇಕಾಯಿತು.

ಆದರೆ ರಂಭಾಪುರಿಯ ದಸರಾ ದರ್ಬಾರ್ ಉತ್ಸವದಲ್ಲಿ ಆದೇ ದಿನ ಭಾಗವಹಿಸಿ ಅಲ್ಲಿ ನೆರೆದಿದ್ದ ಜನರನ್ನು ಸ್ವಾಗತಿಸಿದರು. ಅದನ್ನು ಕಂಡು ಜನ ಪಿಸು ಪಿಸುಧ್ವನಿಯಲ್ಲಿ 'ಸೂಗೂರಿಗೂ ನೆಂಟ. ಬಾಗೂರಿಗೂ ನೆಂಟ' ಎಂಬ ಲೇವಡಿ ಮಾಡಿದರು.

"ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಮಾತಾಡುವ ಹಕ್ಕಿದೆ. ಅವರವರ ಅಭಿಪ್ರಾಯಗಳನ್ನು ಹೇಳುವ ಸ್ವಾತಂತ್ರ್ಯವಿದೆ. ಆದ್ದರಿಂದ ರಂಭಾಪುರಿ ಶ್ರೀಗಳು ಬೇಸರ ಮಾಡಿಕೊಳ್ಳಬಾರದು" ಎನ್ನುತ್ತಾ ಅಕ್ಕಮಹಾದೇವಿ ರಚಿಸಿದ ವಚನವನ್ನು ಬಸವಣ್ಣನವರ ವಚನವೆಂದು ಹೇಳಿ "ಬೆಟ್ಟದಾ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆ ಎಂತಯ್ಯಾ, ಸಮುದ್ರದಾ ತಡಿಯಲ್ಲೊಂದು ಮನೆಯ ಮಾಡಿ ನೊರೆ ತೆರೆಗಳಿಗಂಜಿದೊಡೆ ಎಂತಯ್ಯ, ಸಂತೆಯೊಳಗೊಂದು ಮನೆಯ ಮಾಡಿ ಶಬ್ದಗಳಿಗಂಜಿದೊಡೆ ಎಂತಯ್ಯಾ" ಎಂಬ ಬುದ್ಧಿವಾದವನ್ನು ರಂಭಾಪುರಿ ಸ್ವಾಮಿಗಳಿಗೆ ಹೇಳಿದರು. ಬಸವಾದಿ ಶರಣರ ಅನುಭಾವ ಪ್ರವಚನವನ್ನು ಹಾಗೂ ಆ ಸಂಘಟಕರನ್ನು ಖಂಡಿಸಬಹುದೆಂದು ಭ್ರಮಿಸಿದ್ದ ರಂಭಾಪುರಿ ಸ್ವಾಮೀಜಿ ನಿಜಕ್ಕೂ ಮುಖಭಂಗಕ್ಕೊಳಗಾಗಿ ಇಲ್ಲದ ಠೇಂಕಾರವನ್ನು ಹೊತ್ತು ಕುಳಿತುಕೊಂಡಿದ್ದರು.


ನಿತ್ಯವೂ 7.30 ಕ್ಕೆ ಆರಂಭಗೊಳ್ಳುತ್ತಿದ್ದ ಸಭೆಯಲ್ಲಿ ಮೊದಮೊದಲು ಜನರೆ ಇರುತ್ತಿರಲಿಲ್ಲ, ಜೇವರ್ಗಿಯ ಜನ ಆ ಸಭೆಯನ್ನೇ ಬಹಿಷ್ಕರಿಸಿದವರಂತೆ ಅತ್ತ ತಿರುಗಿಯೂ ನೋಡುತ್ತಿರಲಿಲ್ಲ. ಇದರಿಂದ ವ್ಯಗ್ರರಾದ ರಂಭಾಪುರಿ ಸ್ವಾಮಿ ತನ್ನ ಜಂಗಮ ಪಟಾಲಂಗೆ ಕರೆಯಿಸಿ ಮುಖ ಮೋತಿ ತೊಯ್ಯುವಂತೆ ಉಗುಳಿ ಹೇಗಾದರೂ ಸೈ ಸುತ್ತಮುತ್ತಲ ಹಳ್ಳಿಹಳ್ಳಿಗಳಿಂದ ಜನರನ್ನು ಕರೆತರಬೇಕೆಂದು ಕಟ್ಟಪ್ಪಣೆ ಹೊರಡಿಸಿದ್ದರು. ಆ ತರುವಾಯ ಜಂಗಮ ಗುರುಗಳು ಹಳ್ಳಿಹಳ್ಳಿಗಳಿಗೆ ತಿರುಗಿ ಊರ ಗೌಡರನ್ನು ಹಿಡಿದು ದಮ್ಮಯ್ಯ ದಪ್ಪಯ್ಯ ಎಂದು ಕಾಡಿ ಬೇಡಿ ವೀಳ್ಯಕೊಟ್ಟು ಬಂದ ತರುವಾಯವೆ ಜನ ಸೇರತೊಡಗಿದ್ದು.

ದಸರಾ ದರ್ಬಾರ ಸಭೆಯಲ್ಲಿ ಆನೆಯನ್ನು ನೋಡಲು ಒಂದಷ್ಟು ಜನ ಬಂದರೆ ಇನ್ನು ಕೆಲವು ಜನ ರಂಭಾಪುರಿ ಸ್ವಾಮಿಯ ವೈಭವಗಳನ್ನು ನೋಡಲು ಕಾತುರರಾಗಿ ಬರುತ್ತಿದ್ದರು. ದಿನಕ್ಕೊಂದು ಬಗೆಯ ವೇಷತೊಟ್ಟು ತಲೆಗೆ ಸುತ್ತಿದ ಪೇಟಾಕ್ಕೆ ವಜ್ರದ ಹರಳುಗಳನ್ನು ಹಚ್ಚಿಕೊಂಡು, ಮೈತುಂಬಾ ಮಣಭಾರದ ಅಲಂಕಾರ, ಐದು ಬೆರಳುಗಳಿಗೂ ಥಳಥಳಿಸುವ ಚಿನ್ನದ, ವಜ್ರದ ಉಂಗುರ ತೊಟ್ಟು, ಬಿಳಿ ಗಡ್ಡಕ್ಕೆ ಹೇರ್‌ಡೈ ಹಾಕಿದ್ದ ಅವರ

ಪುರೋಗಾಮಿ ಶಕ್ತಿಗೆ ಮಣೆ ಹಾಕಿದ ಪತ್ರಿಕೆಗಳು

ಪುರೋಗಾಮಿ ಶಕ್ತಿಯನ್ನು ಬೆಳೆಸುವ ನಿಟ್ಟನಲ್ಲಿ ಕ್ಷಣಕ್ಷಣವೂ ಎಚ್ಚರವಾಗಿರುವ ಮಾಧ್ಯಮಗಳು ಬಸವಾದಿಗಳು ಹಾಗೂ ಪ್ರಗತಿಪರರ ನ್ಯಾಯಯುತವಾದ ಪ್ರತಿಭಟನೆಯನ್ನು ತೋರಿಸಬೇಕಾದ ಮಟ್ಟದಲ್ಲಿ ತೋರಿಸದಿರುವುದು ವಿಷಾದನೀಯ. ಭೂರ್ಜ್ವಾ ತತ್ವಗಳ ಬಡಿವಾರಗಳಿಗೆ ಎಷ್ಟು ಪ್ರಾಶಸ್ತ್ಯ ನೀಡಿದರೋ ಅಷ್ಟು ಪ್ರಚಾರವನ್ನು ಶರಣರ ಅನುಭಾವ ಪ್ರವಚನಕ್ಕೆ ತೋರದೆ ಇರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ವಿ.ಆರ್.ಎಲ್. ಸಮೂಹದ ಪತ್ರಿಕೆಯಂತೂ ರಂಭಾಪುರಿ ಪೀಠದ ಕೆಳಗೆ ನಿಂತು ಮಂಡಿಯೂರಿದ್ದಂತೂ ನಾಚಿಕೆ ತರಿಸುವಂತೆ ಇತ್ತು, ಓದುಗರಿಂದ ಪತ್ರಿಕೆ ನಡೆಯುತ್ತದೆಯೆ ಹೊರತು; ಪತ್ರಿಕೆಯಿಂದ ಸಮಾಜ ಖಂಡಿತ ನಡೆಯುವುದಿಲ್ಲ ಎಂಬ ಸಂಗತಿ ಇವರಿಗೆ ಯಾವಾಗ ಗೊತ್ತಾಗುತ್ತದೊ!

ಅಣಕು ಶವಯಾತ್ರೆ, 30ಕ್ಕೂ ಹೆಚ್ಚು ಜನ ಮಠಾಧೀಶರ ಅನಿರ್ದಿಷ್ಟ ಉಪವಾಸ, ಉಪವಾಸ ಕೊನೆಗೊಳಿಸುವ ಸಂದರ್ಭದಲ್ಲಿ ಪಂಚಪೀಠಾಧೀಶ್ವರರ ಸಾಂಕೇತಿಕ ತಿಥಿ ಮಾಡಿದ್ದು ಗಮನಾರ್ಹ ಸಂಗತಿಗಳಾಗಿದ್ದವು. ಅಣಕು ಶವಯಾತ್ರೆಯ ಸಂದರ್ಭದಲ್ಲಿ ಹೋರಾಟಗಾರ್ತಿ ಮೀನಾಕ್ಷಿ ಬಾಳಿಯವರ ಜಡೆಗೆ ಕೈಹಾಕಿ ಪೋಲೀಸ್ ವ್ಯಾನಿನೊಳಗೆ ನೂಕಿದ್ದು ನಾವು ಇರುವುದು ಪ್ರಜಾರಾಜ್ಯದಲ್ಲಿಯೊ? ಪೋಲಿಸ್ ರಾಜ್ಯದಲ್ಲಿಯೊ? ಎನ್ನುವಂತೆ ಇತ್ತು.


ಬೀದಿಗೆ ಬಿದ್ದ ಕೇದರನಾಥ


ಪೊಲೀಸರ ದೌರ್ಜನ್ಯ

ಬಸವಣ್ಣನವರ ಲಿಂಗಾಯತ ಮತ್ತು ಪಂಚಾಚಾರ್ಯರ ವೀರಶೈವ

1) ಇತಿಹಾಸ ಪುರುಷ ಬಸವಣ್ಣನವರೇ ಲಿಂಗಾಯತಕ್ಕೆ ಧರ್ಮಗುರು. ಸ್ಥಾವರಲಿಂಗೋದ್ಭವರು ಎನ್ನಲಾದ ರೇಣುಕಾಚಾರ್ಯರೇ ವೀರಶೈವಕ್ಕೆ ಧರ್ಮಗುರು.


2) ಲಿಂಗಾಯತರಲ್ಲಿ 770 ಅಮರಗಣಂಗಳೆಲ್ಲ ನಾಯಕರು. ವೀರಶೈವರು 770 ಅಮರಗಣಂಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

3) ಲಿಂಗಾಯತರು ಏಕದೇವೋಪಾಸಕರು. ಇಷ್ಟಲಿಂಗಯೋಗ ಅವರ ಪೂಜಾ ವಿಧಾನ. ಇಷ್ಟಲಿಂಗವು ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣ ಚೈತನ್ಯದ ಕುರುಹು. ಬಹುದೇವೋಪಾಸಕ ವೀರಶೈವರು ಮೂರ್ತಿ ಪೂಜಕರು.

4) ಲಿಂಗಾಯತ ಧರ್ಮದಲ್ಲಿ ಹೋಮ, ಹವನ ಮತ್ತು ವೇದಘೋಷಗಳಿಲ್ಲ, ವೀರಶೈವರಲ್ಲಿ ಇವೆಲ್ಲ ಇವೆ.

5) ಮೂಢನಂಬಿಕೆಯ ಆಗರಗಳಾದ ಜ್ಯೋತಿಷ್ಯ ಮತ್ತು ಪಂಚಾಂಗವನ್ನು ಲಿಂಗಾಯತರು ನಂಬುವುದಿಲ್ಲ, ವೀರಶೈವರು ನಂಬುತ್ತಾರೆ.


6) ಲಿಂಗಾಯತರಿಗೆ ಆಚಾರವೇ ಸ್ವರ್ಗ, ಅನಾಚಾರವೇ ನರಕ. ವೀರಶೈವರು ಸ್ವರ್ಗ, ನರಕಗಳನ್ನು ನಂಬುತ್ತಾರೆ.



7) ಲಿಂಗಾಯತರದು ಅನುಭವ ಮಂಟಪ. ವೀರಶೈವರಿಗೆ ದೇವಾಲಯಗಳು ಬೇಕು.

8) ಲಿಂಗಾಯತರದು ಕಾಯಕ ಸಿದ್ಧಾಂತ. ವೀರಶೈವರದು ಕರ್ಮ ಸಿದ್ಧಾಂತ.

9) ಲಿಂಗಾಯತರ ಧರ್ಮಗ್ರಂಥ ವಚನಸಂಪುಟ. ವೀರಶೈವರ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ.



10) ಅವೈದಿಕ ಲಿಂಗಾಯತರಿಗೆ ವಚನವೇ ಸರ್ವಸ್ವ. ವೇದಾಗಮಗಳನ್ನು ನಂಬುವ ವೀರಶೈವರು ವೈದಿಕ ಸಂಪ್ರದಾಯದವರು.

11) ಲಿಂಗಾಯತರಿಗೆ ಅರಿವೇ ಗುರು. ವೀರಶೈವರಲ್ಲಿ ಭಕ್ತರು ಗುರುವಿನ (ಆಚಾರ್ಯರ) ಗುಲಾಮರು.

12) ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ' ಎಂದು ಹೇಳಿದವರು. ವೀರಶೈವ ಪಂಚಾಚಾರ್ಯರಿಗೆ ಪಲ್ಲಕ್ಕಿ ಬೇಕು.

13) ಲಿಂಗಾಯತರದು ನಿರ್ಜಾತಿ ವ್ಯವಸ್ಥೆ. ಬಸವತತ್ವವನ್ನು ಜನಮನದಲ್ಲಿ ಮೂಡಿಸುವ ಲಿಂಗವಂತರು ಶರಣ ಜಂಗಮರಾಗಬಹುದು. ವೀರಶೈವರದು ಜಾತಿ ವ್ಯವಸ್ಥೆ. ಅವರ ಪ್ರಕಾರ ಜಾತಿ ಜಂಗಮರೇ ಗುರುಗಳಾಗಬೇಕು.

14) ಲಿಂಗಾಯತರಿಗೆ ಪಂಚಸೂತಕಗಳಿಲ್ಲ, ವೀರಶೈವರಿಗೆ ಪಂಚಸೂತಕಗಳಿವೆ.


15) ಲಿಂಗಾಯತ ಬಸವಾದ್ವೈತ. ಶಿವ, ಗಂಗೆ, ಪಾರ್ವತಿ, ಮತ್ತು ಕೈಲಾಸ ನಂಬುವ ವೀರಶೈವ ದ್ವೈತ.

16) ವೀರಶೈವರು ಪಂಚಾಚಾರ್ಯ ಸಂಪ್ರದಾಯವನ್ನು ಬಿಟ್ಟು ಬಸವಣ್ಣನವರೇ ಧರ್ಮಗುರು ಮತ್ತು ವಚನಗಳೇ ಧರ್ಮಗ್ರಂಥ ಎಂದು ಒಪ್ಪಿಕೊಂಡಾಗ ಮಾತ್ರ ಲಿಂಗಾಯತ ಸಮಾಜ ಒಂದಾಗಬಲ್ಲದು. ಅವೈದಿಕ ಲಿಂಗಾಯತ ಮತ್ತು ವೈದಿಕ ವೀರಶೈವ ತದ್ವಿರುದ್ಧ ಸಿದ್ಧಾಂತಗಳ ಮೇಲೆ ನಿಂತಿರುವುದರಿಂದ ಒಂದಾಗಲು ಬೇರೆ ಮಾರ್ಗವೇ ಇಲ್ಲ, ಇರುವುದೊಂದೇ ಮಾರ್ಗ; ಬಸವಮಾರ್ಗ.



■ ರಂಜಾನ್ ದರ್ಗಾ

ವೈದಿಕ ವೈರಸ್‌ನಿಂದ ಬಳಲುತ್ತಿರುವ ಯಡ್ಡಿ!



ಲಿಂಗಾಯತರ ನಾಯಕ ತಾನೆಂದು ಘೋಸುಕೊಟ್ಟ ಯಡ್ಡಿ ತಾನೊಬ್ಬ ಕರ್ಮಠ ಆಸಾಮಿ ಎಂದು ತೋರಿಸಿಕೊಂಡ. ಬಂಜಗೆರೆ ಜಯಪ್ರಕಾಶರು 'ಆನುದೇವ ಹೊರಗಣವನು' ಎಂಬ ವಿಮರ್ಶಾತ್ಮಕ ಕೃತಿ ಬರೆದಾಗ ಎಗರಿ ಬಿದ್ದು ಅದು ನಿಷೇಧವಾಗುವವರೆಗೂ ಗಂಟಲು ಹರಿದುಕೊಂಡ ಯಡ್ಡಿ, 'ಬಸವಣ್ಣನವರಿಗೆ- ಶರಣರಿಗೆ ಅಪಮಾನವಾದರೆ ಸಹಿಸಲಾಗುವುದಿಲ್ಲ' ಎಂಬ ಹೇಳಿಕೆ ನೀಡಿದ್ದರು. ಆದರೆ ಸ್ವತಃ ಪಂಚಪೀಠಗಳೆ ಹಾಡಿ - ಆಶೀರ್ವದಿಸಿ- ಬರೆಯಿಸಿದ 'ಸಿದ್ಧರಾಮ ಚರಿತ' ಕೃತಿಯಲ್ಲಿ ಬಸವಣ್ಣನವರನ್ನು ಕಳ್ಳರ ಗುಂಪಿನ ನಾಯಕ, ವ್ಯಭಿಚಾರಿಯಾದ ಅಕ್ಕ, ಕಾಮುಕನಾದ ಅಲ್ಲಮಪ್ರಭು, ಹಾದರಕ್ಕೆ ಹುಟ್ಟಿದ ಚೆನ್ನಬಸವಣ್ಣ, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಕಳ್ಳರು- ಕಾಕರು ಸುಲಿಗೆ ಕೋರರು ಎಂದು ಬರೆದಿದ್ದರೂ ಅದರ ಕುರಿತು ಚಕಾರ ಶಬ್ಧವೆತ್ತದೆ ದಿವ್ಯಮೌನಕ್ಕೆ ಶರಣು ಹೋಗಿದ್ದರು.

ಈಗ 'ಅಡ್ಡಪಲ್ಲಕ್ಕಿ ಉತ್ಸವಕ್ಕೆ ಅಡ್ಡಿ ಮಾಡಬಾರದು' ಎಂಬ ಹೇಳಿಕೆ ನೀಡಿದ್ದಲ್ಲದೆ ದಸರಾ ದರ್ಬಾರ ಸಭೆಗೆ ಹಾಜರಾಗಿ ರಂಭಾಪುರಿ ಸ್ವಾಮಿಯ ಪಾದಪದ್ಮಂಗಳಲ್ಲಿ ಮಂಡಿಯೂರಿ ಆಸೀನನಾದುದಲ್ಲದೆ ಅವರ ದಾಸಾನುದಾಸರಂತೆ ವರ್ತಿಸಿದ್ದು ಹೇಸಿಗೆಯನ್ನುಂಟುಮಾಡುವಂತಿತ್ತು, ಕರ್ಮಠಗೇಡಿಯಾದ ಯಡ್ಡಿ ತಾನು ಲಿಂಗಾಯತರ ನಾಯಕನಲ್ಲ, ವೈದಿಕ ಗುಂಪಿನ ನಾಯಕ ಎಂಬುದು ಮತ್ತೊಮ್ಮೆ ಸಾಬೀತುಮಾಡಿಕೊಂಡರು.

ವೈದಿಕ ವೈರಸ್ ಅಂಟಿಸಿಕೊಂಡಿರುವ ಯಡ್ಡಿ ಎಂಬ ನಾಯಕ ಲಿಂಗಾಯತನಲ್ಲ; ಅವರ ಕುಲಗೆಡಿಸಲು ಹುಟ್ಟಿ ಬಂದ ಭಸ್ಮಾಸುರ ಎಂಬುದು ಪುನಃ ಸಾಬೀತಾಯಿತು.

ರಾಜಪೋಷಾಕು ಎಂಥವರನ್ನು ಸೆಳೆಯುತ್ತಿತ್ತು.

ಪ್ರತಿ ನಿತ್ಯವೂ ರಂಭಾಪುರಿಯ ಮಠದಿಂದಲೆ ತಂದ ಬೆಳ್ಳಿಯ ಪೀಠವನ್ನು ಏರುವಾಗ ಮೊಳಗಿಸುತ್ತಿದ್ದ ವಾದ್ಯಗಳು, ವೇದಘೋಷಗಳು, ಅರ್ಚನೆಗಳು ಬ್ರಾಹ್ಮಣ ವಟುಗಳನ್ನು ಮೀರಿಸುವಂತಿತ್ತು, "ನಾನು ಮನಸ್ಸು ಮಾಡಿದರೆ ರುದ್ರನೂ ಆಗಬಲ್ಲೆ ವೀರಭದ್ರನೂ ಆಗಬಲ್ಲೆ" ಎಂಬ ಪ್ರಚೋದಕ ಮಾತುಗಳನ್ನು ಯಾರೂ ಅಷ್ಟಾಗಿ ಗಮನಿಸಲಿಲ್ಲ.

ಒಂಭತ್ತು ದಿನಗಳವರೆಗೂ ರಂಭಾಪುರಿ ಸ್ವಾಮಿಯ ಪಿಟೀಲು ಒಂದೇ ಬಗೆಯಾಗಿತ್ತು, ಅದು ಹೀಗಿತ್ತು: "ನಾವು ಅನಾದಿಕಾಲದಿಂದ ಬಂದಿದ್ದೇವೆ. ನಮಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಹರಪ್ಪ ಮಹೆಂಜೋದಾರ ಸಂಸ್ಕೃತಿಯ ಪೂರ್ವದಲ್ಲಿಯೂ ನಾವು ಇದ್ದೆವು. ಶೈವಾಗಮಗಳಲ್ಲಿ ನಮ್ಮ ಉಲ್ಲೇಖವಿದೆ. ನಾವು ಸನಾತನರು. ಪುರಾತನರು. ನಾವು ಧರ್ಮಿಷ್ಟರು. ದೊಡ್ಡ ಪರಂಪರೆ ಉಳ್ಳವರು. ರಾಜಮಹಾರಾಜರುಗಳು ನಮಗೆ ಉಂಬಳಿಯಾಗಿ ಬಿರುದು ಬಾವಲಿಗಳನ್ನು ಸಮರ್ಪಿಸಿ ಕೃತಾರ್ಥರಾಗಿದ್ದಾರೆ. ನಮ್ಮ ದರ್ಶನವೇ ಅಪರೂಪ. ನಮ್ಮನ್ನು ದರ್ಶಿಸಿ, ಆಶೀರ್ವಾದ ಪಡೆದವರಿಗೆ ಏನೆಲ್ಲವೂ ಉಂಟು. ಭಾಗ್ಯವಿದ್ದವರಿಗೆ ಮಾತ್ರ ನಮ್ಮ ದರ್ಶನ." ಇಂತಹ ಅಸಂಬದ್ಧ ಮಾತುಗಳು ಪ್ರಜ್ಞಾವಂತರಲ್ಲಿ ನಗೆ ಹುಟ್ಟಿಸುತ್ತಿತ್ತು.

ರಂಭಾಪುರಿ ಸ್ವಾಮಿಯ ದರ್ಬಾರಿಗೆ ಇದಿರಾಗಿ ನಡೆಯುತ್ತಿದ್ದ ಶರಣರ ಅನುಭಾವ ಪ್ರವಚನದಲ್ಲಿ ಎಂದಿನಂತೆ ಬೈಲಹೊಂಗಲ ನಿಷ್ಕಲ ಮಂಟಪದ ನಿಜಗುಣಸ್ವಾಮೀಜಿ ನಿರರ್ಗಳವಾಗಿ, ದಿನಕ್ಕೊಂದು ಬಗೆಯ ಸವಾಲನ್ನು ಎಸೆಯುತ್ತಿದ್ದರು.

ಜಿಲ್ಲಾಧಿಕಾರಿ ಪ್ರಸಾದ, ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್ ಅಮಿತಸಿಂಗ್ ಮುಂದಾಲೋಚನೆಯಿಂದ 2000ಕ್ಕೂ ಹೆಚ್ಚು ಪೊಲೀಸರನ್ನು ಕರೆಸಿ ಪಟ್ಟಣದ ಜನತೆಯನ್ನು ದಂಗುಬಡಿಸಿದ್ದರು. ಅಡ್ಡಪಲ್ಲಕ್ಕಿಯ ದಿನದಂದು 3 ರಿಂದ 6 ಗಂಟೆಯವರೆಗೆ ಪೊಲೀಸರೆಲ್ಲ ಉಸಿರು ಬಿಗಿ ಹಿಡಿದು ಜನತೆಯನ್ನು ನಿಯಂತ್ರಿಸಿದರು. ಬಸವಾದಿಗಳು ಹೇಳಿದಂತೆ ಅಡ್ಡಪಲ್ಲಕ್ಕಿ ನಿಲ್ಲದೆ ಇರಬಹುದು. ಆದರೆ ಅವರು ಹಾಕಿದ ಶರತ್ತುಗಳನ್ನು ಮೀರಿ ಅದು ನಡೆಯಲಿಲ್ಲ ಎಂಬುದು ಬಹುದೊಡ್ಡ ಹೆಗ್ಗಳಿಕೆ.


ವಿಜಾಪುರ ರಸ್ತೆಗೆ ಇರುವ ಸೋಮನಾಥ ಹಳ್ಳಿಯವರ ಮನೆಯಿಂದ ಶ್ರೀ ಬಸವೇಶ್ವರ ಸರ್ಕಲ್‌ಅನ್ನು ಅಡ್ಡಪಲ್ಲಕ್ಕಿ ಹಾದುಹೋಗಬೇಕೆಂದಾಗ ಯಾವುದೇ ಕಾರಣಕ್ಕೂ ಅಡ್ಡಪಲ್ಲಕ್ಕಿ ಬಸವಣ್ಣನವರ ಚೌಕ್‌ನ್ನು ಸುತ್ತದೆ ಹೋಗಬೇಕು ಎಂದು ಬಸವಾಭಿಮಾನಿಗಳು ಪಟ್ಟು ಹಿಡಿದರು. ಕಾರಣ ಪಂಚಾಚಾರ್ಯ ಸ್ವಾಮಿಗಳು ಬಸವಣ್ಣನವರ ಬಹಿರಂಗ ದ್ರೋಹಿಗಳು; ಅವರು ಬಸವಣ್ಣನವರ ಸರ್ಕಲ್ ಸುತ್ತಿದರೆ ಬಸವಣ್ಣನವರಿಗೆ ಅವಮಾನಿಸಿದಂತೆ. ಬಸವಾದಿಗಳ ಈ ವಾದವನ್ನು ಜಿಲ್ಲಾಡಳಿತ ಮಾನ್ಯ ಮಾಡಿತು.

ಹಾಗೆಯೇ ರಂಭಾಪುರಿ ಸ್ವಾಮಿಗಳು ಪುರಪ್ರವೇಶದ ದಾರಿಯಲ್ಲಿರುವ . ಡಾ. ಬಿ.ಆರ್.ಅಂಬೇಡ್ಕರ್ ಸರ್ಕಲ್‌ನಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಹೂಹಾಕಿ ಬರಬೇಕೆಂದು ಏರ್ಪಾಡಾಗಿತ್ತು, ಆದರೆ ಪ್ರಜ್ಞಾವಂತ ದಲಿತರು "ಅಂಬೇಡ್ಕರರ ಮೂರ್ತಿಗೆ ಹಾರ ಹಾಕಿ ಅಪಮಾನ ಮಾಡಬೇಡಿ. ಒಂದುವೇಳೆ ಹಾರ ಹಾಕಿದರೆ ಸಭೆಯಲ್ಲಿ ಸಮಾನತೆಯಿಂದ ಕುಳಿತುಕೊಳ್ಳಬೇಕಾಗುತ್ತದೆ" ಎಂಬ ಎಚ್ಚರಿಕೆ ಕೊಟ್ಟಿದ್ದರು. ಪರಿಣಾಮವಾಗಿ ರಂಭಾಪುರಿ ಅಂಬೇಡ್ಕರರ ಪ್ರತಿಮೆಯ ತಂಟೆಗೆ ಹೋಗಲಿಲ್ಲ.

ಪೊಲೀಸರು ಕೇವಲ ಐದು ನಿಮಿಷಗಳಲ್ಲಿ ರಂಭಾಪುರಿಯ ಪ್ರತಿಷ್ಠೆಯ ಅಡ್ಡಪಲ್ಲಕ್ಕಿಯನ್ನು ಮುಖ್ಯ ರಸ್ತೆಯಿಂದ ತೆರವುಗೊಳಿಸಿದರು. ಸಾರ್ವಜನಿಕ ರಸ್ತೆಯಲ್ಲಿರುವ ತನಕವೂ ಪಲ್ಲಕ್ಕಿ ಏರದ ರಂಭಾಪುರಿ ಸ್ವಾಮಿಗಳು- ಯಾವ ಗಳಿಗೆಯಲ್ಲಿ ಏನಾಗುತ್ತದೋ ಎಂದು ಕಕ್ಕಾವಿಕ್ಕಿಯಾಗಿ ನೋಡುತ್ತ ಕಂಗಾಲಾಗಿದ್ದರು. ಅವರನ್ನು ನೋಡಿದವರಿಗೆ ಯಾವ ಪುರುಷಾರ್ಥಕ್ಕಾಗಿ ಈತ ಅಡ್ಡಪಲ್ಲಕ್ಕಿ ಏರಿ ಕುಳಿತಿದ್ದಾರೆ ಎಂಬ ಪ್ರಶ್ನೆ ಮೂಡುತ್ತಿತ್ತು.

■ ವಿಶ್ವಾರಾಧ್ಯ ಸತ್ಯಂಪೇಟೆ


ಎಲ್ಲಿ ಹೋಯಿತು ಪ್ರತಿಷ್ಠೆ?




ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮನೆಯ ಮುಂದೆ ಹಠಾತ್ತನೆ ಕಾಣಿಸಿಕೊಂಡು ಬೀದಿರಂಪ ಮಾಡಿದ ಕೇದಾರದ ರಾವಲ್ (ಪೂಜಾರಿ) ಭೀಮಾಶಂಕರ ಸ್ವಾಮಿ ತನ್ನ ಮಾತುಗಳ ಮೂಲಕ ತಾನಾರೆಂದು ಪ್ರಕಟಪಡಿಸಿದ್ದು ಜಗಜ್ಜಾಹೀರು. ಯಾವುದೇ ಊರಿನ ಪುರಪ್ರವೇಶ ಮಾಡಬೇಕಾದರೂ ಅಲ್ಲಿನ ಹಿರಿಯರು ಬಂದು ಕಾಯಿ-ವೀಳ್ಯ ಕೊಟ್ಟ ಮೇಲೆಯೆ ಬರಬೇಕೆಂದು ಬಡಬಡಿಸುವ ಈ ಜಗದ್ಗುರು(?)ಗಳಿಗೆ ಮುಖ್ಯಮಂತ್ರಿಯವರು ಯಾವ ವೀಳ್ಯ ನೀಡಿದ್ದರೊ? ಸಭೆ ಸಮಾರಂಭಗಳಲ್ಲಿ ತಾನು ಕುಳಿತುಕೊಳ್ಳುವ ಕುರ್ಚಿಯ ಎತ್ತರ ಇತರರ ಕುರ್ಚಿಗಿಂತ ಎತ್ತರ ಇರಬೇಕೆಂದು ಬಡಬಡಿಸುವ ಇವರುಗಳು ಮುಖ್ಯಮಂತ್ರಿಯ ಮನೆಯ ಮುಂದೆ ರಸ್ತೆಯಲ್ಲಿ ಕುಳಿತುಕೊಳ್ಳುವಾಗ ಈ ಎಲ್ಲಾ ಪ್ರತಿಷ್ಠೆಗಳು ಎಲ್ಲಿ ಹುದುಗಿಹೋಗಿದ್ದವೋ?

ಜಾತಿ ಕ್ರೌರ್ಯಕ್ಕೆ ಬಲಿಯಾದ ಮಂಡ್ಯದ ಯುವಪ್ರೇಮಿಗಳು


ಮುಂದುವರೆದಿರುವ, ಆಧುನಿಕ ಎಂದೆಲ್ಲಾ ಕರೆಯಲ್ಪಡುವ ಪ್ರಸ್ತುತ ಕಾಲದಲ್ಲಿ ಜಾತಿ ಸಮಸ್ಯೆಯೇ ಇಲ್ಲ ಎಂದು ಹೇಳುವ ಜನರಿಗೆ ಮಂಡ್ಯ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದಲ್ಲಿ ನಡೆದ ಅಮಾಯಕ ಯುವ ಪ್ರೇಮಿಗಳ ಆತ್ಮಹತ್ಯೆ ನಮ್ಮ ಸಮಾಜದಲ್ಲಿ ಇಂದಿಗೂ ಜಾತಿಕಂದಕ ಎಷ್ಟು ಆಳವಾಗಿದೆ ಎಂಬುದನ್ನು ಸಾಕ್ಷಿ ಸಮೇತ ನಿರೂಪಿಸಿದೆ.



ಮಂಡ್ಯ ನಗರದಿಂದ ಕೇವಲ ನಾಲ್ಕು ಕಿ.ಮೀ. ದೂರದಲ್ಲಿರುವ ಬೇವಿನಹಳ್ಳಿ ಗ್ರಾಮದಲ್ಲಿ ಒಕ್ಕಲಿಗರೇ ಬಹುಸಂಖ್ಯಾತರು. ದಲಿತರದ್ದು ಕೇವಲ 100 ಕುಟುಂಬಗಳಿವೆ. ಈ ಗ್ರಾಮದ ಒಕ್ಕಲಿಗ ಜಾತಿಯ ಕಾರ್ತಿಕ್ ಮತ್ತು ದಲಿತ ವರ್ಗದ ಹಂಸವೇಣಿ ಎಂಬ ಯುವ ಪ್ರೇಮಿಗಳು ಅಂತರ್ಜಾತಿ ವಿವಾಹಕ್ಕೆ ಪೋಷಕರು ಸಮ್ಮತಿಸುವುದಿಲ್ಲವೆಂದು ಹೆದರಿ ಸಾವಿನಲ್ಲಾದರೂ ಒಂದಾಗುವ ಎಂದು ಬಾವಿಗೆ ಬಿದ್ದು ಆತ್ಮಹತ್ಯೆಗೆ ಶರಣಾಗಿರುವುದು ಜಾತಿವ್ಯವಸ್ಥೆಯ ಕ್ರೌರ್ಯ ಎಷ್ಟರ ಮಟ್ಟಿಗೆ ಜೀವಂತವಾಗಿದೆ ಎಂಬುದನ್ನು ತೋರಿಸುತ್ತದೆ. ಈ ಪ್ರಕರಣವನ್ನು ಭಗ್ನ ಪ್ರೇಮಿಗಳ ಆತ್ಮಹತ್ಯೆ ಎಂದು ನೋಡುವುದಕ್ಕಿಂತ, ಸಮಾಜದಲ್ಲಿ ಜಾತಿ ಕ್ರೌರ್ಯ ಹೇಗಿದೆ ಎಂಬ ಹಿನ್ನೆಲೆಯಲ್ಲಿ ನೋಡಬೇಕಿದೆ.



ಕಾರ್ತೀಕ



ಹಂಸವೇಣಿ

ಬೇವಿನಹಳ್ಳಿ ಗ್ರಾಮದ ಒಕ್ಕಲಿಗ ಜಾತಿಗೆ ಸೇರಿದ ನಿಂಗಣ್ಣ-ಕಮಲಮ್ಮ ಎಂಬ ದಂಪತಿಗಳ ಪುತ್ರ ಕಾರ್ತಿಕ್‌ಗೆ 22ರ ಪ್ರಾಯ. ಅದೇ ಗ್ರಾಮದ ದಲಿತರ ಜನಾಂಗಕ್ಕೆ ಸೇರಿದ ರಮೇಶ್ ಮತ್ತು ಮಂಗಳಮ್ಮ ದಂಪತಿಗಳ ಪುತ್ರಿ 18ರ ಹರೆಯದ ಹಂಸವೇಣಿ ಕಳೆದ ಮೂರು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಮಂಡ್ಯದ ಸರ್ಕಾರಿ ಮಹಾವಿದ್ಯಾಲಯದಲ್ಲಿ ಬಿ.ಎ. ಓದುತ್ತಿದ್ದ ಕಾರ್ತಿಕ್ ಹಾಗೂ ಕೊತ್ತತ್ತಿಯ ಶ್ರೀ ವಿದ್ಯಾಗಣಪತಿ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ ಹಂಸವೇಣಿ ಒಂದೇ ಬೀದಿಯಲ್ಲಿದ್ದವರು. ಬಹುಶಃ ಜಾತಿವ್ಯವಸ್ಥೆಯ ಕ್ರೌರ್ಯ ಅರ್ಥವಾಗಿರುವ ಮೊದಲೇ ಪ್ರೀತಿಯ ಸೆಳೆತಕ್ಕೆ ಸಿಲುಕಿದವರು.

19ರ ಹರೆಯದಲ್ಲೇ ಕಾರ್ತಿಕ್ ಹಾಗೂ 15ರ ಹರೆಯದಲ್ಲೇ ಹಂಸವೇಣಿ ಪ್ರೀತಿಯ ಆಕರ್ಷಣೆಗೆ ಒಳಗಾಗಿದ್ದರಿಂದ .ಆಗ ಅವರಿಗೆ ಜಾತಿಯ ಸಮಸ್ಯೆಯೇ ಅರಿವಿಗೆ ಬಂದಿರಲಿಲ್ಲ. ಬೇವಿನಹಳ್ಳಿಯಲ್ಲಿ ಬಹುಸಂಖ್ಯಾತರಾದ ಒಕ್ಕಲಿಗರು ಹಾಗೂ ದಲಿತರು ಅನ್ಯೋನ್ಯವಾಗಿದ್ದರು. ಈಗೊಂದು ವರ್ಷದ ಹಿಂದೆ ಕ್ಷುಲ್ಲಕ ಕಾರಣಕ್ಕೆ ಘರ್ಷಣೆ ನಡೆದು ಕೆಲದಿನಗಳವರೆಗೆ ಪೊಲೀಸ್ ಬಂದೋಬಸ್ತ್ ಹಾಕಲಾಗಿತ್ತು, ಇದಾದನಂತರವೇ ಒಕ್ಕಲಿಗ ಜಾತಿಯ ಕಾರ್ತಿಕ್‌ಗೂ ದಲಿತ ವರ್ಗಕ್ಕೆ ಸೇರದ ಹಂಸವೇಣಿಗೂ ಜಾತಿ ವ್ಯವಸ್ಥೆಯ ಕ್ರೂರ ಮುಖದರ್ಶನವಾಗಿದ್ದು. ಜಾತಿಯೆಂಬ ಪೆಡಂಭೂತದ ಆತಂಕದ ನಡುವೆಯೇ ಮತ್ತೊಂದು ವರ್ಷ ಇವರ ಪ್ರೀತಿ ಕದ್ದುಮುಚ್ಚಿ ನಡೆದಿತ್ತು, ಇವರಿಬ್ಬರೂ ಪರಸ್ಪರ ಪ್ರೀತಿಸುತ್ತಿರುವ ವಿಷಯ ಕಾರ್ತಿಕ್ ಹಾಗೂ ಹಂಸವೇಣಿ ತಂದೆ-ತಾಯಿಗೆ ತಿಳಿದಿರಲಿಲ್ಲ, ಅಷ್ಟೇ ಏಕೆ ಇವರಿಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರೆಂಬುದು ಊರಿನವರಿಗಾಗಲೀ ಸ್ನೇಹಿತರಿಗಾಗಲೀ ತಿಳಿದಿದ್ದೇ ಇವರಿಬ್ಬರೂ ಪರಸ್ಪರ ಕೈಗಳನ್ನು ಕರ್ಚೀಫಿನಿಂದ ಕಟ್ಟಿಕೊಂಡು; ಒಬ್ಬರಿಗೊಬ್ಬರು ತಬ್ಬಿಕೊಂಡು ಬಾವಿಗೆ ಬಿದ್ದು ಹೆಣವಾಗಿ ಸಿಕ್ಕ ನಂತರವೇ.

ಕಾರ್ತಿಕ್ ಹಾಗೂ ಹಂಸವೇಣಿ ಪ್ರೀತಿಗೆ ಪೋಷಕರು ಅಡ್ಡಿಪಡಿಸಿರಲಿಲ್ಲ, ಆದರೂ ಅವರಿಬ್ಬರು ಆತ್ಮಹತ್ಯೆಗೆ ಶರಣಾಗಿದ್ದು, ತಮ್ಮಿಬ್ಬರದ್ದೂ ಬೇರೆ ಜಾತಿ ಎಂಬ ಕಾರಣದಿಂದಾಗಿಯೇ. ಜಾತಿಯ ಸಂಕೋಲೆಗಳಲ್ಲೇ ಬಂಧಿಯಾಗಿರುವ ಹೆತ್ತವರು, ಸಮಾಜದಲ್ಲಿ ಮೇಲು-ಕೀಳೆಂಬ ಜಾತಿ ವರ್ಗೀಕರಣ ಎಲ್ಲವನ್ನು ನೋಡಿ ಹೆದರಿದ ಕಾರ್ತಿಕ್ ಹಾಗೂ ಹಂಸವೇಣಿ ತಮ್ಮಿಬ್ಬರ ಪ್ರೇಮವು ವಿವಾಹವಾಗಿ ಅಂತ್ಯಗೊಳ್ಳುವುದು ಸಾಧ್ಯವೇ ಇಲ್ಲವೆಂದು ಭಾವಿಸಿ ಸಾವಿನಲ್ಲಾದರೂ ಒಂದಾಗೋಣ ಎಂದು ಅಕ್ಟೋಬರ್ 13ರಂದು ಡಿಸೈಡ್ ಮಾಡಿ ತಮ್ಮದೇ ಗ್ರಾಮದ ಹೊರವಲಯದಲ್ಲಿರುವ ಬಾವಿಗೆ ಬಿದ್ದು ಆತ್ಮಹತ್ಯೆಗೆ ಶರಣಾಗುವ ಮೂಲಕ ಜಾತಿ ವ್ಯವಸ್ಥೆಯ ಸಮಾಜಕ್ಕೆ ನೂರಾರು ಪ್ರಶ್ನೆಗಳನ್ನು ಎಸೆದಿದ್ದಾರೆ. ಇನ್ನಾದರೂ ಜಾತಿ ವ್ಯವಸ್ಥೆಯ ಕ್ರೂರನರ್ತನ ನಿಲ್ಲದಿದ್ದರೆ ಮುಂದೆಯೂ ಇಂತಹ ನೂರಾರು ಕಾರ್ತಿಕ್ ಹಾಗೂ ಹಂಸವೇಣಿ ಪ್ರಾಣ ಬಿಡುತ್ತಲೇ ಇರಬೇಕಾಗುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ಪ್ರಧಾನವಾಗಿ ಒಕ್ಕಲಿಗರೇ ಬಹುಸಂಖ್ಯಾತರಾದರೂ, ಸಾಕಷ್ಟು ಸಂಖ್ಯೆಯಲ್ಲಿ ಅಹಿಂದ ವರ್ಗವೂ ಇದೆ. ಅದರಲ್ಲೂ ದಲಿತರು ಹಾಗೂ ಒಕ್ಕಲಿಗರ ಮಧ್ಯೆ ಭಾರೀ ಕಂದಕವೇ ಇದೆ. ಒಂದು ವರ್ಷದ ಹಿಂದಷ್ಟೇ ಮದ್ದೂರು ತಾಲ್ಲೂಕಿನ ಆಬಲವಾಡಿ ಗ್ರಾಮದಲ್ಲಿ ಒಕ್ಕಲಿಗ ಜಾತಿಗೆ ಸೇರಿದ ಸುವರ್ಣ ಎಂಬಾಕೆ ತನ್ನದೇ ಗ್ರಾಮದ ದಲಿತ ಕೋವಿಂದ ಗೋವಿಂದರಾಜು ಎಂಬಾತನನ್ನು ಪ್ರೀತಿಸಿದ್ದಳೆಂಬ ಏಕೈಕ ಕಾರಣಕ್ಕೆ ಆಕೆಯ ತಂದೆ ದಮನಲ ರಾಮಕೃಷ್ಣ ಎಂಬಾತ ಮರ್ಯಾದೆ ಹತ್ಯೆಯ ಹೆಸರಲ್ಲಿ ತನ್ನ ಮಗಳನ್ನೇ ಬರ್ಬರವಾಗಿ ಕೊಂದು ಹಾಕಿದ್ದ. ಈ ಪ್ರಕರಣ ಇನ್ನೂ ಜನರ ಮನಸ್ಸಿನಲ್ಲಿರುವಾಗಲೇ ಕಾರ್ತಿಕ್ ಹಂಸವೇಣಿಯ ಪ್ರಕರಣ ಜಾತಿವ್ಯವಸ್ಥೆಯ ಕ್ರೂರ ವರ್ತನ ಮಾಡಿಸಿದೆ.

ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ


ಆಧುನಿಕ ಸಮಾಜದಲ್ಲಿ ಜಾತಿ ಇಲ್ಲವೇ ಇಲ್ಲ, ಮೀಸಲಾತಿ ಬೇಕಿಲ್ಲ, ಜಾತಿ ಸಮಸ್ಯೆಯೇ ಇಲ್ಲ ಎನ್ನುತ್ತಿರುವ ಜನರೇ ತಮ್ಮ ಮನಸ್ಸಿನಲ್ಲಿ ಜಾತಿಯ ಬಗ್ಗೆ ತುಂಬಾ ವ್ಯಾಮೋಹ ಇಟ್ಟುಕೊಂಡಿದ್ದಾರೆ. ಚಳವಳಿಗಳು ಉತ್ತುಂಗದಲ್ಲಿದ್ದ ಕಾಲದಲ್ಲಿ ಪ್ರಗತಿಪರ ವಾತಾವರಣ ನಿರ್ಮಾಣವಾಗಿ ಜಾತಿ ಸಂಕೋಲೆಗೆ ಒಂದಷ್ಟು ಕಡಿವಾಣ ಬಿದ್ದಿತ್ತು, ಬರುಬರುತ್ತಾ ಚಳವಳಿಗಳ ಪ್ರಭಾವ ಕಡಿಮೆಯಾದಂತೆ ರಾಜಕೀಯ ಪಕ್ಷಗಳು, ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಜಾತಿ ಧ್ರುವೀಕರಣ ಮಾಡಿದರು. ಸಮಾಜದಲ್ಲಿ ಮೇಲಿಂದ ಕೆಳಗಿನವರೆಗೆ ಜಾತಿ ವಿಘಟನೆ ಯಾಯಿತು. ಅದಕ್ಕೆ ಪರ್ಯಾಯವಾಗಿ ಜನರಲ್ಲಿ ಆಲೋಚನೆ, ಚಿಂತನೆಗಳು ದೊಡ್ಡ ಮಟ್ಟಕ್ಕೆ ಬೆಳವಣಿಗೆಯಾಗಲಿಲ್ಲ, ಇದರಿಂದಾಗಿ ಜಾತಿ ದೊಡ್ಡ ಪೆಡಂಭೂತವಾಗಿ ಕಾಡುತ್ತಿದೆ.

ಬೇವಿನಹಳ್ಳಿಯಲ್ಲಿ ಆತ್ಮಹತ್ಯೆಗೆ ಶರಣಾದ ಕಾರ್ತಿಕ್ ಮತ್ತು ಹಂಸವೇಣಿಯ ಪ್ರೀತಿ ಎಷ್ಟು ನೈಜ, ಸಮರ್ಥನೀಯ ಅನ್ನೋದು ಬೇರೆ ವಿಚಾರ. ಬಹಳ ಸಣ್ಣವಯಸ್ಸಿನಲ್ಲೇ ಪ್ರೀತಿ- ಪ್ರೇಮ ಎಂದು ಅದರ ಬಲೆಯಲ್ಲಿ ಸಿಲುಕಿ ಹೊರಬರಲಾಗದೆ, ಅಂತರ್ಜಾತಿ ಪ್ರೇಮಿಗಳು ಬದುಕಲು ಸಾಧ್ಯವಿಲ್ಲವೆಂಬ ಕೆಟ್ಟ ವ್ಯವಸ್ಥೆಯ ವಿರುದ್ಧ ಕಣ್ಣು ತೆರೆದು ನೋಡಿಕೊಳ್ಳಬೇಕಿದೆ. ಆಧುನಿಕ ಜೀವನ ಶೈಲಿಯಲ್ಲಿ ನಿಜವಾಗಲೂ ಆಧುನಿಕ ಆಲೋಚನೆ ಹುಟ್ಟಬೇಕು. ಆದರೆ ಆಧುನಿಕ ಜೀವನಶೈಲಿ ಜಾತಿವ್ಯವಸ್ಥೆಯ ಪೋಷಣೆ ಮಾಡುತ್ತಿರುವುದು ನಿಜವಾದ ಪ್ರಗತಿ ಎಂದು ಹೇಳಲಾಗುತ್ತಿದೆ.

ಆಧುನಿಕ ಜೀವನ ಬಿಂಬಿಸುತ್ತಿರುವ ಸಮಾಜ ಕೆಳಮಟ್ಟದಲ್ಲಿ ಜಾತಿ ವ್ಯವಸ್ಥೆಯನ್ನು ಸಲಹುತ್ತಿರುವುದು ಅಪಾಯದ ಸಂಗತಿ. ಈಗಿನ ಸರ್ಕಾರಗಳು ಕೂಡ ಜಾತಿವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಒಳ್ಳೆಯ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡುತ್ತಿಲ್ಲ, ಈ ಸಂದರ್ಭದಲ್ಲಿ ಸರ್ಕಾರ ಹಾಗೂ ಚಳವಳಿಗಳು ಆತ್ಮವಿಮರ್ಶೆ ಮಾಡಿಕೊಂಡು, ಜಾತಿಕಂದಕ ಎಷ್ಟು ಅಪಾಯಕಾರಿಯಾಗಿ ಬೇರೂರಿದೆ ಎಂಬುದನ್ನು ಅರ್ಥಮಾಡಿಕೊಂಡು ಪರ್ಯಾಯ ದಾರಿಯನ್ನು ಹುಡುಕಬೇಕಿದೆ. ಪರ್ಯಾಯ ಚಳವಳಿ ಹುಟ್ಟುವಾಕಲು ಈ ಘಟನೆ ನಿಜಕ್ಕೂ ಪ್ರೇರೇಪಿಸುವುದಂತಿದೆ.

■ ನಾಗೇಶ್

ಉಪನ್ಯಾಸಕರಿಗೆ ಸರ್ಕಾರಿ ಪೆಟ್ಟು



ಶಿಕ್ಷಣ ಸಚಿವ ವಿ. ದೇಶಪಾಂಡೆ

1986 ರಿಂದ ಆರ್ಥಿಕ ಸಂಕಷ್ಟದ ನೆಪದಲ್ಲಿ ಪದವಿ ಕಾಲೇಜುಗಳಿಗೆ ಕಾಯಂ ಉಪನ್ಯಾಸಕರ ನೇಮಕಾತಿ ನಿಲ್ಲಿಸಿದ ಕರ್ನಾಟಕದ ಘನ ಸರಕಾರ, ಆನಂತರ ಹೊರಡಿಸಿದ ಎಲ್ಲಾ ಸರಕಾರೀ ಆದೇಶಗಳು ಉನ್ನತ ಶಿಕ್ಷಣದ ಶವ ಪೆಟ್ಟಿಗೆಯ ಮೇಲೆ ಹೊಡೆದ ಮೊಳೆಗಳಂತೆಯೇ ಇವೆ. ಮೊದಲು 1986 ರಲ್ಲಿ ಬೋಧಕ ಬೋಧಕೇತರ ಸಿಬ್ಬಂದಿಗಳ ಕಾಯಂ ನೇಮಕಾತಿ ನಿಲ್ಲಿಸಿದರು. ನಂತರ 2002 ರಲ್ಲಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳ ವಿಭಜನೆ ಮಾಡಿದರು. ಬಳಿಕ ಅನುದಾನರಹಿತ ವಿಷಯಗಳ ಜೊತೆಗೆ ಅನುದಾನವಿರುವ ವಿಷಯಗಳನ್ನು ಸೇರಿಸಿದರೆ ಆ ಇಡೀ ಸಂಯೋಜನೆಯೇ ಅನುದಾನರಹಿತವಾಗುತ್ತದೆ ಎಂದರು. ಆಮೇಲೆ ಆಧುನಿಕ ಅವಶ್ಯಕತೆಗೆ ಬೇಕಾಗಿ ಹೊಸ ವಿಷಯಗಳಾದ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಬಯೋಟೆಕ್ನಾಲಜಿ, ಬಯೋಕೆಮಿಸ್ಟ್ರಿ, ಮೈಕ್ರೋಬಯಾಲಜಿ, ಪತ್ರಿಕೋದ್ಯಮ, ಅನಿಮೇಶನ್, ಸೈಕಾಲಜಿ - ಇತ್ಯಾದಿ ವಿಷಯಗಳನ್ನು ಹೊಸದಾಗಿ ಪ್ರಾರಂಭಿಸಿದರೆ ಆ ವಿಷಯಗಳಿಗೆ ಅನುದಾನ ಕೊಡಲಿಲ್ಲ, ಆನಂತರ ಹೊಸದಾಗಿ ಪ್ರಾರಂಭವಾದ ಯಾವ ಕಾಲೇಜುಗಳಿಗೂ ಅನುದಾನ ಕೊಡಲಿಲ್ಲ, ಆ ಮೂಲಕ 1977 ರಲ್ಲಿ ಪ್ರಾರಂಭವಾದ ಪಿಪಿಪಿ- ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್ ಶೈಕ್ಷಣಿಕ ಒಪ್ಪಂದದ ಅನುದಾನ ವ್ಯವಸ್ಥೆಗೆ ನಿಧಾನ- ವಿಷ ಉಣಿಸಲು ತೊಡಗಿದರು. ಇತ್ತೀಚೆಗೆ ವಿಜ್ಞಾನ, ಕಲಾ, ವಾಣಿಜ್ಯ ಪದವಿಗಳಿಗೆಲ್ಲಾ ಭಾಷೆಗಳಿಗೆ ಏಕ ಪಠ್ಯಪುಸ್ತಕವಿರಬೇಕೆಂಬ ಆದೇಶ ಹೊರಡಿಸಿ ರಾಜ್ಯಾದ್ಯಂತದ ಸಾವಿರಾರು ಭಾಷಾ ವಿಷಯಗಳ ಅತಿಥಿ ಉಪನ್ಯಾಸಕರಲ್ಲಿ ಉದ್ಯೋಗ ಕಳೆದುಕೊಳ್ಳುವ ಆತಂಕ ಹುಟ್ಟಿಸಿದರು. ಅತಿಥಿ ಉಪನ್ಯಾಸಕರು ಒಂದೇ ಸರಕಾರೀ ಕಾಲೇಜುಗಳಲ್ಲಿ ಅಂಶಕಾಲಿಕ ಕೆಲಸ ಮಾತ್ರ ಮಾಡಬೇಕೆಂಬ ಆದೇಶ ಹೊರಡಿಸಿ ಅವರ ತಿಂಗಳ ಆದಾಯ 8,000/- ರೂಪಾಯಿಗೆ ಸೀಮಿತಗೊಳಿಸಿ, ಆ ವೇತನವನ್ನೂ ವರ್ಷದ ಕೊನೆಗೆ ಕೊಡುವಂತೆ ಮಾಡಿದರು.

ಹೀಗೆ ಆದೇಶ ಹೊರಡಿಸುವ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸಚಿವರು ಹೇಳುವ ಕಾರಣ: ಕಾಲೇಜು ಶಿಕ್ಷಕರುಗಳಿಗೆ ಕೈತುಂಬಾ ಯುಜಿಸಿ ವೇತನ ದೊರೆಯುತ್ತಿದೆ. ಆದರಿಂದ ಸರಕಾರಕ್ಕೆ ಆರ್ಥಿಕ ಹೊರೆ ಜಾಸ್ತಿಯಾಗುತ್ತಿದೆ. ಅದು ಪ್ರಜೆಗಳ ಹಣ, ಅದು ಪೋಲು ಆಗಬಾರದು. ಯುಜಿಸಿ ವೇತನ ಪಡೆಯುವ ಉಪನ್ಯಾಸಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಇತ್ಯಾದಿ. ಮೊನ್ನೆ, ನಮ್ಮ ಅಹಿಂದ ಹಿನ್ನೆಲೆಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಂಪುಟದ ಉನ್ನತ ಶಿಕ್ಷಣ ಸಚಿವ ಆರ್.ವಿ.ದೇಶಪಾಂಡೆಯವರೂ ಕೂಡಾ ಗಿಳಿಪಾಠ ಒಪ್ಪಿಸಿದಂತೆ ಅದೇ ಆರೋಪವನ್ನು ಮಾಡಿದ್ದು.

ಆದರೆ ಇವರು ಯಾರಿಗೂ ಅರ್ಥವಾಗದಿರುವ ಕಟುಸತ್ಯ ಏನೆಂದರೆ, ಪದವಿ ಕಾಲೇಜುಗಳಿಗೆ ನಿಯಮಿತ ಕಾಯಂ ಉಪನ್ಯಾಸಕರ ನೇಮಕಾತಿ ನಿಂತು 25 ವರ್ಷ ಮೇಲ್ಪಟ್ಟಿದೆ. ಈಗ ಎಲ್ಲಾ ಕಾಲೇಜುಗಳಲ್ಲಿ ಇರುವುದು ಕೇವಲ ಶೇಕಡ 20 ಯುಜಿಸಿ ಸಂಬಳ ಪಡೆಯುವ ಉಪನ್ಯಾಸಕರು. ಉಳಿದ ಶೇಕಡ 80 ರಲ್ಲಿ ಒಂದೋ ಅತಿಥಿ ಉಪನ್ಯಾಸಕರು ಅಥವಾ ಖಾಸಗಿ ಆಡಳಿತ ಮಂಡಳಿಗಳಿಂದ ತಾತ್ಕಾಲಿಕ ನೆಲೆಯಲ್ಲಿ ನೇಮಕಗೊಂಡ ಉಪನ್ಯಾಸಕರು. ಸರಕಾರ ಯುಜಿಸಿ ಉಪನ್ಯಾಸಕರ ಸಂಬಳದ ಮೇಲಿನ ಸಿಟ್ಟಿನಿಂದ ಆದೇಶಗಳನ್ನು ಹೊರಡಿಸಿದಾಗ, ಅದರ ಅಂತಿಮ ಪೆಟ್ಟು ಬೀಳುವುದು ಈ ಬಡಪಾಯಿ ಉಪನ್ಯಾಸಕರ ಮೇಲೆ. ಇದು ಉನ್ನತ ಶಿಕ್ಷಣದ ದುರಂತ. ಇದನ್ನು ಎಲ್ಲರೂ, ಮುಖ್ಯವಾಗಿ ಉನ್ನತ ಶಿಕ್ಷಣದ ಅಧಿಕಾರಿಗಳು ಮತ್ತು ಸಚಿವರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

ಈಗ ಕೂಡಲೇ ಆಗಬೇಕಾದುದು 1986ರಲ್ಲಿ ಆರ್ಥಿಕ ಬಿಕ್ಕಟ್ಟು ಹೆಸರಿನಲ್ಲಿ ನಿಲ್ಲಿಸಲ್ಪಟ್ಟ ಬೋಧಕಬೋಧಕೇತರರ ಕಾಯಂ ನೇಮಕಾತಿ ಪ್ರಕ್ರಿಯೆಯ ಮರು ಪ್ರಾರಂಭ. ಅಲ್ಲಿ ಕೂಡಾ ಹೊಸ ಉಪನ್ಯಾಸಕರ ನೇಮಕಾತಿ ಆಗಬಾರದು. ಈಗಾಗಲೇ ಹಲವು ವರ್ಷ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಮೀಸಲಾತಿ ನಿಯಮದ ಆಧಾರದಲ್ಲಿ ಅಲ್ಲಲ್ಲೇ ಅದೇ ಕಾಲೇಜುಗಳಲ್ಲಿ ಉದ್ಯೋಗ ಕೊಟ್ಟರೆ ಸಹಜ ನ್ಯಾಯ ಆದೀತು. ಖಾಸಗೀಕರಣದ ಪ್ರಕ್ರಿಯೆ ಮತ್ತು ಶೋಷಣೆ ಕೊನೆಗೊಂಡೀತು.

ಪ್ರಸ್ತುತ ಕರ್ನಾಟಕದಲ್ಲಿ ಸುಮಾರು 300 ಅನುದಾನಿತ ಕಾಲೇಜುಗಳು ಮತ್ತು 350 ಕ್ಕೂ ಹೆಚ್ಚು ಸರಕಾರೀ ಕಾಲೇಜುಗಳು ಇವೆ. ಈ 350 ಸರಕಾರೀ ಕಾಲೇಜುಗಳಲ್ಲಿ ಸುಮಾರು 10,600 ಅಂಶಕಾಲಿಕ ಉಪನ್ಯಾಸಕರು ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನುದಾನಿತ ಖಾಸಗಿ ಕಾಲೇಜುಗಳಲ್ಲಿ ಅದಕ್ಕಿಂತ ಎರಡುಪಟ್ಟು ತಾತ್ಕಾಲಿಕ ಉಪನ್ಯಾಸಕರಿದ್ದಾರೆ.

ಈಗ ವಿಜ್ಞಾನ ವಿಷಯಗಳ ಪ್ರಾಕ್ಟಿಕಲ್ಸ್ - ಪ್ರಯೋಗಾಲಯದ ಕಾರ್ಯಭಾರದ ಮರುಹಂಚಿಕೆಯಾದರೆ, ಸರಕಾರೀ ಕಾಲೇಜುಗಳ ಸುಮಾರು 300 ವಿಜ್ಞಾನದ ಉಪನ್ಯಾಸಕರು ತಮ್ಮ ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಹೀಗೆಂದು ಉನ್ನತ ಶಿಕ್ಷಣ ಸಚಿವ ಆರ್.ವಿ.ದೇಶಪಾಂಡೆಯವರೇ ಹೇಳಿದ್ದಾರೆ. ಅನುದಾನಿತ ಕಾಲೇಜುಗಳ ಹೆಚ್ಚುವರಿ (!) ಉಪನ್ಯಾಸಕರನ್ನು ಸರಕಾರೀ ಕಾಲೇಜುಗಳಿಗೆ ಕಳುಹಿಸಿದರೆ ಈ ದುಷ್ಪರಿಣಾಮ ಉಂಟಾಗುತ್ತದೆ. ಇನ್ನು ಅನುದಾನಿತ ಕಾಲೇಜುಗಳಲ್ಲಿ 300 ಕಾಲೇಜುಗಳಿಂದ ಕನಿಷ್ಠ 600 ಜನರಿಗೆ ಈ (ಅಲಿಖಿತ) ಆದೇಶದಿಂದ ತೊಂದರೆಯಾಗಲಿದೆ. ವಿಜ್ಞಾನದ ಯುವ ಉಪನ್ಯಾಸಕರು ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಕಾಯಂ ನೇಮಕಾತಿಯ ಉಪನ್ಯಾಸಕರಿಗೆ ದೂರ ದೂರದ ಕಾಲೇಜುಗಳಿಗೆ ವರ್ಗಾವಣೆಯಾಗಲಿದೆ.

ಈ ಬಗ್ಗೆ ಕೆಲವು ವಿಜ್ಞಾನದ ಅಧ್ಯಾಪಕರನ್ನೇ ಭೇಟಿಯಾಗಿ ಮಾತನಾಡಿಸಿದಾಗ ಅವರು ಕರಾರುವಾಕ್ಕಾಗಿ ಅಂಕಿ ಅಂಶಗಳನ್ನು ಒದಗಿಸಿದರು.

ಸದ್ಯ ಪದವಿ ಕಾಲೇಜುಗಳಲ್ಲಿ ವಿಜ್ಞಾನದ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಸಂಖ್ಯಾಶಾಸ್ತ್ರಗಳಂತಹ ವಿಷಯಗಳು ಅನುದಾನಿತ ವಿಷಯಗಳೆಂದು ಕಲಿಸಲ್ಪಡುತ್ತಿವೆ. ಅವುಗಳ ಸಂಯೋಜನೆ ಪಿಸಿಎಂ, ಪಿಸಿಎಸ್, ಬಿಜೆಡ್‌ಸಿ - ಈ ರೀತಿ ಇರುತ್ತದೆ. ಹಾಲೀ ಯುಜಿಸಿ ವೇತನ ಪಡೆಯುತ್ತಿರುವ ಉಪನ್ಯಾಸಕರು ಸರಕಾರೀ ಆದೇಶದ ಪ್ರಕಾರ ಈ ಅನುದಾನಿತ ವಿಷಯಗಳ ಸಂಯೋಜನೆಗೆ ಮಾತ್ರ ಕಲಿಸಬೇಕು. ಆದರೆ 1987-88ರ ನಂತರ ಆಧುನಿಕ ಮಾರುಕಟ್ಟೆಯ ಬೇಡಿಕೆಯ ಅನುಗುಣವಾಗಿ ಕಂಪ್ಯೂಟರ್ ವಿಜ್ಞಾನ, ಎಲೆಕ್ಟ್ರಾನಿಕ್ಸ್ ಬಯೋಕೆಮಿಸ್ಟ್ರಿ, ಬಯೋಟೆಕ್ನಾಲಜಿ, ಪತ್ರಿಕೋದ್ಯಮ, ಮನಃಶಾಸ್ತ್ರ, ಎನಿಮೇಶನ್, ಕ್ರಿಮಿನಾಲಜಿಗಳಂತಹ ವಿಷಯಗಳನ್ನು ಹಲವು ಅನುದಾನಿತ ಕಾಲೇಜುಗಳಲ್ಲಿ ಪ್ರಾರಂಭಿಸಿದ್ದಾರೆ. ಆದರೆ ಆರ್ಥಿಕ ಬಿಕ್ಕಟ್ಟಿನ ನೆಪ ಹೇಳಿ ಸರಕಾರ ಈ ಹೊಸ ವಿಷಯಗಳಿಗೆ ಅನುದಾನ ನೀಡಿಲ್ಲ, ಮಾತ್ರವಲ್ಲ ಈ ವಿಷಯಗಳನ್ನು ಅನುದಾನಿತ ವಿಷಯಗಳ ಜೊತೆ ಸೇರಿಸಿದರೆ ಆ ಇಡೀ ಸಂಯೋಜನೆಗೆ ಅನುದಾನ ಇಲ್ಲ ಎಂದು ಹೇಳಿ ವಿಜ್ಞಾನದ ಅಧ್ಯಾಪಕರನ್ನು ಸರಕಾರ ಸಂಕಷ್ಟಕ್ಕೀಡುಮಾಡಿದೆ. ಈ ಆದೇಶದಿಂದಾಗಿ ಫಿಸಿಕ್ಸ್ ಕೆಮಿಸ್ಟ್ರಿ, ಕಂಪ್ಯೂಟರ್ ಸೈನ್ಸ್‌ನಂತಹ ಸಂಯೋಜನೆಗಳಿಗೆ ಯುಜಿಸಿ ವೇತನ ಪಡೆಯುವ ಅನುದಾನಿತ ಪ್ರೊಫೆಸರ್‌ಗಳು ಪಾಠ ಮಾಡುವಂತಿಲ್ಲ, ಅಂತಹ ಸಂಯೋಜನೆಗಳಿಗೆ ಅನುದಾನರಹಿತ ಉಪನ್ಯಾಸಕರು ಪಾಠ ಮಾಡುತ್ತಿದ್ದಾರೆ. ಇನ್‌ಫೋಸಿಸ್‌ನಂತಹ ಆಧುನಿಕ ತಾಂತ್ರಿಕ ಸಂಸ್ಥೆಗಳಲ್ಲಿ ಕೆಲಸ ಸಿಗುತ್ತದೆ ಎಂಬ ಕಾರಣಕ್ಕೆ ಹೆಚ್ಚಿನ ವಿದ್ಯಾರ್ಥಿಗಳು ಈ ಪಿಸಿಸಿಎಸ್ ಅನ್ನೇ ಆರಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಭೌತಶಾಸ್ತ್ರ ರಸಾಯನಶಾಸ್ತ್ರಗಳಂತಹ ಮೂಲ ವಿಜ್ಞಾನಕ್ಕೆ ವಿದ್ಯಾರ್ಥಿಗಳು ಬರುತ್ತಿಲ್ಲ ಎನ್ನುವ ಕೃತಕ ಸಮಸ್ಯೆ ಉದ್ಭವಿಸಿದೆ. ಇದು ಸರಕಾರದ ಹೊಸ ವಿಷಯಗಳಿಗೆ ಅನುದಾನ ನೀಡದ ಆದೇಶಗಳಿಂದಲೇ ಉಂಟಾದ ಸಮಸ್ಯೆ.

ಇನ್ನು ಪ್ರಯೋಗಾಲಯದ ಕಾರ್ಯಭಾರ ಹಂಚಿಕೆಯ ಬಗ್ಗೆ

1996 ರ ಸ್ಪಷ್ಟ ಸರಕಾರೀ ಆದೇಶದ ಪ್ರಕಾರ ಈಗ ವಿಜ್ಞಾನದ ಅಧ್ಯಾಪಕರು ವಾರಕ್ಕೆ 20 ಗಂಟೆ ತರಗತಿ ತೆಗೆದುಕೊಳ್ಳುತ್ತಿದ್ದಾರೆ. ಅದರಲ್ಲಿ 5 ಅಥವಾ 6 ಗಂಟೆ ಥಿಯರಿ (ವೈಜ್ಞಾನಿಕ ತತ್ವಸಿದ್ಧಾಂತಗಳ ಬಗ್ಗೆ ಪ್ರವಚನ) ಮತ್ತು ಉಳಿದ 14 ಗಂಟೆಗಳನ್ನು ವಿದ್ಯಾರ್ಥಿಗಳಿಗೆ ನಿರ್ದೇಶನ ಮತ್ತು ಪಾಠ ಮಾಡುತ್ತಾ ಪ್ರಯೋಗಾಲಯಗಳಲ್ಲಿ ಕಳೆಯುತ್ತಾರೆ. ಪ್ರಯೋಗಾಲಯಗಳಲ್ಲಿ ವಿಜ್ಞಾನದ ವಿದ್ಯಾರ್ಥಿಗಳಿಗೆ ವೈಯಕ್ತಿಕ ಗಮನ ಕೊಟ್ಟು ಪ್ರಯೋಗ ಮಾಡಿಸಬೇಕಾಗುವುದರಿಂದ ಕಾರ್ಯಭಾರದ ಹಂಚಿಕೆ ಈ ರೀತಿ ಇದೆ.. ಮೊದಲ 15 ವಿದ್ಯಾರ್ಥಿಗಳಿಗೆ ಒಬ್ಬ ಉಪನ್ಯಾಸಕ, ನಂತರ 16 ರಿಂದ 27 ವಿದ್ಯಾರ್ಥಿಗಳ ಸಂಖ್ಯೆಗೆ ಎರಡು ಉಪನ್ಯಾಸಕರು, ನಂತರ 28 ರಿಂದ 36 ವಿದ್ಯಾರ್ಥಿ ಸಂಖ್ಯೆಗೆ ಮೂವರು ಉಪನ್ಯಾಸಕರು. 36 ರಿಂದ 44 ಸಂಖ್ಯೆಯ ವಿದ್ಯಾರ್ಥಿಗಳಿಗೆ ನಾಲ್ಕು ಉಪನ್ಯಾಸಕರು..... ಹೀಗೆ ಈ ವ್ಯವಸ್ಥೆ 1996 ರಿಂದ ನಡೆದುಬಂದಿದೆ.

ಆದರೆ ಈಗ ಬಂದಿರುವ (ಅಲಿಖಿತ) ಆದೇಶದ ಪ್ರಕಾರ 15 ಜನ ವಿದ್ಯಾರ್ಥಿಗಳಿಗೆ ಒಂದರಂತೆ, 15 ರ ಗುಣಾಕಾರದಲ್ಲಿ ಪ್ರಯೋಗಾಲಯದ ಕಾರ್ಯಭಾರ ಲೆಕ್ಕ ಹಾಕಬೇಕಾಗಿದೆ. ಇದರಿಂದ ಹಲವು ಹಿರಿಯ ವಿಜ್ಞಾನದ ಅಧ್ಯಾಪಕರಿಗೆ ದೂರದ ಊರುಗಳಿಗೆ ವರ್ಗಾವಣೆಯಾಗಲಿದೆ ಮತ್ತು ಅತಿಥಿ ಹಾಗೂ ಆಡಳಿತ ಮಂಡಳಿಯ ಉಪನ್ಯಾಸಕರು ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಮಂಗಳೂರಿನ ಓರ್ವ ಕಂಪ್ಯೂಟರ್ ಸೈನ್ಸ್ ಉಪನ್ಯಾಸಕಿಯನ್ನು ಚೆನ್ನರಾಯಪಟ್ಟಣಕ್ಕೆ ವರ್ಗಾವಣೆ ಮಾಡಲಾಗಿದೆ. ಬೆಂಗಳೂರಿನ ನಾಲ್ಕು ಭೌತಶಾಸ್ತ್ರ ಉಪನ್ಯಾಸಕರನ್ನು ಉಡುಪಿಯ ಬಾರ್ಕೂರಿಗೆ ವರ್ಗಾವಣೆ ಮಾಡಲಾಗಿದೆ. ಅದೇ ಹೊತ್ತಿಗೆ ಅಲ್ಲಿರುವ ಅತಿಥಿ ಮತ್ತು ಆಡಳಿತ ಮಂಡಳಿಯ ಉಪನ್ಯಾಸಕರನ್ನು ಮನೆಗೆ ಕಳುಹಿಸಲಾಗುತ್ತಿದೆ. ನಾನು ಸಂದರ್ಶನ ನಡೆಸಿದ ಕೆಲವು ವಿಜ್ಞಾನದ ಶಿಕ್ಷಕರು ತಮ್ಮ ಗೋಳು ಮತ್ತು ಆತಂಕಗಳನ್ನು ಹೀಗೆಂದು ನನ್ನ ಬಳಿ ಹಂಚಿಕೊಂಡರು.

ರಸಾಯನಶಾಸ್ತ್ರ, ಭೌತಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಕಂಪ್ಯೂಟರ್ ಸೈನ್ಸ್ - ಎಲ್ಲಾ ಒಂದೇ ಅಲ್ಲ, ಪ್ರತಿಯೊಂದು ವಿಷಯಕ್ಕೂ ಅದರದ್ದೇ ಆದ ಅನನ್ಯ ಸಮಸ್ಯೆಗಳಿವೆ. ಸರಕಾರಕ್ಕೆ ಆರ್ಥಿಕ ಹೊರೆಯಾಗುತ್ತಿದೆ ಎಂದು ಹೇಳುತ್ತಿರುವ ಉನ್ನತ ಶಿಕ್ಷಣದ ಸಚಿವರು ಮತ್ತು ಅಧಿಕಾರಿಗಳಿಗೆ ಈ ವೈಜ್ಞಾನಿಕ ವಿಷಯಗಳ ಅನನ್ಯತೆ ಮತ್ತು ವಿಶೇಷತೆಗಳ ಅರ್ಥವಾಗಬೇಕಿದೆ.

ಭೌತಶಾಸ್ತ್ರದ ಪ್ರಯೋಗಾಲಯದಲ್ಲಿ ತುಂಬಾ ದುಬಾರಿಯಾದ ಬೆಲೆಯ ಯಂತ್ರಗಳನ್ನು ಅಳವಡಿಸಬೇಕಾಗುತ್ತದೆ. ರೇಡಿಯೇಶನ್ ಅಳತೆ ಮಾಡುವ ಜಿ.ಎಂ.ಕೌಂಟರ್ ಎನ್ನುವ ಯಂತ್ರಕ್ಕೆ 45 ರಿಂದ 60 ಸಾವಿರ ರೂಪಾಯಿ ಬೆಲೆಯಿದೆ. ಸ್ಪೆಕ್ಟ್ರೋಮೀಟರ್‌ಗೆ 15 ರಿಂದ 20 ಸಾವಿರ ರೂಪಾಯಿ ಬೆಲೆ ಇದೆ. ಸಿಆರ್‌ಒಗೆ 25 ಸಾವಿರ ರೂಪಾಯಿ ಇದೆ. ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ಗುಣಮಟ್ಟದ ಶಿಕ್ಷಣ ಕೊಡಬೇಕು ಎನ್ನುವ ಕಾರಣಕ್ಕೆ ದುಬಾರಿಯಾಗಿದ್ದರೂ ಇಂತಹ ಯಂತ್ರಗಳನ್ನು ಪ್ರಯೋಗಾಲಯಗಳಲ್ಲಿ ಅಳವಡಿಸಿರುತ್ತಾರೆ. ಮೂರು ವಿದ್ಯಾರ್ಥಿಗಳಿಗೆ ಒಂದು ಯಂತ್ರದ ಹಾಗೆ ಎಂಟು ಯಂತ್ರ ಇದ್ದರೆ ಆ ಎಲ್ಲಾ ಎಂಟು ಯಂತ್ರದ ಬಳಿ ಹೋಗಿ ವಿವರಿಸಿ ಹೇಳಬೇಕಾಗುತ್ತದೆ. ವಿದ್ಯಾರ್ಥಿಗಳು ವಿದ್ಯುತ್‌ಶಕ್ತಿಯನ್ನು ಹೆಚ್ಚು ಕಡಿಮೆ ಮಾಡಿದರೆ ಯಂತ್ರ ಕೆಟ್ಟು ಹೋಗಿ ಪ್ರಯೋಗ ಮಾಡಲು ಆಗುವುದಿಲ್ಲ, ಅನುದಾನಿತ ಕಾಲೇಜುಗಳಲ್ಲಿ ಕೆಲವೊಮ್ಮೆ ಸಂಜೆ 4.30ಕ್ಕೆ ಮುಗಿಸಬೇಕಾದ ಪ್ರಯೋಗ 6.30 ಆದರೂ ಮುಗಿಯುವುದಿಲ್ಲ, ಎಷ್ಟೋ ಸರಕಾರೀ ಕಾಲೇಜುಗಳಲ್ಲಿ ಯಂತ್ರಗಳು ಕೆಟ್ಟು ಹೋಗಿ ರಿಪೇರಿ ಆಗದೆ ವಿಜ್ಞಾನದ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡಲು ಆಗುತ್ತಿಲ್ಲ, ಇದೆಲ್ಲಾ ವಿಜ್ಞಾನದ ಬಗ್ಗೆ ನಿಜವಾದ ಆಸಕ್ತಿ ಮತ್ತು ಗೌರವ ಇದ್ದವರಿಗೆ ಅರ್ಥವಾದೀತು.


ಹಿರಿಯ ಅಧ್ಯಾಪಕರು 5 ಗಂಟೆ ತರಗತಿಯ ಪಾಠ ಮಾಡಿ, ಉಳಿದ 15 ಗಂಟೆಗಳನ್ನು ಪ್ರಯೋಗಾಲಯದಲ್ಲಿ ಕಳೆಯುತ್ತಾರೆ. ಹೊಸದಾಗಿ ವೃತ್ತಿಗೆ ಸೇರಿದ ಯುವ ಉಪನ್ಯಾಸಕರಿಗೆ ಕೆಲವೊಮ್ಮೆ 20 ರಲ್ಲಿ 18 ಗಂಟೆ ಪ್ರಾಕ್ಟಿಕಲ್ಸ್ ಕೊಟ್ಟು 2 ಗಂಟೆ ಮಾತ್ರ ಥಿಯರಿ ಕೊಡುವುದಿದೆ. ಥಿಯರಿ ಕ್ಲಾಸ್ ಮಾಡುವುದು ಸುಲಭ. ಪ್ರಾಕ್ಟಿಕಲ್ ಮಾಡಲು ತುಂಬಾ ಸಹನೆ ಬೇಕು. ಅಲ್ಲಿ ಹೆಚ್ಚು ಜವಾಬ್ದಾರಿ ಆತಂಕ. ವಿಭಾಗದಲ್ಲಿ ಯಾರಾದರೂ ರಜೆ ಹಾಕಿದರೆ, ಥಿಯರಿ ಕ್ಲಾಸಿನಂತೆ ಪ್ರಾಕ್ಟಿಕಲ್ ಕ್ಲಾಸ್ ಬಿಡಲಾಗುವುದಿಲ್ಲ, ಆಗ ಕೆಲಸದ ಹೊರೆ ಜಾಸ್ತಿಯಾಗುತ್ತದೆ.

ರಸಾಯನಶಾಸ್ತ್ರದ ಪ್ರಯೋಗಾಲಯದಲ್ಲಿ ರಾಸಾಯನಿಕಗಳನ್ನು ಪ್ರನಾಳಿಕೆಗಳಲ್ಲಿ ಹಿಡಿದಿರುವಾಗ ತುಂಬಾ ಜಾಗರೂಕತೆಯಿಂದ ಇರಬೇಕಾಗುತ್ತದೆ. ಕೆಲವೊಮ್ಮೆ, ಅಪಾಯಕಾರೀ ಆ್ಯಸಿಡ್‌ಗಳನ್ನು ಉಪಯೋಗಿಸುವಾಗ, ಸ್ವಲ್ಪ ಹೆಚ್ಚು ಕಡಿಮೆಯಾದರೂ ವಿದ್ಯಾರ್ಥಿಗಳ ಜೀವಕ್ಕೆ ಅಪಾಯ ಆಗಬಹುದು.

ಆದ್ದರಿಂದ ಪ್ರಯೋಗಾಲಯಗಳಲ್ಲಿ ಪ್ರತೀ ಉಪನ್ಯಾಸಕರಿಗೆ ಹಂಚಿಕೊಡುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಬಾರದು.

ಶಿವಮೊಗ್ಗದ ಜೆ.ಡಿ. ಹೇಳುತ್ತಾರಂತೆ - "ಪ್ರಾಕ್ಟಿಕಲ್ ಕ್ಲಾಸ್ ಸಿ ಒನ್ಲಿ ಅಬ್ಸರ್ವೇಶನ್. ಇಟ್ ಇಸ್ ನಾಟ್ ಎ ಕ್ಲಾಸ್".

ಇಂತಹ ಬೇಜವಾಬ್ದಾರಿ ಮಾತುಗಳನ್ನು ಸರಕಾರೀ ಅಧಿಕಾರಿಗಳು ಮಾತನಾಡಬಾರದು. ಅದೇ ರೀತಿ ಕಮಿಷನರ್ ಶ್ರೀ ಚೆನ್ನಪ್ಪ ಗೌಡರಿಗೆ ಮತ್ತು ಪ್ರಿನ್ಸಿಪಾಲ್ ಸೆಕ್ರೆಟರಿ ಶ್ರೀ ರಜನೀಶ್ ಗೋಯಲ್‌ರಿಗೆ ಕಾಲೇಜು ಉಪನ್ಯಾಸಕರ



ರಜನೀಶ್ ಗೋಯಲ್

ದಿನನಿತ್ಯದ ಸಮಸ್ಯೆ ಅರ್ಥವಾಗಬೇಕು.

ಅಷ್ಟು ಮಾತ್ರವಲ್ಲದೆ ಇತ್ತೀಚೆಗೆ ಮೂಲವಿಜ್ಞಾನಕ್ಕೆ ಪ್ರೋತ್ಸಾಹ ಕೊಡುವ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ 80 ಸಾವಿರ ರೂಪಾಯಿಯ ಇನ್ಸ್‌ಪಾಯರ್ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಆ ವಿದ್ಯಾರ್ಥಿಗಳು ಮೈನರ್ ಪ್ರಾಜೆಕ್ಟ್‌ಗಾಗಿ ಸಂಶೋಧನೆ ಕೂಡಾ ಮಾಡಬೇಕಾಗಿದೆ.. ಅಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಕೂಡಾ ವಿಜ್ಞಾನದ ಉಪನ್ಯಾಸಕರು ಮಾಡಬೇಕಾಗುತ್ತದೆ.

ಕಾಲೇಜು ಅಧ್ಯಾಪಕರು ಬರೇ ವಾರಕ್ಕೆ 16-20 ಗಂಟೆ ಪಾಠ ಮಾಡುವುದಲ್ಲ, ಸಂಶೋಧನಾ ಕೆಲಸ ಮಾಡಬೇಕು. ಎನ್‌ಎಸ್‌ಎಸ್/ಎನ್‌ಸಿಸಿಯಂತಹ ವಿಸ್ತರಣಾ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಪೂರಕ ಪಠ್ಯ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಬೇಕಾಗುತ್ತದೆ. ಅದರ ಜೊತೆಗೆ ಪ್ರಾಂಶುಪಾಲರ ಜೊತೆಗೆ ಆಡಳಿತಾತ್ಮಕ ಕೆಲಸಗಳನ್ನು ಮಾಡಬೇಕಾಗುತ್ತದೆ.

ಉನ್ನತ ಶಿಕ್ಷಣ ಸಚಿವರಾದ ಆರ್.ವಿ.ದೇಶಪಾಂಡೆಯವರು ಕೇವಲ 300 ಉಪನ್ಯಾಸಕರಿಗೆ ಮಾತ್ರ ತೊಂದರೆಯಾದೀತು ಎಂದಿದ್ದಾರೆ. ಅದು ಸರಕಾರೀ ಕಾಲೇಜುಗಳಲ್ಲಿರುವ ಅತಿಥಿ ಉಪನ್ಯಾಸಕರಿಗೆ ಕರ್ನಾಟಕದ ಇತರ 300 ಅನುದಾನಿತ ಕಾಲೇಜುಗಳಲ್ಲಿರುವ ಕನಿಷ್ಠ 600 ವಿಜ್ಞಾನದ ಉಪನ್ಯಾಸಕರಿಗೆ ಈ ಕಾರ್ಯಭಾರ ಹಂಚಿಕೆಯ ಪಿತೂರಿಯಿಂದ ತೊಂದರೆಯಾಗಲಿದೆ. ಆದ್ದರಿಂದ ಕೂಡಲೇ ಈ ಅಲಿಖಿತ (ಯಾಕೆಂದರೆ ಲಿಖಿತ ಆದೇಶ ನಮ್ಮ ಗಮನಕ್ಕೆ ಬಂದಿಲ್ಲ) ಆದೇಶವನ್ನು ಹಿಂತೆಗೆದುಕೊಳ್ಳಬೇಕು. 1996 ರ ಆದೇಶದಂತೆ ಪ್ರಯೋಗಾಲಯದ ಕಾರ್ಯಭಾರ ಹಂಚಿಕೆ ಮುಂದುವರಿಯಬೇಕು.

ಮಾನ್ಯ ಉನ್ನತ ಶಿಕ್ಷಣದ ಸಚಿವ ಆರ್.ವಿ.ದೇಶಪಾಂಡೆಯವರು ತಮ್ಮ ಇಲಾಖೆಯ ಅಧಿಕಾರಿಗಳ "ತುಘಲಕ್ ದರ್ಬಾರ್" ನ್ನು ಕೂಡಲೇ ಹತೋಟಿಗೆ ತರಬೇಕು.

■ ಡಾ.ಹಯವದನ ಉಪಾಧ್ಯ, ಕುಂದಾಪುರ

(ಇದು ಅಕ್ಟೋಬರ್ *10* ರಂದು ಪ್ರಜಾವಾಣಿಯಲ್ಲಿ ಡಾ. ಎ.ಎಂ.ನರಹರಿಯವರು ಬರೆದ ಲೇಖನಕ್ಕೆ ಪೂರಕ ಲೇಖನ)

ಕಾರವಾರ-ಮಂಗಳೂರಿಂದಲೂ ಅಕ್ರಮ ಅದಿರು ರಫ್ತು!

ಇದ್ಯಾಕೆ ಸಿಬಿಐ ಮತ್ತು ಹಿರೇಮಠ್‌ಗೆ ಕಾಣಿಸುತ್ತಿಲ್ಲ?!

ನಿಸರ್ಗ ಚೆಲುವಿನ ಕಡಲತಡಿಯ 'ಬೇಲೇಕೇರಿ' ಈಗ ದೊಡ್ಡ ಕುತೂಹಲದ ಚರ್ಚಿತ ಹೆಸರು! ಗಣಿಚೋರರು ಕಬ್ಬಿಣದ ಅದಿರನ್ನು ಹಗಲಿರುಳೂ ಕದ್ದು ವಿದೇಶಕ್ಕೆ ಕಳಿಸಿದ್ದು ಇದೇ ಊರಿನ ಬಂದರಿಂದ ಎಂಬುದೀಗ ಇತಿಹಾಸ. ಸರಿ ಸುಮಾರು ಎಂಟು ವರ್ಷ ಅದಿರು ಮಾಫಿಯಾದ ಕಪಿಮುಷ್ಟಿಗೆ ಸಿಲುಕಿ ತತ್ತರಿಸಿ ಹೋಗಿತ್ತು. ಸಾಂಪ್ರದಾಯಿಕ-ಕೃಷಿ-ಸಾಂಪ್ರದಾಯಿಕ ಮೀನುಗಾರಿಕೆ- ಅದಿರಿನ ಕೆಂಪುಮಣ್ಣಿನ ಪಾಲಾಗಿ ಬೇಲೇಕೇರಿ ಬರಡು ಸುಡುಗಾಡಂತಾಗಿತ್ತು.

ಗಣಿ ಧೂಳು ಊರನ್ನು ಅದ್ಯಾವ ಪರಿ ಆವರಿಸಿತ್ತೆಂದರೆ, ಇಲ್ಲಿ ಎಲ್ಲವೂ ಕೆಂಪಾಗಿತ್ತು. ಹಸಿರಿದ್ದ ಗಿಡ-ಮರ, ಬೆಳ್ಳಗಿದ್ದ ಹೂವು, ಚೊಕ್ಕವಾಗಿದ್ದ ಮನೆ-ಶಾಲೆ, ಶುದ್ಧವಾಗಿದ್ದ ಗಾಳಿ-ನೀರು... ಎಲ್ಲವೂ ಕೆಂಪುಕೆಂಪಾಗಿ ಅಸ್ತಮಾ, ಹೃದಯ ಬೇನೆಯ ನರಕ ಕೂಪದಂತಾಗಿತ್ತು. ಅದಿರು ಲಾರಿಗಳಂತೂ ಈ ಭಾಗದ ಜನರ ಬಲಿ ಪಡೆದಿದ್ದಕ್ಕೆ ಲೆಕ್ಕವೇ ಇಲ್ಲ. ಯಾವಾಗ ನ್ಯಾ. ಸಂತೋಷ್ ಹೆಗ್ಡೆ 'ಕೃಪೆ'ಯಿಂದ ಅಕ್ರಮ ಅದಿರು ನಿರ್ಯಾತ ಬಂದಾಯ್ತೋ, ಆಗಿಂದ ಬೇಲೇಕೇರಿಯಲ್ಲಿ ನಿಧಾನಕ್ಕೆ ಹಸಿರು ಚಿಗುರಲಾರಂಭಿಸಿತು; ಬಡ ಬೆಸ್ತರ ಜೀವನಾಧಾರ ಕುಲಕಸುಬಿಗೆ ಬೇಲೇಕೇರಿ ಬಂದರು ತೆರೆದುಕೊಂಡಿತು...


ಬೇಲೇಕೇರಿ ಬಂದರಿಂದ ಸಾವಿರಾರು ಕೋಟಿಗಳ ಅದಿರು ಅಕ್ರಮಗಳ ರಫ್ತಾಗಿದ್ದು ನಿಜ. ಲೋಕಾಯುಕ್ತ ಸಂಸ್ಥೆಯೇ ಸೀಜ್ ಮಾಡಿದ್ದ ಅದಿರನ್ನು ಹಾಡುಹಗಲೇ ರೆಡ್ಡಿಗಳು, ಸೈಲ್‌ಗಳು, ಬಾಬೂಗಳು, ಆದಾನಿಗಳು ಮತ್ತು ಖದೀಮ ಸರ್ಕಾರಿ ಅಧಿಕಾರಿ ಗಣ ಹಡಗೇರಿಸಿ ಚೀನಾಕ್ಕೆ ರವಾನಿಸಿದ್ದರು. ಇಂಥದೇ ಅವ್ಯವಹಾರ-ಪ್ರಮಾದಗಳು ಬೇಲೇಕೇರಿ ಬಂದರಿನ ಆಚೀಚೆಗಿರುವ ಕಾರವಾರ ಮತ್ತು ಮಂಗಳೂರು ಬಂದರಿನಲ್ಲೂ ಅದಿರು ಮಾಫಿಯಾ ಡಾನ್-ಡಾಕೂಗಳು ರಾಜಾರೋಷವಾಗಿ ಮಾಡಿ ಮುಗಿಸಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಸೈತಾನರಂತಾಗಿದ್ದ ಮಂಗಳೂರಿನ ಶಿಪ್ಪಿಂಗ್ ದೊರೆ ನಾಗರಾಜ ಶೆಟ್ಟಿ, ಕಾರವಾರದ ಆನಂದ ಅಸ್ನೋಟಿಕರ್ ಎಂಬ ಹಾರ್ಬರ್ ಡಾನ್ ಈ ಅಕ್ರಮದಲ್ಲಿ ಕೈಚಳಕ ತೋರಿಸಿದ್ದಾರೆ. ಆದರೆ ಇದ್ಯಾಕೋ ಬೇಲೇಕೇರಿ ಹಗರಣದಷ್ಟು ಸುದ್ದಿಯಾಗಲೇ ಇಲ್ಲ; ತನಿಖೆಯಂತೂ ನಡೆಯಲೇ ಇಲ್ಲ.

ಸೋಜಿಗದ ಸಂಗತಿಯೆಂದರೆ, ಕಾರವಾರ ಮತ್ತು ಮಂಗಳೂರು ಬಂದರಿನಲ್ಲಾದ ಅಕ್ರಮ ರಫ್ತುಗಾರಿಕೆ ರಗಳೆ-ರಾದ್ಧಾಂತ ಸಮಾಜ ಪರಿವರ್ತನಾ ಸಮುದಾಯದ ಹಿರೇಮಠರಿಗಾಗಲೀ, ಸಿಬಿಐನ ಖಡಕ್ ಅಧಿಕಾರಿಗಳಿಗಾಗಲೀ ಕಾಣಿಸುತ್ತಿಲ್ಲ. ಕಾರವಾರ ಬಂದರಿಂದ 9,86,892 ಮೆಟ್ರಿಕ್ ಟನ್ ಅದಿರು ಮತ್ತು ಮಂಗಳೂರು ಬಂದರಿಂದ 66,51,433 ಮೆಟ್ರಿಕ್ ಟನ್ ಕಬ್ಬಿಣದ ಅದಿರು ಅಕ್ರಮವಾಗಿ ಕಳ್ಳ ಸಾಗಾಣಿಕೆಯಾಗಿದೆ. ಬೇಲೇಕೇರಿ ಬಂದರಿನ ಕರ್ಮಕಾಂಡದ ಭಾಗೀದಾರರಾದ ಮಾಜಿ ಮಂತ್ರಿಗಳು, ಹಾಲಿ ಶಾಸಕರು, ಐಎಎಸ್-ಐಪಿಎಸ್-ಐಎಫ್‌ಎಸ್‌ಗಳು, ಚೋಟಾ-ಲೋಟಾ ಅಧಿಕಾರಿಗಳು ಒಬ್ಬೊಬ್ಬರಾಗಿ ಸಿಬಿಐ ಬೋನಿಗೆ ಬೀಳುತ್ತಿದ್ದರೆ, ಮಂಗಳೂರು-ಕಾರವಾರ ಬಂದರುಗಳಲ್ಲಿ ಭಾನ್ಗಡಿ ಮಾಡಿದ ಭೂಪರು ಮಾತ್ರ ನಿರಾತಂಕವಾಗಿದ್ದಾರೆ. ಬೇಲೇಕೇರಿ ಬಂದರು ಅವ್ಯವಹಾರದ ಬಗ್ಗೆ ದೊಡ್ಡ ಗಂಟಲಲ್ಲಿ ಬೊಬ್ಬೆ ಹೊಡೆಯುತ್ತಿರುವವರು ಕಾರವಾರ-ಮಂಗಳೂರಿಂದ ಅಕ್ರಮವಾಗಿ ವಿದೇಶಕ್ಕೆ ಹೋಗಿರುವ ಕೋಟಿ-ಕೋಟಿ ರೂಪಾಯಿಗಳ ಅದಿರು ಕಳ್ಳ ಸಾಗಾಣಿಕೆ ಕಂಡೂಕಾಣದಂತಿದ್ದಾರೆ. ಇದು ಅನೇಕಾನೇಕ ಅನುಮಾನ ಹುಟ್ಟು ಹಾಕಿದೆ.

ಬೇಲೇಕೇರಿ ಬಂದರು ಅವ್ಯವಹಾರಕ್ಕೆ ಸಿಕ್ಕಷ್ಟು ಮಹತ್ವ ಮಂಗಳೂರು ಮತ್ತು ಕಾರವಾರ ಬಂದರಿನಲ್ಲಾದ ಕಳ್ಳ ದಂಧೆಗೇಕೆ ಸಿಗುತ್ತಿಲ್ಲ? ರಾಜ್ಯ ಸರ್ಕಾರ ಏಕೆ ಈ ಎರಡು ಬಂದರಿನ ಕಾನೂನುಬಾಹಿರ ರಫ್ತುಗಾರಿಕೆ ಬಗ್ಗೆ ನಿರ್ಲಕ್ಷ್ಯದಿಂದಿದೆ. ಕೇಂದ್ರ ತನಿಖಾ ತಂಡ (ಸಿಬಿಐ) ಯಾಕೆ ತನಿಖೆ ಮಾಡಲು ಮನಸ್ಸು ಮಾಡುತ್ತಿಲ್ಲ? ಗಣಿ ಕಳ್ಳರ ಕೈತೊಳೆದು ಬೆನ್ನತ್ತಿರುವ ಎಸ್.ಆರ್. ಹಿರೇಮಠರೂ ಏಕೆ ಹಾಗೇ ಸುಮ್ಮನಿದ್ದಾರೆ? ಇಂಥ ಗಂಭೀರ ಪ್ರಶ್ನೆಗಳ ಮೇಲೀಗ ಕರಾವಳಿಯಲ್ಲಿ ಮತ್ತು ಗಣಿ ದಂಧೆಕೋರರ ಅಡ್ಡೆಗಳಲ್ಲಿ ಚರ್ಚೆ ನಡೆಯುತ್ತಿದೆ. ಕಾರವಾರ ಬಂದರಿಂದಂತೂ ಲೋಕಾಯುಕ್ತದವರು ಮುಟ್ಟುಗೋಲು ಹಾಕಿಕೊಂಡಿದ್ದ 65 ಸಾವಿರ ಮೆಟ್ರಿಕ್ ಟನ್ ಅದಿರನ್ನು ಅಂದಿನ 'ಸಿಜರೀನ್ ಸಚಿವ' ಆನಂದ ಅಸ್ನೋಟಿಕರ್‌ನ ಕೃಪಾಕಟಾಕ್ಷದಿಂದಲೇ ಕದ್ದು ರಫ್ತು ಮಾಡಲಾಗಿತ್ತು. ಇದು ಬಹಿರಂಗ ರಹಸ್ಯ.

ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸಿದ್ಧಪಡಿಸಿದ ಗಣಿ ಕರ್ಮಕಾಂಡದ ವರದಿಯಲ್ಲಿ ಯಾವ್ಯಾವ ಬಂದರಿಂದ ಎಷ್ಟೆಷ್ಟು ಅದಿರು ವಿದೇಶಕ್ಕೆ ಹೋಗಿದೆ ಮತ್ತು ಅದರಲ್ಲಿ ಎಷ್ಟು ಅದಿರು ಪರವಾನಗಿಯದ್ದು ಎಂಬುದನ್ನು ಸ್ಪಷ್ಟವಾಗಿ ಬರೆಯಲಾಗಿದೆ. ಕರ್ನಾಟಕದ ಕಾರವಾರ, ಬೇಲೇಕೇರಿ ಮತ್ತು ಮಂಗಳೂರು ಬಂದರು, ಚೆನ್ನೈ ವಿಶಾಖಪಟ್ಟಣಂ, ಹೆಣ್ಣೂರು, ಕಾಕನಾಡ, ಕೃಷ್ಣಪಟ್ಟಣಂ ಬಂದರುಗಳಿಂದ 228 ಸಾಗಾಟದಾರರು ಅದಿರನ್ನು ರಫ್ತು ಮಾಡಿದ್ದಾರೆಂದು ವರದಿಯಲ್ಲಿ ಹೇಳಲಾಗಿದೆ. 2006ರಿಂದ 2010ರವರೆಗಿನ ಈ ಅದಿರು ವ್ಯವಹಾರದಲ್ಲಿ ರಫ್ತಿಗೆ ಪರವಾನಗಿ ಇದ್ದದ್ದು ಕೇವಲ 12.579 ಕೋಟಿ ಮೆಟ್ರಿಕ್ ಟನ್‌ಗೆ ಮಾತ್ರ!

ಕಾರವಾರ ಬಂದರಿನಿಂದ 2006ರಲ್ಲಿ 13,78,778 ಮೆ.ಟನ್, 2007ರಲ್ಲಿ 18,51,025 ಮೆ.ಟನ್, 2008ರಲ್ಲಿ 24,23,995 ಮೆ.ಟನ್, 2009ರಲ್ಲಿ 15,58,061 ಮೆ.ಟನ್, 2010ರಲ್ಲಿ 4,68,134 ಮೆ.ಟನ್ ಅದಿರು ವಿದೇಶಕ್ಕೆ ರಫ್ತಾಗಿದೆ. ಇದರಲ್ಲಿ ಒಟ್ಟು 9,86,892 ಮೆ.ಟನ್ ಅದಿರು ಅಕ್ರಮವಾಗಿ ರಫ್ತಾಗಿದೆ!!



ಸಂತೋಷ್ ಹೆಗ್ಡೆ

ಇದೇರೀತಿ ಮಂಗಳೂರು ಬಂದರಿಂದಲೂ ಕಪ್ಪು ದಂಧೆ ಕಾನೂನಿನ ಕ್ಯಾರೇ ಇಲ್ಲದೆ ನಡೆಸಲಾಗಿದೆ. ಮಂಗಳೂರು ಬಂದರಿಂದ 2006ರಲ್ಲಿ 53,15,222 ಮೆ.ಟನ್, 2007ರಲ್ಲಿ 83,17,818 ಮೆ.ಟನ್, 2008ರಲ್ಲಿ 89,11,456 ಮೆ.ಟನ್, 2009ರಲ್ಲಿ 56,28,426 ಮೆ.ಟನ್, 2010ರಲ್ಲಿ 10,46,386 ಮೆ.ಟನ್ ಸೇರಿ ಒಟ್ಟೂ 2,92,19,308 ಮೆ.ಟನ್ ಅದಿರು ರಫ್ತಾಗಿದೆ. ಇದರಲ್ಲಿ ಅಕ್ರಮವಾಗಿ ರಫ್ತಾಗಿರುವ ಅದಿರು ಪ್ರಮಾಣ 66,51,433 ಮೆ.ಟನ್.

ಈ ಕಾರವಾರ-ಮಂಗಳೂರು ಬಂದರಿನಲ್ಲಾದ ಅಕ್ರಮ ವ್ಯವಹಾರದ ಬಗ್ಗೆ ಯಾವ ತನಿಖೆಯೂ ನಡೆಯುತ್ತಿಲ್ಲ, ಸಿಐಡಿ ತನಿಖೆಗೂ ಇದು ಒಳಪಟ್ಟಿರಲಿಲ್ಲ; ಈಗ ನಡೆಯುತ್ತಿರುವ ಸಿಬಿಐ ತನಿಖೆಯಲ್ಲೂ ಇದು ಸೇರಿಲ್ಲ. ಸಮಾಜ ಪರಿವರ್ತನಾ ಸಮುದಾಯದ ಹಿರೇಮಠ್ ಕಾರವಾರಕ್ಕೆ ಬಂದಾಗ ಅವರ ಗಮನಕ್ಕೂ ತರಲಾಗಿತ್ತು. ಆದರೆ ಹಿರೇಮಠ್ ಕಾರವಾರ ಬಂದರಿನ ಅವ್ಯವಹಾರದ ಬಗ್ಗೆ ಮಾತೇ ಆಡುತ್ತಿಲ್ಲ. ಹಿರೇಮಠ್ ಮನಸ್ಸು ಮಾಡಿದ್ದರೆ ಕಾರವಾರ ಬಂದರಿನ ಕಳ್ಳಸಾಗಾಣಿಕೆಯಲ್ಲಿ ಭಾಗಿಯಾದವರ ಹೂರಣ ಹೊರಬಂದು ಸೆನ್‌ಸೇಷನಲ್ ಸುದ್ದಿಯಾಗುತ್ತಿತ್ತು; ಬೇಲೇಕೇರಿ ಪ್ರಕರಣದಷ್ಟೇ ಸದ್ದು ಮಾಡುತ್ತಿತ್ತು.

ಇದಕ್ಕಿಂತಲೂ ದೊಡ್ಡದಾದ ಮತ್ತೊಂದು ಮಹಾಪಾತಕ ಕಾರವಾರ ಬಂದರಿನಲ್ಲಾಗಿದೆ. ಅಧಿಕಾರಿಗಳು-ರಫ್ತುದಾರರು ಮತ್ತು ಅಧಿಕಾರಸ್ಥ ರಾಜಕಾರಣಿಗಳು ಒಟ್ಟಾಗಿ ಲೋಕಾಯುಕ್ತದವರು ಸೀಜ್ ಮಾಡಿದ್ದ ಬರೋಬ್ಬರಿ 65 ಸಾವಿರ ಮೆಟ್ರಿಕ್ ಟನ್ ಅದಿರನ್ನು ವಿದೇಶಕ್ಕೆ ಕಳ್ಳಸಾಗಾಣಿಕೆ ಮಾಡಿದ್ದಾರೆ. ಇದು ಯಾಕೆ ಸಮಾಜ ಪರಿವರ್ತನೆ ಮಾಡುವ ಹೋರಾಟಗಾರರಿಗೆ, ಸಿಬಿಐ ಅಧಿಕಾರಿಗಳಿಗೆ ಕಾಣಿಸಲಿಲ್ಲವೋ? ಇದು ವಿಚಿತ್ರವಾದರೂ ಅಚ್ಚರಿಯ ಸತ್ಯ! 2010ರ ಮಾರ್ಚ್‌ನಲ್ಲಿ ಲೋಕಾಯುಕ್ತರ ನಿರ್ದೇಶನದಂತೆ ಅರಣ್ಯ ಅಧಿಕಾರಿಗಳು ಕಾರವಾರ ಬಂದರು ಅಂಗಳಕ್ಕೆ ಲಗ್ಗೆ ಇಟ್ಟಿದ್ದರು. ಈ ದಾಳಿಯಲ್ಲಿ 1.15 ಲಕ್ಷ ಮೆಟ್ರಿಕ್ ಟನ್ ಅದಿರು ಅಕ್ರಮವೆಂದು ಘೋಷಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು ಮತ್ತು ಈ ಅದಿರನ್ನು ಬಂದರು ಅಧಿಕಾರಿ ಕ್ಯಾಪ್ಟನ್ ಸ್ವಾಮಿ ಕೈಗೊಪ್ಪಿಸಿ ಸಂರಕ್ಷಿಸುವ ಜವಾಬ್ದಾರಿ ಕೊಡಲಾಗಿತ್ತು. ಈ ಕೇಸನ್ನು ಅರಣ್ಯಾಧಿಕಾರಿಗಳು ನ್ಯಾಯಾಲಯದಲ್ಲಿ ದಾಖಲಿಸಿದ್ದರು.

ಯಾವಾಗ ಬೇಲೇಕೇರಿ ಬಂದರಿನಲ್ಲಿ ಸೀಜ್ ಮಾಡಿದ್ದ ಅದಿರು ನಾಪತ್ತೆಯಾಗಿದೆ ಎಂಬ ಗುಲ್ಲೆದ್ದಿತೋ, ಆಗ ಎಚ್ಚೆತ್ತ ಅರಣ್ಯ ಅಧಿಕಾರಿಗಳು ಕಾರವಾರ ಬಂದರಿನಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರು ಮಾಪನಕ್ಕೆ ಹೋಗಬೇಕಾಗಿ ಬಂತು. ಆಗ ಬರೋಬ್ಬರಿ 65 ಸಾವಿರ ಮೆಟ್ರಿಕ್-ಟನ್ ಅದಿರು ಕಾರವಾರ ಬಂದರು ಅಂಗಳದಿಂದ ನಾಪತ್ತೆಯಾಗಿರುವುದು ಅರಣ್ಯ ಅಧಿಕಾರಿಗಳಿಗೆ ಕಂಡುಬಂತು. ಬಂದರು ಪ್ರದೇಶದಿಂದ 65,000 ಮೆಟ್ರಿಕ್ ಟನ್ ಅದಿರು ಕಳ್ಳತನ ಆಗಿದೆಯೆಂದು ಅರಣ್ಯಾಧಿಕಾರಿಗಳು ಕಾರವಾರ ಶಹರ ಠಾಣೆಯಲ್ಲಿ ಕೇಸ್ (ನಂ.154/10) ದಾಖಲಿಸುತ್ತಾರೆ. ಈ ಕಳ್ಳ ಸಾಗಾಣಿಕೆ ಹಿಂದೆ ಅಂದು ಮಂತ್ರಿಯಾಗಿದ್ದ ಆನಂದ ಅಸ್ನೋಟಿಕರ್‌ನ ಕುಮ್ಮಕ್ಕು ಇದ್ದಿದ್ದರಿಂದ ಪಾಪದ ಪೊಲೀಸರು ತನಿಖೆಯ ಉಸಾಬರಿಗೆ ಹೋಗಲಿಲ್ಲ. ನಂತರ ಈ ಪ್ರಕರಣ ಸಿಐಡಿಗೆ ಹೋಯ್ತು.


ರೆಡ್ಡಿ-ಅಸ್ನೋಟಿಕರ್, ಸೈಲ್ ವಗೈರೆ ಅಂಡ್ ಕೋ. ಬಚಾಯಿಸಲೆಂದೇ ಅಂದಿನ ಸಿಎಂ ಯಡ್ಡಿ ಮಹಾತ್ಮ ಸಿಐಡಿ ಛೂಬಿಟ್ಟಿದ್ದಾಗಿತ್ತಲ್ಲವಾ? ಸಿಐಡಿ ಪ್ರಭೃತಿಗಳು ಕಾರವಾರ ಬಂದರು ಅಧಿಕಾರಿ ಕ್ಯಾಪ್ಟನ್ ಸ್ವಾಮಿಯನ್ನು ಬಲಿಹಾಕಿ ಅಧಿಕಾರಸ್ಥ ರಾಜಕಾರಣಿಗಳು-ದೊಡ್ಡ ಮಟ್ಟದ ಚೋರ ಅಧಿಕಾರಿಗಳನ್ನು ರಕ್ಷಿಸುವ ಸ್ಕೆಚ್ ಹಾಕಿಕೊಂಡಿದ್ದರು. ಹೆದ್ದ ಕ್ಯಾಸ್ವಾಮಿ 65,000 ಮೆ.ಟನ್ ಅದಿರು ಸಾಗಾಣಿಕೆಗೆ ಅವಕಾಶ ಕೊಟ್ಟಿದ್ದೇನೆಂದು ಒಪ್ಪಿಕೊಂಡುಬಿಟ್ಟಿದ್ದ. ಹೀಗಾಗಿ ಆತ ಒಂದು ವರ್ಷ ಜೈಲಲ್ಲಿ ಉಳಿದು ಅದಿರನ್ನು ಕಳ್ಳ ಸಾಗಾಣಿಕೆ ಮಾಡಿದ್ದ ಖದೀಮ ರಫ್ತುದಾರರು-ಅವರ ಹಿಂದಿದ್ದ ಪ್ರಭಾವಿ ಪುಢಾರಿಗಳು ಪಾರಾಗಿರುವಂತ 'ದುರಂತ' ಎದುರಾಗಿತ್ತು.

ಲೋಕಾಯುಕ್ತದವರು ಸೀಜ್ ಮಾಡಿದ್ದ 1.15 ಲಕ್ಷ ಮೆಟ್ರಿಕ್ ಟನ್ ಅದಿರಲ್ಲಿ ಮಾಜಿ ಮಂತ್ರಿ ಆನಂದ ಅಸ್ನೋಟಿಕರ್‌ನ ಅಚ್ಚುಮೆಚ್ಚಿನ ಜೆ.ಎಂ. ಭಕ್ಷಿ, ಶಾಸಕ ಶಿವರಾಮ ಹೆಬ್ಬಾರ್ ಮಗನ ಡ್ರೀಮ್ ಲಾಜಿಸ್ಟಿಕ್ಸ್, ಪ್ರಿಂಟೆಕ್ಸ್ ಎಕ್ಸ್‌ಪೋರ್ಟ್ ಇಂಡಿಯಾ, ಅಲ್ಲಾರೀಸ್ ಅಂಡ್ ಥಾಮಸ್ ಕಂಪನಿ ಹಾಗೂ ಸೆಸಾ ಗೋವಾ ಕಂಪನಿಗೆ ಸೇರಿದ ಅಕ್ರಮ ಅದಿರಿತ್ತು. ಇದರಲ್ಲಿ ಬಹುತೇಕರು ಸೀಜ್ ಮಾಡಲಾಗಿದ್ದ ಅದಿರನ್ನು ಕದ್ದು ರಫ್ತು ಮಾಡಿದ್ದಾರೆ. ಆದರೆ ಭಕ್ಷಿ ಕಂಪನಿಯ ವ್ಯವಹಾರ ಮಾತ್ರ ನೇರವಾಗಿ ಅಂದಿನ ಮಂತ್ರಿಯೂ-ಕಾರವಾರ ಬಂದರು ಡಾನೂ ಆಗಿದ್ದ ಆನಂದ್ ಅಸ್ನೋಟಿಕರ್ ಬೆಂಬಲದಿಂದಲೇ ನಡೆದಿತ್ತು. ಅಸ್ನೋಟಿಕರ್‌ನ 'ಸುಮನ್ ಲಾಜಿಸ್ಟಿಕ್' ಕಂಪನಿಯೂ ಅದಿರು ಸಾಗಾಟದ ದಂಧೆ ಕಾರವಾರ ಧಕ್ಕೆಯಲ್ಲಿ ಮಾಡುತ್ತಿತ್ತು. ಅಸ್ನೋಟಿಕರ್‌ನ ಅಕ್ರಮ ಅದಿರನ್ನು ಭಕ್ಷಿ ಕಂಪನಿ ಎಕ್ಸ್‌ಪೋರ್ಟ್ ಮಾಡುತ್ತಿತ್ತು. ಅಸ್ನೋಟಿಕರ್‌ನ ಬೇನಾಮಿ ಅದಿರು ರಫ್ತುಗಾರಿಕೆ ಭಕ್ಷಿ ಕಂಪನಿಯೇ ನಡೆಸುತ್ತ ಬಂದಿತ್ತು. ಹೀಗಾಗಿ ಕಾರವಾರ ಬಂದರಿನಲ್ಲಾದ ಅದಿರು ಕಳ್ಳ ಸಾಗಾಣಿಕೆ ಸಿಬಿಐ ತನಿಖೆಗೆ ಎತ್ತಿಕೊಂಡರೆ ಈ ಮಾಜಿ ಶಾಸಕ ಅಸ್ನೋಟಿಕರ್ ಹಾಲಿ ಶಾಸಕ ಸತೀಶ್ ಸೈಲ್ ಸೇರಿರುವ ಬೆಂಗಳೂರಿನ ಪರಪ್ಪನ ಅಗ್ರಹಾರದ ಕಾರಾಗೃಹ ಸೆಲ್ ಸೇರೋದು ಗ್ಯಾರಂಟಿ; 65,000 ಮೆ.ಟನ್ ಸೀಜಾದ ಅದಿರು ಯಾರ್‍ಯಾರು ಎಷ್ಟೆಷ್ಟು ರಫ್ತು ಮಾಡಿ ಕಳ್ಳ ಕುಬೇರರಾಗಿದ್ದಾರೆಂಬುದೂ ಬಹಿರಂಗವಾಗುತ್ತದೆ. ಹಾಗೆಯೇ ಮಂಗಳೂರು ಬಂದರಿನ ಅಕ್ರಮ ಅದಿರು ರಫ್ತುಗಾರಿಕೆ ಸಿಬಿಐ ತನಿಖೆ ಮಾಡಿದರೆ ಶಿಪ್ಪಿಂಗ್ ಕಿಂಗ್ ಕಂ. ಮಂಗಳೂರು ಬಿಜೆಪಿಯ ಅಂದಿನ ಮೋದಿ ಎಂಬ ಅಭಿದಾನ ಹೊತ್ತಿದ್ದ ನಾಗರಾಜ ಶೆಟ್ಟಿ ಎಂಬ ರಂಗೀಲಾ ಪುಢಾರಿಯ ಅಸಲಿಯತ್ತೂ ಅನಾವರಣ ಆಗುತ್ತದೆ!!


ಇಲ್ಲಿರುವ ಪ್ರಶ್ನೆ ಒಂದೇ. ಗಣಿಚೋರರಾದ ರೆಡ್ಡೀಸ್, ಸೈಲ್ ಮುಂತಾದವರ ಬಂಡವಾಳವನ್ನು ನಿರ್ಭಿಡೆಯಿಂದ ಬಹಿರಂಗ ಮಾಡುತ್ತಿರುವ ಹೋರಾಟಗಾರ ಹಿರೇಮಠ್‌ಗೆ ಅಸ್ನೋಟಿಕರ್, ನಾಗರಾಜ್ ಶೆಟ್ಟಿ ಬಳಗದ ಮುಲಾಜೇನಾದರೂ ಇದೆಯಾ? ಅಸ್ನೋಟಿಕರ್-ಹಿರೇಮಠ್‌ಗೆ ಅಂಟಿದ ನಂಟಿನ ಬಗ್ಗೆ ಕಾರವಾರದಲ್ಲಂತೂ ರಂಗುರಂಗಿನ ಸುದ್ದಿಗಳು ಹರಿದಾಡುತ್ತಿವೆ. ಬೇಲೇಕೇರಿ ಬಂದರು ಭಾನ್ಗಡಿಯಷ್ಟೇ ಗಂಭೀರ ಪಾತಕವಾಗಿರುವ ಕಾರವಾರ ಮತ್ತು ಮಂಗಳೂರು ಬಂದರಿನತ್ತ ಹಿರೇಮಠರ ಚಿತ್ತ ಹರಿದೀತಾ? ಹಾಗಂತ ಕಾರವಾರದ ಮಂದಿ ಮಾತಾಡಿಕೊಳ್ಳುತ್ತಿದ್ದಾರೆ.

■ ಸುಯೋಧನ


ಗಣಿಚೋರರಾದ ರೆಡ್ಡೀಸ್, ಸೈಲ್ ಮುಂತಾದವರ ಬಂಡವಾಳವನ್ನು ನಿರ್ಭಿಡೆಯಿಂದ ಬಹಿರಂಗ ಮಾಡುತ್ತಿರುವ ಹೋರಾಟಗಾರ ಹಿರೇಮಠ್‌ಗೆ ಅಸ್ನೋಟಿಕರ್, ನಾಗರಾಜ್ ಶೆಟ್ಟಿ ಬಳಗದ ಮುಲಾಜೇನಾದರೂ ಇದೆಯಾ? ಅಸ್ನೋಟಿಕರ್-ಹಿರೇಮಠ್‌ಗೆ ಅಂಟಿದ ನಂಟಿನ ಬಗ್ಗೆ ಕಾರವಾರದಲ್ಲಂತೂ ರಂಗುರಂಗಿನ ಸುದ್ದಿಗಳು ಹರಿದಾಡುತ್ತಿವೆ. ಬೇಲೇಕೇರಿ ಬಂದರು ಭಾನ್ಗಡಿಯಷ್ಟೇ ಗಂಭೀರ ಪಾತಕವಾಗಿರುವ ಕಾರವಾರ ಮತ್ತು ಮಂಗಳೂರು ಬಂದರಿನತ್ತ ಹಿರೇಮಠರ ಚಿತ್ತ ಹರಿದೀತಾ?




ಅಸ್ನೋಟಿಕರ್



ಸತೀಶ್ ಸೈಲ್



ನಾಗರಾಜ್ ಶೆಟ್ಟಿ




ಹಿರೇಮಠ್ ಹಾಗೇ ಸುಮ್ಮನೇಕಿದ್ದಾರೆ?

ಕಾರವಾರದ ಲೋಕಲ್ 'ಪಾಲಿಟ್ರಿಕ್' ಅದಿರು ಧೂಳಿನ ಘಾಟು ಹೆಚ್ಚಿಸಿ ಬಿಟ್ಟಿದೆ. ಯಾವ ಆ್ಯಂಗಲ್‌ನಿಂದ ನೋಡಿದರೂ ಶಾಸಕ ಸತೀಶ್ ಸೈಲ್ ಮತ್ತು ಮಾಜಿ ಶಾಸಕ ಆನಂದ್ ಅಸ್ನೋಟಿಕರ್ ಇಬ್ಬರು ಅದಿರು ಅವ್ಯವಹಾರಿಗಳೇ. ಕಳ್ಳತನದ ಪ್ರಮಾಣ ಹೆಚ್ಚು-ಕಮ್ಮಿ ಅಷ್ಟೇ. ಇಬ್ಬರೂ ಚೋರರೇ. ಇವರ ಕೊಳಕು ರಾಜಕಾರಣಕ್ಕೆ ಕಾರವಾರ-ಬೇಲೇಕೇರಿ ಬಂದರುಗಳೇ ಅಖಾಡ. ಅಸ್ನೋಟಿಕರ್‌ನಂತೂ ಕಾರವಾರ ಬಂದರಿನ ದೋನಂಬರ್ ದಂಧೆ ಡಾನ್. ಆದಾತನಿಗೆ ಅಪ್ಪ ವಸಂತ ಅಸ್ನೋಟಿಕರ್‌ನಿಂದ ಬಂದ ಬಳುವಳಿ. ಈ ಬಂದರು ಡಾನ್‌ಗಿರಿ ಮೇಲಾಟದಲ್ಲೇ ಭೂಗತ ದೊರೆ ದಿಲೀಪ್ ವಸಂತ್ ಅಸ್ನೋಟಿಕರ್‌ನ ಮಟಾಶ್ ಮಾಡಿಸಿದ್ದು.

ಅದಿರಲಿ. ಸೈಲ್‌ನ ಮಟ್ಟ ಹಾಕಲು ಏನೆಲ್ಲ ಮಾಡಲು ಸಾಧ್ಯವೋ ಅದೆಲ್ಲಾ ಅಸ್ನೋಟಿಕರ್ ಮಾಡಿದ್ದಾನೆ, ಮಾಡುತ್ತಲೂ ಇದ್ದಾನೆ. ಸೈಲ್‌ನ ಸಿಬಿಐ ಬಲೆಗೆ ಬೀಳಿಸಲು ಅಸ್ನೋಟಿಕರ್ ಒಂದಿಷ್ಟು ದಾಖಲೆ ಕಲೆಹಾಕಿ ಗಣಿ ಕಳ್ಳರ ವಿರುದ್ಧ ಸಮರ ಸಾರಿರುವ ಹಿರೇಮಠರಿಗೆ ತಲುಪಿಸಿದ್ದಾನೆಂಬುದು ಕಾರವಾರದಲ್ಲಿರುವ ತಾಜಾ ಸಮಾಚಾರ. ಸೈಲ್‌ನ ಹಣಿಯುವ 'ಅಸ್ತ್ರ' ಹಿರೇಮಠಗೆ ಕೊಡಲು ಹೋಗುತ್ತಿದ್ದ ಅಸ್ನೋಟಿಕರ್ ನಂಟು ಗಾಢವಾಗಿ ಆತನೊಂದಿಗೆ ಬೆಸೆದುಕೊಂಡು ಬಿಟ್ಟಿತಂತೆ.


ಪ್ರಾಮಾಣಿಕ-ನಿಷ್ಠೂರವಾದಿ ಇಮೇಜಿನ ಹಿರೇಮಠ್ ಕಾರವಾರ ಬಂದರಿನ ಅಕ್ರಮ ಅದಿರು ಕಳ್ಳ ಸಾಗಾಣಿಕೆ ಬಗ್ಗೆ ಸೊಲ್ಲೆತ್ತದಿರುವುದು 'ಅಸ್ನೋಟಿಕರ್ ಮಹಿಮೆ' ಎಂದೇ ಈಗ ಗುಲ್ಲೆದ್ದಿದೆ. ಹಿರೇಮಠರು ಈ ಅಗ್ನಿಪರೀಕ್ಷೆಯಲ್ಲಿ ಪಾಸಾಗಬೇಕಿದೆ.

ರಾಘುಗೆ ಏನಾಗಿದೆ?



ರಾಜ್ ಪುತ್ರ ರಾಘವೇಂದ್ರರಿಗೆ ಅಕಾಲಿಕ ಅನಾರೋಗ್ಯ. ಸದ್ಯ ಯಶವಂತಪುರದ ಕೊಲಂಬಿಯಾ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ನಿತ್ರಾಣವಾಗಿರುವ ರಾಘು ಪರಿಸ್ಥಿತಿ ಅಲ್ಲಿನ ವೈದ್ಯರಿಗೂ ಅರ್ಥವಾಗುವಂಥದ್ದಲ್ಲ. ಬರೋಬ್ಬರಿ ಅರ್ಧ ಡಜನ್ ಪರಿಣಿತ ಡಾಕ್ಟರ್‌ಗಳು ಇಸಿಜಿ, ಆ್ಯಂಜಿಯೋಗ್ರಾಮ್, ಬ್ಲಡ್‌ಟೆಸ್ಟ್, ಶುಗರ್ ಚೆಕಪ್- ಎಂದೆಲ್ಲ ಏನೇ ಪರೀಕ್ಷೆ ನಡೆಸಿದರೂ ರೋಗದ ಮೂಲ ಪತ್ತೆಯಾಗುತ್ತಿಲ್ಲ!

ರಾಘವೇಂದ್ರ ರಾಜ್‌ಕುಮಾರ್ ಅನಾರೋಗ್ಯವೆಂದರೆ ಅದು ಗಾಂಧಿನಗರದ ಹೆಡ್ಡಾಫೀಸಿನ ಅನಾರೋಗ್ಯವೆಂದೇ ಕನ್ನಡ ಚಿತ್ರರಂಗ ಲೆಕ್ಕ ಹಾಕುತ್ತದೆಯಾದ್ದರಿಂದ ಇದ್ದಕ್ಕಿದ್ದಂತೆ ಕುಸಿದು ಬಿದ್ದ ರಾಘು ಪರಿಸ್ಥಿತಿ ಕುರಿತಂತೆ ಆತಂಕ, ಆಘಾತ ಮತ್ತು ಕುತೂಹಲ ಆವರಿಸಿದ್ದಕ್ಕೂ ಕಾರಣವಿಲ್ಲದಿಲ್ಲ.



ರಾಜ್ ಕುಟುಂಬದ ಆರೋಗ್ಯಪಾಲಕ ಡಾ. ರಮಣಾರಾವ್ ಪ್ರಕಾರವೇ ಹೇಳುವುದಾದರೆ ಇದೊಂದು **unexplained spasm!**

ಅಂದರೆ ವಿವರಿಸಲಾಗದ, ವೈದ್ಯಕೀಯ ಪರಿಭಾಷೆಗೇ ನಿಲುಕದ ಕ್ವಚಿತ್ತಾದ ಜೈವಿಕ ವೈಪರೀತ್ಯ. ಮೊನ್ನೆ ಅಂದರೆ ಅಕ್ಟೋಬರ್ 16ರ ಬಕ್ರೀದ್ ರಜೆಯ ಬೆಳ್ಳಂಬೆಳಗ್ಗೆ ಸದಾಶಿವನಗರದ ತಮ್ಮ ಮನೆ ಸಮೀಪದ ಅಫಿನಿಟಿ ಫಿಟ್‌ನೆಸ್ ಸೆಂಟರ್ ಹೊಕ್ಕ ರಾಘು ಮಾಮೂಲಿನಂತೆ ಟ್ರೆಡ್‌ಮಿಲ್ ಹತ್ತಿದ್ದಾರೆ. ಓಟ ಆರಂಭಿಸಿ ಕಾಲು ಗಂಟೆ ಕೂಡ ಕಳೆದಿರಲಿಲ್ಲ, ಇದ್ದಕ್ಕಿದ್ದಂತೆ ಜಿಮ್ ಇನ್‌ಸ್ಟ್ರಕ್ಟರ್‌ನನ್ನು ಕೂಗಿ ಕರೆದು ಏನನ್ನೋ ಹೇಳಲು ಪ್ರಯತ್ನಿಸಿ ಸನ್ನೆ ಮಾಡಿದರಷ್ಟೆ. ಚಲಿಸುತ್ತಿದ್ದ ಟ್ರೆಡ್ ಮೇಲೆಯೇ ರಾಘು ಕುಸಿದು ಬಿದ್ದರು.

ವಿವರಿಸಲಾಗದ...!

ಬಳಲಿಕೆಯೋ, ಸುಸ್ತೋ, ಹೃದಯದ ತೊಂದರೆಯೋ ಇರಬೇಕೆಂದೇ ಲೆಕ್ಕ ಹಾಕಿ ಜಿಮ್ನಾಷಿಯಂನಿಂದ ಅವರನ್ನು ಯಶವಂತಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ ಹೊತ್ತು ತಂದವರಿಗೆ ಅಚ್ಚರಿಯೆನಿಸಿದ್ದು ಅದೇ ಆಸ್ಪತ್ರೆಯ **interventional cordialogist** ಡಾ. ಚರಿತ್ ನೀಡಿದ ವರದಿಯಿಂದ. ರಾಘು ಆ್ಯಂಜಿಯೋಗ್ರಾಮ್ ಮಾಹಿತಿ ಸ್ಪಷ್ಟವಾಗಿತ್ತು, ಅದು ಹೃದಯ ಸಂಬಂಧಿ ನ್ಯೂನತೆಯಿಂದಾಗಲಿ, ವಿಪರೀತ ವ್ಯಾಯಾಮದ ಕಾರಣಕ್ಕಾಗಲಿ ಸಂಭವಿಸಿದ ಕುಸಿತವಾಗಿರಲಿಲ್ಲ.

ನ್ಯೂರಾಲಜಿಸ್ಟ್ ಡಾ. ಗುರುಪ್ರಸಾದ್ ನಡೆಸಿದ ಎರಡನೇ ಪರೀಕ್ಷೆಯೂ ಅದನ್ನೇ ಹೇಳುತ್ತಿತ್ತು, ರಾಘು ನರಮಂಡಲದ ಯಾವ ತಂತುವೂ ಹಾನಿಗೀಡಾಗದೆ ಏಕಾಏಕಿ ತಲೆಸುತ್ತು ಬಂದು ಬಿದ್ದರೆಂದರೆ ಅದು ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿರುವುದರ ಸೂಚನೆಯೇ ಇರಬೇಕೆಂಬುದು ಆಸ್ಪತ್ರೆಯ ಅನಸ್ತೇಷಿಯಾಲಜಿಸ್ಟ್ ಡಾ. ಮೇಧಾ ಲೆಕ್ಕಾಚಾರವಾಗಿತ್ತು. ಅದನ್ನೇ ನಂಬಿದ ಅಣ್ಣ ಶಿವರಾಜ್‌ಕುಮಾರ್ ಆಸ್ಪತ್ರೆಯ ಹೊರಗೆ ಕಿಕ್ಕಿರಿದಿದ್ದ ಟಿವಿ ವರದಿಗಾರರನ್ನುದ್ದೇಶಿಸಿ 'ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿದೆ. ಅದನ್ನು ಆಪರೇಷನ್ ಮಾಡಿ ಸರಿಪಡಿಸಿದ್ದಾರೆ...' ಎಂದುಬಿಟ್ಟರು.

ಯಾವತ್ತು ರಾಜ್ ಕುಟುಂಬ ವೈದ್ಯ ರಮಣರಾವ್ ಕೊಲಂಬಿಯಾ ಏಷ್ಯಾಕ್ಕೆ ಕಾಲಿಟ್ಟರೋ ಮೆದುಳಿನಲ್ಲಿ ರಕ್ತ ಕಟ್ಟಿದ ಕತೆಯೂ ಸುಳ್ಳಾಗಿ ಹೋಗಿತ್ತು. ನರಮಂಡಲದಲ್ಲೇನೂ ನ್ಯೂನತೆಯಿಲ್ಲದೆ, ಹೃದಯದ ಯಾವುದೇ ದೌರ್ಬಲ್ಯವಿರದೆ, ಬಿಪಿ, ಶುಗರ್, ಕಿಡ್ನಿ ಇತ್ಯಾದಿ ಏನೊಂದೂ ಕಾರಣವಿಲ್ಲದೆ ರಾಘು ಕುಸಿದು ಬಿದ್ದದ್ದು ವಿವರಿಸಲಾಗದ ವಿಜ್ಞಾನಕ್ಕೆ ನಿಲುಕದ **unexplained week ness** ಅಂದರೆ ಇದ್ದಕ್ಕಿದ್ದಂತೆ ಮೆದುಳಿಗೆ ಹರಿಯಬೇಕಿದ್ದ ರಕ್ತ ಹರಿಯದೇ ಸ್ಥಗಿತಗೊಂಡಿದ್ದಕ್ಕಾಗಿ ರಾಘು ಕುಸಿದು ಬಿದ್ದಿದ್ದರು.

ಶಿವಣ್ಣ ಟೀವಿ ಕ್ಯಾಮೆರಾಗಳನ್ನು ಕಂಡಿದ್ದೇ 'ಮೆದುಳಿನಲ್ಲಿ ರಕ್ತ ಹೆಪ್ಪು ಗಟ್ಟಿದೆ. ಅದನ್ನು ಆಪರೇಷನ್ ಮಾಡಿ ಸರಿಪಡಿಸಿದ್ದಾರೆ' ಎಂದಿದ್ದನ್ನೇ ಬ್ರೇಕಿಂಗ್ ನ್ಯೂಸಾಗಿ ಬಿತ್ತರಿಸಿದ ಟೀವಿಗಳಿಂದಾಗಿ ಇಡೀ ಗಾಂಧಿನಗರ ಆಘಾತಗೊಂಡು 'ಇನ್ನು ಹೆಡ್ಡಾಫೀಸಿನ ಮೆದುಳಿನಲ್ಲೇ ಸಮಸ್ಯೆ ಆದರೆ ಏನು ಗತಿಯೋ' ಎಂದು ಚಿಂತೆಗೀಡಾಗಿದ್ದಂತೂ ಸತ್ಯ!

ಅಪ್ಪ ಅಗಲಿದ ಮೇಲೆ

ಡಾ. ರಮಣರಾವ್‌ನಂಥ ನುರಿತ ತಜ್ಞರೇ ಇದನ್ನು ವಿವರಿಸಲಾಗದ **spasm** ಎನ್ನುತ್ತಾರೆಂದರೆ ರಾಘು ಅನಾರೋಗ್ಯಕ್ಕೂ ಅವರ ಮಾನಸಿಕ ತುಮುಲಗಳಿಗೂ ಏನಾದರೂ ಸಂಬಂಧವಿದೆಯೇ?

ವರನಟ ರಾಜ್ ಕುಟುಂಬವನ್ನು ಹತ್ತಿರದಿಂದ ಬಲ್ಲ ಯಾರಿಗಾದರೂ ರಾಘು ಮತ್ತು ರಾಜ್ ಸಾಮ್ರಾಜ್ಯದ ಸಂಬಂಧ ಅರ್ಥವಾಗಲೇಬೇಕು. ರಾಜ್ ಬದುಕಿದ್ದಷ್ಟೂ ಕಾಲ ಅವಿಚ್ಛಿನ್ನವಾಗಿದ್ದ ಕುಟುಂಬ ಅವರ ನಿಧನಾನಂತರ ಕಂಡ ಏಳುಬೀಳುಗಳು ಒಂದೆರಡಲ್ಲ. ಇಲ್ಲಿಗೆ ಐದು ವರ್ಷದ ಹಿಂದೆಯೇ ಶಿವಣ್ಣ ಸದಾಶಿವನಗರದ ಬಂಗಲೆ ತೊರೆದು ನಾಗವಾರದ ಮಾನ್ಯತಾ ಪಾರ್ಕ್ ಬಂಗಲೆಗೆ ವಲಸೆ ಹೋದರು. ಆ ಮೂಲಕ ಒಂದಾಗಿದ್ದ ರಾಜ್ ಸಹೋದರರ ನಡುವೆಯೇ ಅಂತರ ಹೆಚ್ಚಿತು. ಇದಕ್ಕೆ ಪ್ರತಿಯಾಗಿ ವಜ್ರೇಶ್ವರಿ ಕಂಬೈನ್ಸ್ ತಮ್ಮ ಪುನೀತ್‌ರನ್ನು ಅಖಾಡಕ್ಕಿಳಿಸಿತು. ಪ್ರಶ್ನಾತೀತವಾಗಿ ಪುನೀತ್ ಪ್ರತಿ ಚಿತ್ರವೂ ಹಿಟ್ಟಾಗುತ್ತದೆ ಎಂಬಂತಿದ್ದದ್ದು ಬರಬರುತ್ತ ಹಲವು ಏರುಪೇರನ್ನು ಕಾಣಬೇಕಾಯಿತು. ತಾಯಿ ಪಾರ್ವತಮ್ಮ ಅನಾರೋಗ್ಯ ಪೀಡಿತರಾಗಿದ್ದು, ಪುನೀತ್ ಏಕಾಧಿಪತ್ಯಕ್ಕೆ ಸವಾಲೆಸೆದಂತೆ ದರ್ಶನ್, ಸುದೀಪ್ ಬೆಸುಗೆಯಾಗಿದ್ದು, ಮಾರುಕಟ್ಟೆಯಲ್ಲಿ ದರ್ಶನ್ ಪ್ರಾಬಲ್ಯ ವಿಸ್ತರಿಸಿದ್ದು, ವಯಸ್ಸಾದಂತೆಲ್ಲ ಶಿವಣ್ಣನ ಸ್ಟಾರ್‌ವ್ಯಾಲ್ಯೂ ಮಂಕಾಗಿದ್ದು- ಹೀಗೆ ರಾಜ್ ನಿಧನಾನಂತರ ಕುಟುಂಬದ ಪಾಲಿಗೆ ಅನೇಕ ಸಮಸ್ಯೆಗಳು ಎದುರಾಗಿದ್ದವು.




ಇಷ್ಟೆಲ್ಲದರ ಮಧ್ಯೆಯೂ ಪಾರ್ವತಮ್ಮನವರ ಸಾಮ್ರಾಜ್ಯವನ್ನು ಲಾಲಿಸಿ, ಪಾಲಿಸಿ ಮುನ್ನಡೆಸಿದ್ದು ರಾಘವೇಂದ್ರ ರಾಜ್‌ಕುಮಾರ್!


ವಜ್ರೇಶ್ವರಿಯಲ್ಲಿ


ಶುರುವಿನಲ್ಲಿ ನಟನಾಗುವ ಬಯಕೆ ಹೊತ್ತೇ ಬಣ್ಣ ಹಚ್ಚಿದ ರಾಘಣ್ಣ ಶಿವಣ್ಣನಷ್ಟು ಶಕ್ತನಲ್ಲ ಮತ್ತು ಅದೃಷ್ಟವೂ ಇರಲಿಲ್ಲ. ನಂಜುಂಡಿ ಕಲ್ಯಾಣ, ಗಜಪತಿ ಗರ್ವಭಂಗ ಎಂಬ ಎರಡು ಚಿತ್ರಗಳು ಅದ್ಭುತ ಹಿಟ್ಟಾದವು ನಿಜ. ಆದರೆ ಆನಂತರ ಬಂದ ಚಿರಂಜೀವಿ ಸುಧಾಕರ್, ಆಸೆಗೊಬ್ಬ ಮೀಸೆಗೊಬ್ಬ ಇತ್ಯಾದಿ ಚಿತ್ರಗಳು ಇನ್ನಿಲ್ಲದಂತೆ ನೆಲ ಕಚ್ಚಿದಾಗ ಪಾರ್ವತಮ್ಮನವರಿಗೆ ಅರ್ಥವಾದ ಕಟು ಸತ್ಯವೆಂದರೆ ಹಿಟ್ಟಾದ ನಂಜುಂಡಿ ಕಲ್ಯಾಣ ಮತ್ತು ಗಜಪತಿ... ಚಿತ್ರಗಳಿಗೆ ಕಾರಣವಾಗಿದ್ದೇ ಮಾಲಾಶ್ರೀ!

ಕನ್ನಡದ ಮಾರುಕಟ್ಟೆಯ ಮಟ್ಟಿಗೆ ತಾನು 'ಒಗ್ಗದ ಉತ್ಪನ್ನ' ಎಂಬ ವಾಸ್ತವವನ್ನು ಅರ್ಥೈಸಿಕೊಂಡೇ ರಾಘು ಶಿವಣ್ಣನ ದಾರಿ ಸಲೀಸು ಮಾಡಿಕೊಟ್ಟಿದ್ದೂ ಅಲ್ಲದೇ ತನ್ನದೇ ಆದ ಹೊಸ ಅಧ್ಯಾಯವೊಂದನ್ನು ಆರಂಭಿಸಿದರು. ಅದು ವಜ್ರೇಶ್ವರಿ ಕಂಬೈನ್ಸ್‌ನ ಉಸ್ತುವಾರಿ. ಒಂದೆಡೆ ಶಿವಣ್ಣನ ಚಿತ್ರಗಳು ಸಾಲುಸಾಲಾಗಿ ಬರುತ್ತಿದ್ದಂತೆಯೇ ವಜ್ರೇಶ್ವರಿ ಲಾಂಛನ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ಹೆಸರು ಹೊತ್ತ ಪುನೀತ್ ಚಿತ್ರಗಳು ಹಿಟ್ಟಾಗತೊಡಗಿದ್ದವು. ಇಲ್ಲಿ ಪುನೀತ್ ಜೊತೆಗಿದ್ದವರು ರಾಘು. ಕತೆಯಿಂದ ಹಿಡಿದು, ಡೈರೆಕ್ಟರ್, ಹೀರೋಯಿನ್, ಬಂಡವಾಳ, ಶೂಟಿಂಗ್ ಉಸ್ತುವಾರಿ ಇತ್ಯಾದಿ ಪ್ರತಿಯೊಂದನ್ನೂ ನಿರ್ಧರಿಸುತ್ತಿದ್ದದ್ದು ರಾಘಣ್ಣ. ಇದಕ್ಕೆ ಪೂರಕವೆಂಬಂತೆ ವಜ್ರೇಶ್ವರಿ ಕಂಬೈನ್ಸ್ ಕಟ್ಟಡದಲ್ಲೇ ಎಡಿಟಿಂಗ್ ಸ್ಟುಡಿಯೋ ತಲೆ ಎತ್ತಿತ್ತು, ಇದಕ್ಕೂ ರಾಘುವೇ ಕಾರಣರಾಗಿದ್ದರು. ಒಂದರ ಮೇಲೊಂದಾಗಿ ಹಿಟ್ಟಾಗುತ್ತಿದ್ದ ಪುನೀತ್ ಚಿತ್ರಗಳು, ಬರುತ್ತಿದ್ದ ಲಾಭ, ಜೊತೆಗೆ ಗಾಂಧಿನಗರದಲ್ಲಿ ಶುರುವಾದ ರಾಜ್‌ಕುಮಾರ್ ಇಂಟರ್‌ನ್ಯಾಷನಲ್ ಎಂಬ ಐಷಾರಾಮಿ ಹೊಟೇಲು, ಕನ್ನಡದ ಕೋಟ್ಯಾಧಿಪತಿ ಎಂಬ ಟೀವಿ ಕಾರ್ಯಕ್ರಮದ ಯಶಸ್ಸು, ಅದಕ್ಕೆ ರಾಘುವೇ ನಿಂತು ಪುನೀತ್‌ನನ್ನು ರೂಪಿಸಿದ ರೀತಿಗಳಿಂದಾಗಿ ತೆರೆಮರೆಯಲ್ಲಿ ರಾಘಣ್ಣನ ಬುದ್ಧಿಮತ್ತೆ ಮತ್ತು ವ್ಯವಹಾರಿಕ ಚಾತುರ್ಯವೇ ಇದೆಲ್ಲಕ್ಕೂ ಕಾರಣವೆಂಬುದು ಜನಜನಿತವಾಗಿತ್ತು.













ಡಾ. ರಮಣ ರಾವ್

ಕಪಾಲಿ ಮೋಹನ ಎಂಬ ನಿಗೂಢ ಆಸಾಮಿಯ ಸುತ್ತ

ರಾಘಣ್ಣನ ಅನಾರೋಗ್ಯ ಕುರಿತಂತೆ ಸದ್ಯ ಗಾಂಧಿನಗರದಲ್ಲಿ ಕೇಳಿಬರುತ್ತಿರುವ ಊಹಾಪೋಹಗಳ ಪೈಕಿ ಅನೇಕರು ಹೌದೆನ್ನುವಂತಿರುವುದು ಕಪಾಲಿ ಮೋಹನ ಎಂಬ ಸೋಕಾಲ್ಡ್ ರಾಘಣ್ಣನ ಪಾರ್ಟನರ್ ವಂಚನೆ!



ಇತ್ತೀಚೆಗೆ ಸಂಜೆ ಪತ್ರಿಕೆಗಳಲ್ಲಿ ಯಾರೂ ಕೇಳರಿಯದ ಆಗಂತುಕನೊಬ್ಬನ ಹುಟ್ಟುಹಬ್ಬದ ಜಾಹೀರಾತೊಂದು ಪ್ರಕಟವಾಗಿತ್ತು. ಅದರಲ್ಲಿ ರಾಘಣ್ಣನ ಫೋಟೋ ಕೂಡ ಇತ್ತು. ರಾಜಕಾರಣಿಯಲ್ಲದ, ಹೋರಾಟಗಾರನಲ್ಲದ, ಸಿನಿಮಾ ನಟನಾಗಲಿ, ನಿರ್ಮಾಪಕನಾಗಲಿ, ಕ್ರೀಡಾಪಟುವಾಗಲಿ ಅಲ್ಲದ ಕಪಾಲಿ ಮೋಹನ್ ಎಂಬ ಆಸಾಮಿಗೂ ರಾಜ್ ಕುಟುಂಬಕ್ಕೂ ಏನು ಸಂಬಂಧ ಎಂದು ಅನೇಕರು ಹುಬ್ಬೇರಿಸಿದ್ದೇ ಆತನ ಹುಟ್ಟುಹಬ್ಬದ ಜಾಹೀರಾತು ನೋಡಿದ ನಂತರ.

ತಾನು ಯಾರೆಂಬುದನ್ನೂ ಹೇಳಿಕೊಳ್ಳದೆ ಕೇವಲ ತನ್ನ ಹುಟ್ಟುಹಬ್ಬದ ಜಾಹೀರಾತನ್ನಷ್ಟೇ ರಾಜ್ ಕುಟುಂಬದ ಜೊತೆ ಹಾಕಿಸಿಕೊಂಡಿದ್ದ ಕಪಾಲಿ ಮೋಹನ್ ಸದ್ಯ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವುದು ರಾಘವೇಂದ್ರ ರಾಜ್‌ಕುಮಾರರ ಬಿಜಿನೆಸ್ ಪಾರ್ಟನರ್ ಎಂಬ ಆರೋಪದಿಂದ. ಇತ್ತೀಚೆಗೆ ತೆರೆಕಂಡ ತಮಿಳು ರೀಮೇಕ್ ಚಿತ್ರ 'ಕೇಸ್ ನಂ.18/9' ಎಂಬ ಚಿತ್ರಕ್ಕೆ ಈತ ಕೂಡ ಒನ್ ಆಫ್ ದಿ ಪಾರ್ಟನರ್ ಎಂಬುದರ ಹೊರತಾಗಿ ಗಾಂಧಿನಗರದ ಮಂದಿ ನಂಬಿರುವುದು ಈತ ರಾಘಣ್ಣನ ವ್ಯವಹಾರಿಕ ಪಾಲುದಾರನೆಂದೇ.

ಈತನ ಹೆಸರಿನ ಮುಂದೆ 'ಕಪಾಲಿ' ಎಂಬ ಬಿರುದುಬಾವಲಿ ಇದೆ ಎಂದ ಮಾತ್ರಕ್ಕೆ ಈತನನ್ನು ಕಪಾಲಿ ಥೇಟರ್ ಮಾಲಿಕನೆಂದಾಗಲಿ, ಕಪಾಲಿ ದೈವದ ಸಾಧಕನೆಂದಾಗಲಿ ಯಾರೂ ಭಾವಿಸಬೇಕಿಲ್ಲ. ಇಲ್ಲಿಗೆ ಹತ್ತು ವರ್ಷದ ಹಿಂದೆ ಮೆಜೆಸ್ಟಿಕ್‌ನ ಆನಂದ ರಾವ್ ಸರ್ಕಲ್ಲಿನ ಫುಟ್‌ಪಾತಿನಲ್ಲಿ ಇಡ್ಲೀಗಾಡಿ ಹಾಕುತ್ತಿದ್ದ ಮೋಹನ್ ಉರ್ಫ್ ಕಪಾಲಿಯ ಜಾತಕ, ಹಿನ್ನೆಲೆ, ಇತಿಹಾಸ ಕೆದಕಿದಷ್ಟೂ ಭಯಾನಕ ಮತ್ತು ರೋಚಕ. ಸದ್ಯ ಕಮ್ಮಿಯೆಂದರೂ ಐನೂರು ಕೋಟಿ ರೂಪಾಯಿಗಳ ಆಸ್ತಿವಂತನಾದ ಮೋಹನನ ದಂಧೆಗಳೂ ಅಷ್ಟೇ ನಿಗೂಢ!

ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದ ಹೊಟೇಲು, ಲಾಡ್ಜು ಗಾಂಧಿನಗರದಲ್ಲಿ ಫೈನಾನ್ಸ್, ತನ್ನ ಹುಟ್ಟೂರು ಕುಂದಾಪುರದಲ್ಲಿ ಬೇಕಾಬಿಟ್ಟಿ ಆಸ್ತಿ ಮತ್ತು ಬೆಂಗಳೂರು ಸುತ್ತಮುತ್ತ ನೂರಾರು ಎಕರೆಗಳ ರಿಯಲ್ ಎಸ್ಟೇಟ್ ಸಾಮ್ರಾಜ್ಯವನ್ನು ನಿಭಾಯಿಸುವ ಕಪಾಲಿ ಮೋಹನ ತನ್ನನ್ನು ತಾನು ಪರಿಚಯಿಸಿಕೊಳ್ಳುವುದು ರಾಘಣ್ಣನ ಬಿಜಿನೆಸ್ ಪಾರ್ಟನರ್ ಎಂದೇ. ಅದೇ ರೀತಿ ಈತನ ಜೊತೆ ರಾಘಣ್ಣ ಕೂಡ ಕಾಣಿಸಿಕೊಳ್ಳುತ್ತಾರೆ. ಈತನ ಬರ್ತಡೆಗೆ ಹೋಗಿ ಕೇಕ್ ಕೂಡ ಕತ್ತರಿಸುತ್ತಾರೆ. ಪಾರ್ವತಮ್ಮನವರ ಸುತ್ತಮುತ್ತ ಈತ ಠಳಾಯಿಸಿದ್ದೂ ಕಮ್ಮಿಯೇನಲ್ಲ. ಇಂಥ ಬಂಟನ ನಿಷ್ಠೆಯನ್ನು ಕಂಡೇ ಪ್ರಸನ್ನರಾದ ರಾಘಣ್ಣ ಸರಿಸುಮಾರು ನೂರು ಕೋಟಿಯಷ್ಟನ್ನು ಈತನ ಪಾಲುದಾರಿಕೆಯ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿದ್ದರೆಂದೂ ಇತ್ತೀಚೆಗೆ ಬಲಾಢ್ಯನಾದ ಈತ ದೊಡ್ಡ ಮೊತ್ತವೊಂದಕ್ಕೆ ಕೈ ಎತ್ತಿದ್ದರಿಂದಲೇ ಆಘಾತಕ್ಕೀಡಾದ ರಾಘಣ್ಣ ಕೊರಗಿಗೆ ಬಿದ್ದಿದ್ದರೆಂದೂ ಗಾಂಧಿನಗರದಲ್ಲಿ ಗುಲ್ಲೆದ್ದಿದೆ.

ಈ ಚಿಂತೆಗೆ ಬಿದ್ದೇ ರಾಘು ತಮ್ಮ ಆಹಾರದಲ್ಲಿ ನಿರ್ಲಕ್ಷ್ಯ ತೋರಿರಬಹುದೆ? ದೈಹಿಕವಾಗಿ ವಿಪರೀತ ವ್ಯಾಯಾಮಕ್ಕೆ ತಕ್ಕಂತೆ ಪೌಷ್ಟಿಕ ಆಹಾರದಲ್ಲಾದ ಕೊರತೆಯೇ ರಾಘು ಆರೋಗ್ಯವನ್ನು ಶಿಥಿಲಗೊಳಿಸಿತೆ? ಅಷ್ಟಕ್ಕೂ ಕಪಾಲಿ ಮೋಹನನೆಂಬ ನಿಗೂಢ ವ್ಯಕ್ತಿಗೂ ರಾಜ್ ಕುಟುಂಬಕ್ಕೂ ಇರುವ ಸಂಬಂಧ ಎಂಥಾದ್ದು? ಈತನ ಅಸಂಖ್ಯಾತ ವ್ಯವಹಾರಗಳಿಗೆಲ್ಲ ಆರ್ಥಿಕ ಮೂಲ ಯಾವುದು?

ಈ ಮಧ್ಯೆಯೇ ಬರಸಿಡಿಲಿನಂತೆ ಆಘಾತವೊಂದು ಎದುರಾಗಿತ್ತು, ಅದು ಪಾರ್ವತಮ್ಮನವರ ಅನಾರೋಗ್ಯ!

ಇದ್ದಕ್ಕಿದ್ದಂತೆ ಸ್ತನ ಕ್ಯಾನ್ಸರ್‌ಗೆ ತುತ್ತಾದ ಪಾರ್ವತಮ್ಮ ತಿಂಗಳಾನುಗಟ್ಟಲೇ ಸುಬ್ಬಯ್ಯ ಸರ್ಕಲ್ಲಿನ ಹೆಚ್‌ಸಿಜಿ ಆಸ್ಪತ್ರೆಯಲ್ಲಿರುವಂತಾಯ್ತು. ಒಂದರ ಮೇಲೊಂದಾಗಿ ಕಿಮೋಥೆರಪಿಗಳಿಂದಾಗಿ ತಲೆ ಕೂದಲೆಲ್ಲ ಉದುರಿ ಸಾರ್ವಜನಿಕವಾಗಿ ಪಾರ್ವತಮ್ಮ ಕಾಣಿಸಿಕೊಳ್ಳುವುದೂ ದುಸ್ತರವಾಯಿತು. ದೌರ್ಭಾಗ್ಯವೆಂದರೆ ಹೆಚ್‌ಸಿಜಿ ಆಸ್ಪತ್ರೆಯ ಯಡವಟ್ಟು ಕ್ಯಾನ್ಸರ್ ವೈದ್ಯ ಡಾ. ಗೋಪಿನಾಥ್ ಕೈ ಗುಣವೇ ಭಯಾನಕವಾಗಿತ್ತು. ಈತನಿಂದ ಚಿಕಿತ್ಸೆ ಪಡೆದ ತಪ್ಪಿಗೆ ಕನ್ನಡದ ಖ್ಯಾತ ವ್ಯಂಗ್ಯ ಚಿತ್ರಕಾರ ಪಿ. ಮಹಮ್ಮದ್ ತಮ್ಮ ಪತ್ನಿಯನ್ನೇ ಕಳೆಕೊಂಡು ಪರಿತಪಿಸುತ್ತಿದ್ದರೆ ಮತ್ತೊಬ್ಬ ಸಿನಿಮಾ ಪತ್ರಕರ್ತ ತುಂಗರೇಣುಕ ಇವತ್ತಿಗೂ ಹಿಡಿಶಾಪ ಹಾಕುತ್ತ ನರಳುತ್ತಿದ್ದಾರೆ.

ಇಂಥ ಅನಾಹುತಕಾರಿ ಕ್ಯಾನ್ಸರ್ ತಜ್ಞ ಡಾ. ಗೋಪಿನಾಥ್‌ನನ್ನು ನಂಬಿದ ಪಾರ್ವತಮ್ಮ ಚಿಕಿತ್ಸೆ ಪಡೆದು ಎರಡು ವರ್ಷಗಳಾದರೂ ಚೇತರಿಸಿಕೊಂಡಿಲ್ಲ. ಸಾರ್ವಜನಿಕವಾಗಿ ಓಡಾಡುವುದಕ್ಕೂ ಆಗುತ್ತಿಲ್ಲ. ಇದು ರಾಜ್ ನಿಧನಾನಂತರ ಅವರ ಕುಟುಂಬಕ್ಕಾದ ಎರಡನೇ ಆಘಾತ.

ಹಾಗಂತ ರಾಘು ಕೈಕಟ್ಟಿ ಕೂರಲಿಲ್ಲ. ತಾಯಿಯ ಆರೈಕೆಯಿಂದ ಹಿಡಿದು ವಜ್ರೇಶ್ವರಿ ಕಂಬೈನ್ಸ್‌ನ ಚಟುವಟಿಕೆಗಳ ತನಕ ಪ್ರತಿಯೊಂದನ್ನು ತಾವೇ ನಿಭಾಯಿಸ ತೊಡಗಿದರು. ಒಂದು ಹಂತದಲ್ಲೂ ಪಾರ್ವತಮ್ಮನವರ ಅನುಪಸ್ಥಿತಿ ಕೂಡ ಅರಿವಿಗೆ ಬಾರದ ಹಾಗೆ ರಾಘು ಮುನ್ನಡೆ ಸಾಧಿಸಿದ್ದರು. ಅಲ್ಲಿಗೆ ರಾಜ್ ಮತ್ತು ಪಾರ್ವತಮ್ಮನವರ ಸ್ಥಾನವನ್ನು ಗಾಂಧಿನಗರದ ಮಟ್ಟಿಗೆ ತುಂಬಬಲ್ಲ ತಾಕತ್ತಿರುವುದು ರಾಘಣ್ಣನಿಗೇ ಎಂಬುದು ಸಾಬೀತಾಗಿಹೋಗಿತ್ತು. ಅದೇನು ದುರ್ವಿಧಿಯೋ ಗೊತ್ತಿಲ್ಲ. ಇನ್ನೇನು ಎಲ್ಲಾ ಒಂದು ಹಂತಕ್ಕೆ ಬಂದುನಿಂತಿದೆ ಎನ್ನುವಾಗಲೇ ರಾಘು ಆರೋಗ್ಯ ಕೈಕೊಟ್ಟಿದೆ. ರಾಜ್ ಮಕ್ಕಳ ಪೈಕಿ ಪುನೀತ್ ಮತ್ತು ಶಿವಣ್ಣ ಆರೋಗ್ಯದ ವಿಷಯದಲ್ಲಿ ಶುರುವಿನಿಂದಲೂ ಭಾಗ್ಯವಂತರು. ಆದರೆ ರಾಘು ಹಾಗಲ್ಲ, ಮುಖದಲ್ಲಿ ಏನೋ ಬಳಲಿಕೆ. ದೈಹಿಕವಾಗಿ ಸದೃಢರಲ್ಲ, ವಯಸ್ಸಿಗೆ ತಕ್ಕಂತೆ ಶರೀರವಿಲ್ಲ. ಮದುವೆಗೂ ಮೊದಲೇ ಹೃದಯದ ಸಮಸ್ಯೆಯಿತ್ತು. ಹೃದಯದ ಯಾವುದೋ ಕವಾಟದಲ್ಲಿ ರಂಧ್ರ ಕಾಣಿಸಿತೆಂದೂ ಅದಕ್ಕೆ ಆಪರೇಷನ್ನಾಯಿತೆಂದೂ ಆ ಕಾರಣಕ್ಕೆ ಡಾಕ್ಟರ್ ಆಗಬೇಕಿದ್ದ ರಾಘು ಅದನ್ನು ಕೈಬಿಟ್ಟು ನಟನೆಗಿಳಿದರೆಂದೂ ಇಲ್ಲಿಗೆ 20 ವರ್ಷದ ಹಿಂದೆಯೇ ವದಂತಿಯಿತ್ತು.

ಯಾವ ಕೊರಗು?


ಆದರೆ ಇದೆಲ್ಲವನ್ನೂ ಮೀರಿ ರಾಘು ತನ್ನ ಆರೋಗ್ಯವನ್ನು ಕಾಪಾಡಿಕೊಂಡಿದ್ದರು. ನಿಯಮಿತ ಆಹಾರ, ಪ್ರತಿನಿತ್ಯ ಜಿಮ್, ಸಂಜೆಯಾಯಿತೆಂದರೆ ಯೋಗ- ಹೀಗೆ ಈ ವಯಸ್ಸಲ್ಲೂ ಸಿಕ್ಸ್‌ಪ್ಯಾಕ್ ದೇಹದಾರ್ಢ್ಯವನ್ನು ನಿಭಾಯಿಸಿದ ರಾಘಣ್ಣನಿಗೆ ಅತಿಯಾದ ವ್ಯಾಯಾಮವೇ ಮುಳುವಾಯಿತೆ? ಅಥವಾ ಅದು ಮಾನಸಿಕ ಆಘಾತದ ಪ್ರತಿಫಲವೆ? ತಂದೆಯ ಅಗಲಿಕೆ, ತಾಯಿಯ ಅನಾರೋಗ್ಯದ ನಂತರ ರಾಘುವನ್ನು ತಲ್ಲಣಗೊಳಿಸಿದ ಆ ವಿಷಯ ಯಾವುದು? ದೇಹ ದಂಡಿಸಿದ್ದಕ್ಕೆ ಪೂರಕವಾಗಿ ಆಹಾರ ಸ್ವೀಕರಿಸುವಲ್ಲಿ ರಾಘುವನ್ನು ವಿಚಲಿತಗೊಳಿಸಿದ ಯಾವ ವಿಚಾರವಿತ್ತು?

ಇಂಥ ಅನೇಕ ಸಾಧ್ಯತೆಗಳೇ ರಾಘಣ್ಣನ ಆರೋಗ್ಯದ ಮೇಲೆ ಪರಿಣಾಮ ಬೀರಬಹುದಾ? ಅಥವಾ ಮಿದುಳಿನಲ್ಲಿ ರಕ್ತ ಹೆಪ್ಪು ಕಟ್ಟಿದೆಯೆನ್ನುವ ಶಿವಣ್ಣನ ಮಾತೇ ಸತ್ಯವಾಗಿರಬಹುದಾ?

ಇದೇನೇ ಇರಲಿ, ಸದ್ಯ ರಾಜ್ ಫ್ಯಾಮಿಲಿಯ ಮಟ್ಟಿಗೆ ಮಿದುಳು, ಕೈಕಾಲು ಎಲ್ಲವೂ ಆಗಿರುವ ರಾಘಣ್ಣನಿಗೆ ಅನಾರೋಗ್ಯವೆಂದರೆ ಅದು ಇಡೀ ಕನ್ನಡ ಚಿತ್ರರಂಗದ ಮೇಲೆ ಪರಿಣಾಮ ಬೀರುವುದಂತೂ ಸತ್ಯ. ರಾಜ್ ಅಗಲಿಕೆಯನ್ನೇ ಇನ್ನೂ ಅರಗಿಸಿಕೊಳ್ಳಲಾಗುತ್ತಿಲ್ಲ. ಅದರ ಮಧ್ಯೆ ಪಾರ್ವತಮ್ಮ ಬೇರೆ ಕಳೆದೆರಡು ವರ್ಷಗಳಿಂದ ಕಾಣಿಸಿಕೊಳ್ಳುತ್ತಿಲ್ಲ. ಇಂಥಾದ್ದರಲ್ಲಿ ಪುನೀತ್ ಪಾಲಿಗೆ ಇರುವ ಅಪದ್ಬಾಂಧವ ಮತ್ತು ಆಸರೆ ಎರಡೂ ಆಗಿರುವ ರಾಘಣ್ಣನೇ ಕುಸಿದು ಕೂತರೆಂದರೆ ಅದು ರಾಜ್ ಕುಟುಂಬದ ಮಟ್ಟಿಗೆ ದೊಡ್ಡ ಹಿನ್ನಡೆಯೇ.

ಹಾಗಾಗದಿರಲಿ. ರಾಘಣ್ಣ ಅನಾರೋಗ್ಯದ ಕುರಿತಂತೆ ಹಬ್ಬಿದ ವದಂತಿಗಳೆಲ್ಲವೂ ಸುಳ್ಳಾಗಲಿ. ಕನ್ನಡ ಚಿತ್ರರಂಗದ ಮಟ್ಟಿಗಷ್ಟೇ ಅಲ್ಲ, ಸಾಂಸ್ಕೃತಿಕವಾಗಿಯೂ ರಾಜ್ ಕುಟುಂಬ ನೆಮ್ಮದಿಯಾಗಿರಬೇಕೆಂದರೆ ಅದಕ್ಕೆ ರಾಘಣ್ಣ ಅನಿವಾರ್ಯ ಪುರುಷ. ಅವರ ಹಾದಿಯಲ್ಲಿ ಏನೇನು ಕಲ್ಲು ಮುಳ್ಳುಗಳೋ ಬಲ್ಲವರ್ಯಾರು? ರಾಘಣ್ಣ ಅದೆಲ್ಲವನ್ನೂ ಗೆದ್ದು ಬರಲಿ.

● ರಾ. ಸೋಮನಾಥ್



ಬಿಬಿಎಂಪಿ: ಜೈಲುಪಾಲಾದ ಭ್ರಷ್ಟ ವೈದ್ಯ ನವೀನ್‌ಕುಮಾರ್

ಬಿಬಿಎಂಪಿಯ ಕಡುಭ್ರಷ್ಟ ಆರೋಗ್ಯಾಧಿಕಾರಿ ಡಾ. ನವೀನ್‌ಕುಮಾರ್ ಪರಪ್ಪನ ಅಗ್ರಹಾರ ಜೈಲು ಸೇರಿ ಕಂಬಿ ಎಣಿಸುತ್ತಿದ್ದಾನೆ. ಲಂಚ ಪಡೆಯುವಾಗಲೇ ಲೋಕಾಯುಕ್ತ ಪೊಲೀಸರಿಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ ಗೋವಿಂದರಾಜನಗರ ವಲಯದ ಎಂಓಹೆಚ್ ಅರ್ಥಾತ್ ಆರೋಗ್ಯ ವೈದ್ಯಾಧಿಕಾರಿ ಡಾ. ನವೀನ್‌ಕುಮಾರ್ ಬಿಬಿಎಂಪಿಯ ಬಹುತೇಕ ಲಂಚಕೋರರಂತಷ್ಟೇ ಆಗಿದ್ದರೆ ಆತ ಜೈಲು ಪಾಲಾಗಿದ್ದಕ್ಕೆ ಈ ಪಾಟಿ ಮಹತ್ವವೇ ಇರುತ್ತಿರಲಿಲ್ಲ.


ಇದಕ್ಕೂ ಮುನ್ನ ರಾಜಾಜಿನಗರದಲ್ಲಿ ಉಪ ಆರೋಗ್ಯಾಧಿಕಾರಿಯಾಗಿದ್ದು, ಅದಕ್ಕೂ ಹಿಂದೆ ಶೇಷಾದ್ರಿಪುರದಲ್ಲಿ, ಸಂಜಯನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ- ಹೀಗೆ ಅರ್ಧ ಬೆಂಗಳೂರಿನಲ್ಲಿ ಬಿಬಿಎಂಪಿಯ ಆರೋಗ್ಯಾಧಿಕಾರಿಯಾಗಿದ್ದುಕೊಂಡೇ ಡಾ. ನವೀನ್‌ಕುಮಾರ್ ಮಾಡಿದ ಹಾವಳಿ ಅನಾಹುತಗಳು ಒಂದೆರಡಲ್ಲ-

ಸದ್ಯ ಶಾಸಕ ಪ್ರಿಯಾಕೃಷ್ಣರ ಗೋವಿಂದರಾಜನಗರಕ್ಕೆ ಎಂಓಹೆಚ್ ಆಗಿದ್ದರೂ ಡಾ. ನವೀನ್‌ಕುಮಾರ್ ಬಿಜೆಪಿಯ ಸರಿಸುಮಾರು 40 ಮಂದಿ ಭ್ರಷ್ಟ ಕೌನ್ಸಿಲರ್‌ಗಳ ದುಷ್ಟಕೂಟವೊಂದಕ್ಕೆ 'ರಿಂಗ್‌ಮಾಸ್ಟರ್' ಆಗಿದ್ದದ್ದೇ ಆತನ ಪ್ರಭಾವ ಮತ್ತು ತಾಕತ್ತಿಗೆ ಸಾಕ್ಷಿ. ನಾಗರಬಾವಿ ವಾರ್ಡಿನ ಬಿಜೆಪಿ ಕೌನ್ಸಿಲರ್ ಉಮೇಶ್ ಶೆಟ್ಟಿಯಿಂದ ಹಿಡಿದು ಅತ್ತಿಗುಪ್ಪೆಯ ರೌಡಿ ಕೌನ್ಸಿಲರ್ ದೊಡ್ಡಣ್ಣ, ಮೂಡಲಪಾಳ್ಯದ ಶಾಂತಕುಮಾರಿ, ಕಾಮಾಕ್ಷಿಪಾಳ್ಯದ ರಂಗಣ್ಣ, ಬಸವೇಶ್ವರನಗರದ ಪದ್ಮರಾಜ್, ರಾಜ್‌ಕುಮಾರ್ ವಾರ್ಡಿನ ಗಂಗಭೈರಯ್ಯ, ಮಾಜಿ ಉಪಮೇಯರ್ ಹರೀಶ, ವಿಜಯನಗರದ ರವೀಂದ್ರ, ಪ್ರಕಾಶ್‌ನಗರದ ರವೀಂದ್ರ- ಹೀಗೆ ಬೆಂಗಳೂರಿನ ಅರ್ಧ ಬಿಜೆಪಿ ಕೌನ್ಸಿಲರ್‌ಗಳ ಬೇಕುಬೇಡಗಳ ಸರಬರಾಜುದಾರಿಕೆ ದಂಧೆಗಿಳಿದೇ ಡಾ. ನವೀನ್‌ಕುಮಾರ್ ಈಗ ಜೈಲು ಸೇರಿಕೊಂಡಿದ್ದಾನೆ.


ಬಿಜೆಪಿ ಸರ್ಕಾರವಿದ್ದಾಗ ಮಂತ್ರಿ ಸೋಮಣ್ಣ ಮತ್ತು ಉಪಮುಖ್ಯಮಂತ್ರಿ ಆರ್. ಅಶೋಕ್‌ರಿಗೆ ಎಣ್ಣೆ ತಿಕ್ಕಿಯೇ ಗೋವಿಂದರಾಜನಗರಕ್ಕೆ ಎಂ.ಓ.ಹೆಚ್ ಆಗಿ ಬಂದವನು ನವೀನ್‌ಕುಮಾರ್. ಅದೇ ಹೊತ್ತಿಗೆ ನಾಗರಬಾವಿಯ ಹಳೇ ರೈತರಾಗಿದ್ದ ಭೈರಪ್ಪ ನರಸಿಂಹಮೂರ್ತಿ, ರಾಮಕೃಷ್ಣ ಇತ್ಯಾದಿ ಸಹೋದರರಿಗೂ ಮಾಜಿ ಮಂತ್ರಿ ಸೋಮಣ್ಣನ ಬಂಟರಿಗೂ ರಾಜಕೀಯ ಜಿದ್ದಾಜಿದ್ದಿ ಶುರುವಾಗಿತ್ತು. ಭೈರಪ್ಪ ನರಸಿಂಹ ಮೂರ್ತಿ ಬ್ರದರ್ಸ್ ಹೇಳಿಕೇಳಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ವಿಜಯನಗರದ ಶಾಸಕ ಕೃಷ್ಣಪ್ಪನವರ ಬೆಂಬಲಿಗರು.

ನಾಗರಬಾವಿಯ ಜಮೀನ್ದಾರರಾಗಿದ್ದ ಕಾಂಗ್ರೆಸ್ ಕಾರ್ಯಕರ್ತ ಭೈರಪ್ಪಗೆ ನಾಗರಬಾವಿ ಸರ್ಕಲ್ಲಿನಲ್ಲೇ ವಿವಿಧ ಮಳಿಗೆಗಳಿವೆ. ಈ ಮಳಿಗೆಯಲ್ಲೇ ಮಲ್ಲೇಶ್ವರದ ಶಾಸಕ ಅಶ್ವತ್ಥ ನಾರಾಯಣರಿಗೆ ಸೇರಿದ ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್‌ಫಿಸಿಯೋಥೆರಪಿ ನಡೆಯುತ್ತಿದೆ. ಸಾಲದ್ದಕ್ಕೆ ಮಲ್ನಾಡ್ ಮಿಲ್ಟ್ರಿ ಹೋಟೆಲ್, ಕಾಮಧೇನು ಇಂಜಿನಿಯರಿಂಗ್ ವರ್ಕ್ಸ್, ಮಣಿಕಂಠ ಜ್ಯೂಸ್ ಸೆಂಟರ್ ಇತ್ಯಾದಿಗಳೂ ಇವೆ. ಭೈರಪ್ಪ ಬ್ರದರ್ಸ್ ಕಾಂಗ್ರೆಸ್ ಅನುಯಾಯಿಗಳಾಗಿದ್ದರಿಂದ ಬಿಬಿಎಂಪಿ ಬಿಜೆಪಿ ಹಿಡಿತದಲ್ಲಿದ್ದೆಯಾದ್ದರಿಂದ ಅವರ ಇಡೀ ಕಾಂಪ್ಲೆಕ್ಸ್‌ಗೆ ಸಂಬಂಧಪಟ್ಟಂತೆ ಹತ್ತಾರು ವರ್ಷಗಳಿಂದ ತೆರಿಗೆಯನ್ನೇ ಕಟ್ಟಿಲ್ಲ ಎಂದು ಕಿರುಕುಳದ ಕ್ಯಾತೆ ತೆಗೆದವನು ಡಾ. ನವೀನ್‌ಕುಮಾರ್. ಇದೇ ಕಾರಣಕ್ಕೆ ಮಲ್ನಾಡ್ ಹೋಟೆಲ್, ಜ್ಯೂಸ್ ಸೆಂಟರ್, ಇಂಜಿನಿಯರಿಂಗ್ ವರ್ಕ್ಸ್‌ಗಳ ಲೈಸೆನ್ಸ್‌ನ್ನೂ ನವೀನ್‌ಕುಮಾರ್ ರದ್ದುಗೊಳಿಸಿಬಿಟ್ಟ.

ಪ್ರಾರಂಭದಲ್ಲಿ ಸ್ವಯಂ ಆಸ್ತಿ ಘೋಷಣೆ ಕಾರ್ಯಕ್ರಮದನ್ವಯ ಐದು ಲಕ್ಷ ರೂಪಾಯಿಗಳಷ್ಟು ತೆರಿಗೆ ಕಟ್ಟಿದ್ದ ಭೈರಪ್ಪಗೆ ಮತ್ತೆ ಹತ್ತು ಲಕ್ಷ ಮತ್ತು ಅದಕ್ಕೆ ಬಡ್ಡಿಯಂತೆ 12 ಲಕ್ಷ ಒಟ್ಟು 22 ಲಕ್ಷ ತೆರಿಗೆ ಕಟ್ಟಬೇಕೆಂದು ಬಿಬಿಎಂಪಿಯ ಅಧಿಕಾರಿಗಳ ಮೂಲಕ ನೋಟಿಸು ಕೊಡಲಾಯ್ತು. ಭೀತಿಗೆ ಬಿದ್ದ ಭೈರಪ್ಪ ಕೋರ್ಟು, ಕಾನೂನು, ಮೇಲಧಿಕಾರಿಗಳು ಎಂದೆಲ್ಲಾ ಹೆಣಗಾಡಿ ಅಂತಿಮವಾಗಿ 10 ಲಕ್ಷದಷ್ಟು ಕಾಟದ ತೆರಿಗೆಯನ್ನೇನೋ ಕಟ್ಟಿದ್ದಾಯ್ತು. ಆದರೆ ಲೈಸನ್ಸ್ ರದ್ದಾಗಿದ್ದ ಮಲ್ನಾಡ್ ಮಿಲ್ಟ್ರಿ ಹೋಟೆಲ್, ಜ್ಯೂಸ್ ಸೆಂಟರ್ ಇತ್ಯಾದಿಗಳೆಲ್ಲ ಮತ್ತೆ ಶುರುವಾಗಬೇಕೆಂದರೆ ಅದಕ್ಕೆ ಪರವಾನಗಿ ಕೊಡಬೇಕಾದದ್ದು ಡಾ. ನವೀನ್‌ಕುಮಾರ್.



ಸೋಮಣ್ಣ



ಪ್ರಿಯಾಕೃಷ್ಣ

ವಿಪರ್ಯಾಸವೆಂದರೆ ಇಪ್ಪತ್ತೋ, ಮೂವತ್ತೋ, ಐವತ್ತೋ ಲಕ್ಷ ತೆರಿಗೆ ಕಟ್ಟಬೇಕಾದ ಜಾಗದಲ್ಲಿ ಪಾಲಿಕೆಯನ್ನು ವಂಚಿಸಿ ಎರಡೋ ಮೂರೋ ಲಕ್ಷದ ತೆರಿಗೆ ಕಟ್ಟಿ ವಂಚಿಸಿದ ಬಿಜೆಪಿ ಬೆಂಬಲಿಗರನ್ನೆಲ್ಲ



ನಾಗರಬಾವಿಯ ಮಲ್ನಾಡ್ ಹೋಟೇಲ್ ಮಳಿಗೆ

ಬಿಟ್ಟು ಪ್ರಾಮಾಣಿಕವಾಗಿ ತೆರಿಗೆ ಕಟ್ಟಿಕೊಂಡು ಬಂದಿದ್ದ ಭೈರಪ್ಪನವರನ್ನೇ ಟಾರ್ಗೆಟ್ ಮಾಡಿದ್ದ ಡಾ. ನವೀನ್ ಕುಮಾರ್ ಸತತ ಎರಡು ವರ್ಷಗಳ ಕಾಲ ಅವರ ಮಳಿಗೆಯನ್ನೇ ಬಂದ್ ಮಾಡಿದ್ದ. ಅಂತಿಮವಾಗಿ ಕ್ಯಾನ್ಸಲ್ ಆಗಿದ್ದ ಹೋಟೇಲು, ಜ್ಯೂಸ್ ಅಂಗಡಿಗಳ ಲೈಸೆನ್ಸನ್ನು ನವೀಕರಿಸುವುದಕ್ಕೂ, ಮತ್ತೆ ಒಂದೂವರೆ ಲಕ್ಷದ ಡಿಮ್ಯಾಂಡಿಟ್ಟ. ಈ ಹಂತದಲ್ಲೇ ರೋಸತ್ತು ಹೋಗಿದ್ದ ಭೈರಪ್ಪ ಮತ್ತು ನರಸಿಂಹಮೂರ್ತಿ ಲೋಕಾಯುಕ್ತರ ಮೊರೆ ಹೊಕ್ಕಿದ್ದು.

ಬಹುಶಃ ಡಾ. ನವೀನ್‌ಕುಮಾರ್‌ನ ಪಾಪದ ಕೊಡವೇ ತುಂಬಿತ್ತೇನೊ. ಆತ ಬಹಿರಂಗವಾಗಿ ಲಂಚ ಕೇಳಿದ್ದನ್ನು ಉಪಾಯವಾಗಿ ತನ್ನ ಮೊಬೈಲಿನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದ ಭೈರಪ್ಪ ಮೊದಲ ಕಂತಾಗಿ 25 ಸಾವಿರ ಕೊಟ್ಟಾಗಿತ್ತು. ಎರಡನೇ ಕಂತಾಗಿ 40 ಸಾವಿರ ಕೊಡಲು ಡಾ. ನವೀನ್‌ಕುಮಾರ್ ಸೆಪ್ಟೆಂಬರ್ 5ರ ಡೆಡ್‌ಲೈನ್ ಹಾಕಿದ್ದ. ಕಾಟ ಸಹಿಸಿಯೇ ಹೈರಾಣಾಗಿದ್ದ ನಾಗರಬಾವಿಯ ಕಾಂಗ್ರೆಸ್ ಕಾರ್ಯಕರ್ತರು ಲೋಕಾಯುಕ್ತ ಪೊಲೀಸರ ತಂಡದ ಸಮೇತವೇ ಹೋಗಿ ಲಂಚ ಪಾವತಿಸುತ್ತಿದ್ದರೆ ಅಲಕ್ಕಾಗಿ ಲಂಚವನ್ನು ಜೇಬಿಗಿಳಿಸಿದ್ದ ಡಾ. ನವೀನ್‌ಕುಮಾರ್!

ಸದ್ಯ ಪರಪ್ಪನ ಅಗ್ರಹಾರ ಜೈಲಲ್ಲಿ ಕಂಬಿ ಎಣಿಸುತ್ತಿರುವ ಡಾ. ನವೀನ್‌ಕುಮಾರ್ ಇಷ್ಟೊಂದು ಲಜ್ಜೆಗೆಟ್ಟು ಲಂಚಕ್ಕೆ ಕೈಚಾಚಿದ್ದು ಮತ್ತು ಲಂಚಕ್ಕಾಗಿ ಮಾಡಬಾರದ ಅನ್ಯಾಯಕ್ಕೆ ಕೈಯಿಟ್ಟಿದ್ದಕ್ಕೂ ಕಾರಣವಿದೆ. ಅದು ಆತನ ಪಶುವಾಂಛೆ. ಡಾ. ನವೀನ್‌ಕುಮಾರ್ ಹೇಳಿಕೇಳಿ ಹುಟ್ಟಾ ಕಾಮುಕ ಮತ್ತು ಹೆಣ್ಣುಬಾಕ. ರಾಜಾಜಿನಗರದಲ್ಲಿದ್ದಾಗ ಬರ್ತ್ ಸರ್ಟಿಫಿಕೇಟಿಗೆಂದು ಪಾಲಿಕೆ ಕಚೇರಿಗೆ ಬಂದಿದ್ದ ಗರ್ಭಿಣಿಯೊಬ್ಬಳ ತಂಗಿಯನ್ನೇ ಪೀಡಿಸಿ ಆಕೆಯ ಸಂಬಂಧಿಗಳಿಂದ ಒದೆ ತಿಂದಿದ್ದ. ಪ್ರತಿ ಸಂಜೆಯಾದರೆ ಸಂಜಯ್‌ನಗರದ ತನ್ನ ಶೋಕಿ ಅಡ್ಡೆಯಲ್ಲಿ ಪಾರ್ಟಿ ನಡೆಸುವುದು, ಅಲ್ಲಿಗೆ ತರಹೇವಾರಿ ಹೆಂಗಸರನ್ನು ಕರೆಸಿಕೊಳ್ಳುವುದು, ಅದಕ್ಕೆಂದೇ ನಟೋರಿಯಸ್ ಸರಬರಾಜುದಾರರಿಬ್ಬರನ್ನು ಜೊತೆ ಹಾಕಿಕೊಂಡಿದ್ದು, ಈ ಹಿಂದೆ ಆರೋಗ್ಯ ಇಲಾಖೆಯಲ್ಲಿದ್ದು ಹೊಡೆದ ಕೊಳ್ಳೆಯಲ್ಲೇ ಸಿನಿಮಾ ಮತ್ತೊಂದು ಟಿವಿ ಸೀರಿಯಲ್ ನಿರ್ಮಿಸಿದ್ದ 'ಕಿಲ್ಲರ್ ಡೈರಿ' ಪ್ರೊಡ್ಯೂಸರ್ ಗೋವಿಂದ ಎಂಬಾತನ ಮೂಲಕ ಬಡಪಾಯಿ ಸೀರಿಯಲ್ ನಟಿಯರನ್ನು ಮುಕ್ಕುವುದೇ ಈತನ ಕಾಯಕವಾಗಿತ್ತು.

ಈತನ ವಿಕೃತಿ ಮತ್ತು ಹೆಣ್ಣುಬಾಕ ಶೋಕಿಗೆ ರೋಸತ್ತ ಈತನ ಧರ್ಮ ಪತ್ನಿ ಇಲ್ಲಿಗೆ ಮೂರು ವರ್ಷದ ಹಿಂದೆಯೇ ತನ್ನ ಸಂಜಯನಗರದ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಳು. ಪತ್ನಿಯ ತಂದೆತಾಯಿ ಅದನ್ನು ಕೊಲೆಯೆಂದೇ ಆರೋಪಿಸಿ ದೂರು ಕೊಟ್ಟಿದ್ದರು. ಆದರೆ ತನ್ನ ಪಾಪದ ದುಡ್ಡು ಮತ್ತು ಬಿಜೆಪಿ ಸರ್ಕಾರದಲ್ಲಿ ಗೃಹಮಂತ್ರಿಯಾಗಿದ್ದ ಆರ್. ಅಶೋಕ್ ಮೂಲಕ ಕೊಲೆ ಕೇಸನ್ನೇ ದುಬಾಯಿಸಿ ಹೇಗೋ ಬಚಾವಾದ ಡಾ. ನವೀನ್‌ಕುಮಾರ್ ಇದರಿಂದ ಪಾಠ ಕಲಿಯುವ ಬದಲು ಮತ್ತಷ್ಟು ಪಾಪಕ್ಕೆ ಕೈಯಿಟ್ಟ. ರಾಜಾಜಿನಗರದಲ್ಲಿದ್ದಷ್ಟೂ ಕಾಲ ಹೋಟೇಲುಗಳನ್ನು ಪೀಡಿಸಿ ಲಕ್ಷಗಟ್ಟಲೆ ಲಂಚ ಕಿತ್ತ, ಬಿಜೆಪಿಯವರ ಮಾತು ಕೇಳಿ ಹತ್ತಾರು ಜ್ಯೂಸ್ ಅಂಗಡಿಗಳು ಫಾಸ್ಟ್‌ಫುಡ್ ಕೆಫೆಗಳನ್ನು ಮುಚ್ಚಿಸಿದ. ಗೋವಿಂದರಾಜನಗರಕ್ಕೆ ಬಂದಿದ್ದೇ ಇನ್ನೂ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ವೈದ್ಯರೇ ಬರದಂತೆ ಮಾಡಿ ತಾನೇ ಅದರ 'ಇನ್‌ಚಾರ್ಜ್' ವಹಿಸಿಕೊಂಡ. ಬಡಪಾಯಿ ಪೌರ ಕಾರ್ಮಿಕ ಹೆಂಗಸರನ್ನೂ ಪೀಡಿಸುತ್ತಿದ್ದ. ಈಗ ಈ ಎಲ್ಲದಕ್ಕೂ ಒಟ್ಟಿಗೆ ದಂಡ ಕಟ್ಟುತ್ತಿದ್ದಾನೆ. ಡಾ. ನವೀನ್‌ಕುಮಾರ್ ಸದ್ಯಕ್ಕೆ ಜೈಲಿಂದ ಹೊರಬರುವ ಲಕ್ಷಣಗಳಿಲ್ಲ, ಏಕೆಂದರೆ ಲಂಚ ಪಡೆಯುವಾಗಲೇ ರೆಡ್‌ಹ್ಯಾಂಡ್ ಸಿಕ್ಕಿಬಿದ್ದಿದ್ದಾನೆ.

■ ವರದಿಗಾರ



ಭೈರಪ್ಪ



ನರಸಿಂಹಮೂರ್ತಿ

ಧರ್ಮಸ್ಥಳ

■ ಭೂ ಅವ್ಯವಹಾರ
■ ಕೊಲೆ-ಅತ್ಯಾಚಾರ
■ ಸತ್ಯಕ್ಕೆ ಅಪಚಾರ



ಕರ್ನಾಟಕದ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಧರ್ಮಸ್ಥಳ ಕ್ಷೇತ್ರಕ್ಕೆ ಬಹಳ ವಿಶೇಷ ಸ್ಥಾನವಿದೆ. ಕರ್ನಾಟಕ ಮಾತ್ರವಲ್ಲದೆ, ದೇಶವಿದೇಶಗಳ ಭಕ್ತ ಸಮೂಹಕ್ಕೆ ಈ ಕ್ಷೇತ್ರವೊಂದು ಪವಿತ್ರ ಯಾತ್ರಾಸ್ಥಳ. ಈ ಕ್ಷೇತ್ರದಲ್ಲಿ ಅನೀತಿ, ಅಧರ್ಮಗಳಿಗೆ ಆಸ್ಪದವೇ ಇಲ್ಲ; ಸುಳ್ಳು, ವಂಚನೆ ಈ ಕ್ಷೇತ್ರದಲ್ಲಿ ನಿಷಿದ್ಧ ಎಂದೇ ಬಹುಪಾಲು ಭಕ್ತರ ಗಾಢನಂಬಿಕೆ. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ದೈವ ಸ್ವರೂಪಿಯೆಂದು ನಂಬುವ ಭಕ್ತರೂ ಇದ್ದಾರೆ.

ಇಂಥಾ ಧರ್ಮಸ್ಥಳದ ಧರ್ಮಾಧಿಕಾರಿ ಸುಳ್ಳು ಪ್ರಮಾಣಪತ್ರ ನೀಡಿ, ಬಡಬಗ್ಗರಿಗೆ ದೀನದಲಿತರಿಗೆ ಸೇರಬೇಕಾದ ಭೂಮಿಯನ್ನು ಕಬಳಿಸಬಹುದೆ? ಹೀಗಾದರೆ ಧರ್ಮಸ್ಥಳದ ಅಸಂಖ್ಯಾತ ಭಕ್ತ ಸಮೂಹದ ಧಾರ್ಮಿಕ ನಂಬಿಕೆಗೆ ಘಾಸಿಯನ್ನುಂಟುಮಾಡಿದಂತೆ ಅಲ್ಲವೆ? ಎಂಬ ಗಂಭೀರ ಪ್ರಶ್ನೆಗಳು ಇತ್ತೀಚಿನ ದಿನಗಳಲ್ಲಿ ಧರ್ಮಸ್ಥಳ ಮಾತ್ರವಲ್ಲದೆ ಬೆಳ್ತಂಗಡಿ ತಾಲೂಕಿನಾದ್ಯಂತ ಕೇಳಿಬರುತ್ತಿವೆ.

ಈ ಪ್ರಶ್ನೆಗಳ ತಥ್ಯವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಅಂತೆ-ಕಂತೆಗಳು ಊಹಾಪೋಹಗಳನ್ನು ಬದಿಗಿಟ್ಟು ಕೆಲವು ಅಧಿಕೃತ ದಾಖಲೆಗಳನ್ನು ಪರಿಶೀಲಿಸೋಣ.

ವೀರೇಂದ್ರ ಹೆಗ್ಗಡೆಯವರ ನೆಲ್ಯಾಡಿ ಬೀಡು ಮನೆತನ ಬೆಳ್ತಂಗಡಿ ತಾಲೂಕಿನ ಭಾರೀ ಭೂಮಾಲೀಕರಲ್ಲಿ ಒಂದು. ಇವರ ತಂದೆ ರತ್ನವರ್ಮ ಹೆಗಡೆ ಒಂದು ಕಾಲದಲ್ಲಿ ಶಾಸಕರಾಗಿದ್ದವರು. ಕರ್ನಾಟಕದಲ್ಲಿ ಭೂಸುಧಾರಣಾ ಕಾಯಿದೆ ಜಾರಿಗೆ ಬಂದ ಪರಿಣಾಮವಾಗಿ ಸಾವಿರಾರು ಎಕರೆಗಳನ್ನು ತಮ್ಮ ಕಬ್ಜಾದಲ್ಲಿಟ್ಟುಕೊಂಡು ಗೇಣಿದಾರರನ್ನು ಶೋಷಿಸುತ್ತಿದ್ದ ಪಾಳೇಗಾರಿ ಶಕ್ತಿಗಳಿಗೆ ಒಂದಷ್ಟು ಕಡಿವಾಣ ಬಿದ್ದಿದ್ದು ನಿಜ.

ಬಡಬಗ್ಗರ ಪರವಾದ ಕಾಯಿದೆಯೇನೋ ಬಂತು. ಆದರೆ ಅದನ್ನು ಅನುಷ್ಠಾನ ಮಾಡಬೇಕಾದವರು ಸರ್ಕಾರಿ ಅಧಿಕಾರಿಗಳು ತಾನೇ? ಪ್ರಭಾವಿ ವ್ಯಕ್ತಿಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಅಧಿಕಾರಿಗಳು ಕಾನೂನನ್ನು ಗಾಳಿಗೆ ತೂರಿರುವ ಅದೆಷ್ಟೋ ಪ್ರಕರಣಗಳಿವೆ.

ನಾಗರಿಕ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಸೋಮನಾಥ ನಾಯಕ್ ಅವರು ಮಾಹಿತಿ ಹಕ್ಕಿನಡಿ ಸಂಗ್ರಹಿಸಿರುವ ದಾಖಲೆಗಳು ವೀರೇಂದ್ರ ಹೆಗ್ಗಡೆಯವರಿಗೆ ಸಂಬಂಧಿಸಿದ ಇಂಥ ಒಂದು ಪ್ರಕರಣವನ್ನು ಬೆಳಕಿಗೆ ತಂದಿದೆ.

ಧರ್ಮಸ್ಥಳದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು 1974ರಲ್ಲಿ ಭೂನ್ಯಾಯಮಂಡಳಿಗೆ ಸಲ್ಲಿಸಿದ ಘೋಷಣೆ (Declaration)ಯು (LRY 72/74-75) ಮತ್ತು 11-10-1992ರಲ್ಲಿ ಮತ್ತೊಮ್ಮೆ ತಮ್ಮ ಅಧಿಕೃತ ಲೆಟರ್‌ಹೆಡ್‌ನಲ್ಲಿ ಸಲ್ಲಿಸಿದ ಪರಿಷ್ಕೃತ ಘೋಷಣೆಗಳ ಪ್ರಕಾರ ಅವರ ಕುಟುಂಬ ಹೊಂದಿದ್ದ ಒಟ್ಟು 4671 ಎಕರೆ ಕೃಷಿಭೂಮಿಯು ಪೈಕಿ 3620 ಎಕರೆ ಭೂಮಿ ಒಕ್ಕಲುಗಳಪರ ತೀರ್ಪಾಗಿದ್ದು ತಮ್ಮ ವಶದಲ್ಲಿ ಉಳಿದಿರುವ ಭೂಮಿ 1050 ಎಕರೆಯೆಂದೂ ಘೋಷಿಸಿಕೊಂಡಿದ್ದಾರೆ. ಘೋಷಣೆದಾರರ ಕುಟುಂಬದ 4 ಮಂದಿ ಪ್ರಾಯಸ್ಥರಿಗೆ ಕಾನೂನುಪ್ರಕಾರ ಅರ್ಹತೆ ಇರುವಂತೆ ತಲಾ 54 ಎಕರೆ ಕೃಷಿಭೂಮಿಯ ಒಡೆತನ ಹೊಂದಲು ಅವಕಾಶವಿದೆ. ಅದರಂತೆ 216 ಎಕರೆ ಕೃಷಿಭೂಮಿ ಹೊರತುಪಡಿಸಿ ಉಳಿಕೆ ಭೂಮಿಯನ್ನು ಸರಕಾರಕ್ಕೆ ಬಿಟ್ಟು ಕೊಡಬೇಕಾಗುತ್ತದೆ ಎಂದಾಯಿತು.

ಆದರೆ ಹೆಗ್ಗಡೆಯವರು ಅನುಸರಿಸಿದ ದಾರಿಯೇ ಬೇರೆ. ತಮ್ಮ ವಶದಲ್ಲಿರುವ ಒಟ್ಟು 1050 ಎಕರೆ ಭೂಮಿಯಲ್ಲಿ ಕೃಷಿಭೂಮಿ ಕೇವಲ 137 ಎಕರೆ ಮಾತ್ರವೆಂದು ತೋರಿಸಿ ಉಳಿದ ಭೂಮಿಯನ್ನು ಕೃಷಿಯೇತರ ಭೂಮಿಯೆಂದು ಹೇಳಿದ್ದಾರೆ. 137 ಎಕರೆ ಕೃಷಿ ಭೂಮಿ ಹೊರತುಪಡಿಸಿದರೆ ಸುಮಾರು 900 ಎಕರೆಗೂ ಹೆಚ್ಚು ಭೂಮಿಯನ್ನು ಕನ್ವರ್ಷನ್ ಆದ ಭೂಮಿ ಅಥವಾ ಡೀಮ್ಡ್ ಕನ್ವರ್ಷನ್ ಭೂಮಿ ಮತ್ತು ಪ್ಲಾಂಟೇಷನ್ ಭೂಮಿ ಹೆಸರಿನಲ್ಲಿ ಘೋಷಿಸಿಕೊಂಡಿದ್ದಾರೆ. ಇಲ್ಲಿ ಒಂದು ವಿಷಯವನ್ನು ನಾವು ನೆನಪಿಡಬೇಕು. ಏನೆಂದರೆ ಈ ಮೇಲ್ಕಂಡ ರೀತಿಯಲ್ಲಿ ವರ್ಗೀಕರಣಗೊಂಡ ಭೂಮಿಗಳು ಭೂಮಿತಿ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ಭೂನ್ಯಾಯ ಮಂಡಳಿಯ 6.3.2012ರಲ್ಲಿ ಹೊರಡಿಸಿದ ಆದೇಶದ ಪ್ರತಿಗಳನ್ನು ಮಾಹಿತಿ ಹಕ್ಕು ಕಾಯ್ದೆಯಲ್ಲಿ ಪಡೆಯಲಾಗಿದೆ. ವೀರೇಂದ್ರ ಹೆಗ್ಗಡೆಯವರು ಡಿಕ್ಲರೇಶನ್ ಕೊಟ್ಟು ಬರೋಬ್ಬರಿ 38 ವರ್ಷ ಕಳೆದಮೇಲೆ ಭೂನ್ಯಾಯ ಮಂಡಳಿ ಈ ತೀರ್ಪು ನೀಡಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.


ಸದರಿ ತೀರ್ಪಿನಲ್ಲಿ ಸಾರಾಸಗಟಾಗಿ ನೂರಾರು ಎಕರೆ ಭೂಮಿಯನ್ನು ಡೀಮ್ಡ್ ಕನ್ವರ್ಶನ್ ಭೂಮಿ ಎಂದು, ಪ್ಲಾಂಟೇಶನ್ ಭೂಮಿ ಎಂದು, ಕನ್ವರ್ಶನ್ ಆದ ಭೂಮಿ ಎಂದು ಪರಿಗಣಿಸಲಾಗಿದೆ. ಭೂನ್ಯಾಯ ಮಂಡಳಿಯ ಇಂಥಾ ಆದೇಶದ ಪರಿಣಾಮವಾಗಿ ಘೋಷಣೆದಾರರೇ ಉಳಿಕೆ ಎಲ್ಲಾ ಭೂಮಿ ಅನುಭವಿಸುವಂತಾಗಿದೆ. ಹೀಗೆ ಸಾವಿರಗಟ್ಟಲೆ ಎಕರೆ ಭೂಮಿಯ ಬಗ್ಗೆ ಸೂಕ್ತ ತನಿಖೆ ಮಾಡದೆ, ಅಗತ್ಯ ನಿಯಮಾವಳಿಗಳನ್ನು ಅನುಸರಿಸದೆ ಕಾನೂನು ಉಲ್ಲಂಘನೆ ಮಾಡಿರುವುದು ಮೇಲುನೋಟಕ್ಕೆ ಕಂಡುಬರುತ್ತಿದೆ. ಅಷ್ಟು ಮಾತ್ರವಲ್ಲ; ಸದರಿ ಆದೇಶದಲ್ಲಿ ಘೋಷಣೆದಾರರ ಘೋಷಣೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲಿಕ್ಕಾಗಿ ಕೃಷಿಭೂಮಿ ಮತ್ತಿತರ ಭೂಮಿಗಳ ಸ್ಥಳ ತನಿಖೆ ಮಾಡಿದ ಯಾವುದೇ ಉಲ್ಲೇಖವಿಲ್ಲ. ಈ ವಿಷಯದಲ್ಲಿ ಭೂನ್ಯಾಯ ಮಂಡಳಿಯ ಅಧ್ಯಕ್ಷರಾದ ಸಹಾಯಕ ಕಮೀಷನರ್‌ರ ಪಾತ್ರ ಬಹಳ ಮಹತ್ವದ್ದು.

ಸಾರ್ವಜನಿಕ ಕ್ಷೇತ್ರದಲ್ಲಿರುವ ವ್ಯಕ್ತಿಗಳು, ಸಂಸ್ಥೆಗಳಿಗೆ ಸಂಬಂಧಿಸಿದ ವ್ಯವಹಾರಗಳು ಇನ್ನೂ ಹೆಚ್ಚು ಪಾರದರ್ಶಕವಾಗಿರಬೇಕು ಎಂಬ ಆಗ್ರಹ ಇಂದು ಎಲ್ಲೆಡೆ ಕೇಳಿಬರುತ್ತಿದೆ. ವಿವಿಧ ನ್ಯಾಯಾಲಯಗಳ ಹಲವು ತೀರ್ಪುಗಳೂ ಈ ಅಂಶವನ್ನು ಎತ್ತಿತೋರಿಸಿವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಧರ್ಮಾಧಿಕಾರಿಯಂತಹ ಉನ್ನತ ಸ್ಥಾನದಲ್ಲಿರುವ ವೀರೇಂದ್ರ ಹೆಗ್ಗಡೆ ಸಲ್ಲಿಸಿರುವ ಘೋಷಣಾ ಪತ್ರವನ್ನು ಕಾನೂನುಪ್ರಕಾರ ಪುನರ್‌ವಿಮರ್ಶೆಗೆ ಒಳಪಡಿಸಬೇಕೆಂದು ಹಲವು ಸಂಘಸಂಸ್ಥೆಗಳ ಆಗ್ರಹ ಸಂದರ್ಭೋಚಿತ ಎನ್ನಲೇಬೇಕು. ಕಾನೂನು ಉಲ್ಲಂಘನೆ ಮಾಡಿರುವವರ ಮೇಲೆ ಸೂಕ್ತ ಕ್ರಮ ಜರುಗಿಸಿ, ಕಾನೂನುಬಾಹಿರ ಭೂಮಿಯನ್ನು ಮುಟ್ಟುಗೋಲು ಮಾಡಿಕೊಂಡು ಭೂರಹಿತರಿಗೆ ಮುಖ್ಯವಾಗಿ ದಲಿತರಿಗೆ ಹಂಚಲು ಬೇಕಾದ ಕ್ರಮಗಳನ್ನು ಸರ್ಕಾರ ತುರ್ತಾಗಿ ಕೈಗೊಳ್ಳಬೇಕಾದ ಅಗತ್ಯವಿದೆ.

ದಲಿತರಿಗೆ ವಂಚನೆ

ಕಾನೂನನ್ನು ಅನುಷ್ಠಾನಗೊಳಿಸಬೇಕಾದ ಅಧಿಕಾರಿಗಳೇ ಕಾನೂನು ಉಲ್ಲಂಘನೆ ಮಾಡಿರುವ ಮತ್ತೊಂದು ಪ್ರಕರಣ ಹೀಗಿದೆ. ಉಜಿರೆ ಗ್ರಾಮದ ಸರ್ವೆ ನಂಬರ್ 497, 507, 503, 518, 519, 521, 522, 524 ಮತ್ತು 526ರಲ್ಲಿ ಒಟ್ಟು 43.90 ಎಕರೆ ಡಿ.ಸಿ - ಮನ್ನಾ (Depressed Class Reserve) ಭೂಮಿಯನ್ನು ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಧರ್ಮಸ್ಥಳ

▶▶12



ಅನುಬಂಧ–ಎ

ಘೋಷಣೆದಾರರು: ಧರ್ಮಸ್ಥಳ ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರು

1	2	3	4	5	6a	6b	6c	7	8	9
1	[illegible]	779.23	458.52	320.75	201.375	–	42.75	320.75	–	–
2	[illegible]	2635.18	2081.35	553.825	114.76	178.888	200.795	398.91	98.76	307.568
3	[illegible]	92.88	76.325	16.555	–	6.11	10.445	16.555	–	–
4	[illegible]	0.31	0.06	0.25			0.25	0.25	–	–
5	[illegible]	35.57	32.26	3.31	–	–	3.31	3.31	–	–
6	[illegible]	350.87	317.73	33.14	–	2.34	23.38	27.52	5.63	30.186
7	[illegible]	323.48	258.525	64.955	–	–	54.355	58.235	8.31	32.898
8	[illegible]	250.57	224.36	25.21	–	12.81	8.82	20.85	4.28	7.884
9	[illegible]	184.98	150.27	33.38	–	8.38	24.28	32.38	–	–
	ಒಟ್ಟು	4671.86	3620.38	1050.76	431.235	208.075	334.93	974.24	78.47	337.64

ವೀರೇಂದ್ರ ಹೆಗ್ಗಡೆಯವರ ಕುಟುಂಬ ಹೊಂದಿರುವ ಜಮೀನಿನ ಘೋಷಣಾ ಪತ್ರ

ಈ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?

ನಾಗರಿಕ ಸೇವಾ ಟ್ರಸ್ಟ್ ಎಂಬ ಸಂಘಟನೆಯು ಭೂ ಅವ್ಯವಹಾರಕ್ಕೆ ಸಂಬಂಧಿಸಿ ಹಲವು ಗುರುತರವಾದ ಅಂಶಗಳನ್ನು ಬೆಳ್ತಂಗಡಿ ಶಾಸಕ ವಸಂತ ಬಂಗೇರಾ ಮೂಲಕ ಸರ್ಕಾರದ ಮುಂದಿರಿಸಿದೆ. ಅದರ ಕೆಲವು ಆಯ್ದ ಭಾಗ ಹೀಗಿದೆ.



1. ಘೋಷಣೆದಾರರು ಹೊಂದಿರುವ ಎಲ್ಲಾ ಕೃಷಿಭೂಮಿ ಮತ್ತು ಇತರ ಭೂಮಿಗಳನ್ನು ಘೋಷಣೆ ಮಾಡಿದ್ದಾರೆಯೇ ಎಂಬುದು ಸಂಶಯಾಸ್ಪದ.
2. ಕ್ರೋಢೀಕರಿಸಿದ ಭೂಮಿಯ ತಖ್ತೆಯಲ್ಲಿ ಒಟ್ಟು ಉಳಿಕೆ ವಿಸ್ತೀರ್ಣದಲ್ಲಿ ಸುಮಾರು 300 ಎಕರೆ ಕಡಿಮೆ ಕಾಣುತ್ತಿದೆ.
3. ಒಕ್ಕಲುಗಳ ಪರ ತೀರ್ಪಾಗಿದ್ದರೂ ಹಲವು ಒಕ್ಕಲುಗಳು ಬೇನಾಮಿಯಾಗಿ ಇರುವ ಸಾಧ್ಯತೆ ಇದೆ.
4. 1974 ರ ಮೊದಲು 208.075 ಎಕರೆ ಪರಿವರ್ತನೆ ಆದ ಜಮೀನು ಬಗ್ಗೆ ಪುರಾವೆಗಳಿರುವುದು ಸಂಶಯಾಸ್ಪದ.
5. 1974 ರ ಮೊದಲು 431.235 ಎಕರೆ ಪ್ಲಾಂಟೇಶನ್ ಭೂಮಿ ಇರುವುದು ಸಂಶಯಾಸ್ಪದ. ಸುಳ್ಳು ದಾಖಲೆ ಸೃಷ್ಟಿಸಿರುವ ಸಾಧ್ಯತೆ ಕಂಡುಬರುತ್ತದೆ. ಈ ಸ್ಥಳಗಳ ಅಳತೆಯಾಗಿದೆಯೇ, ಸ್ಥಳ ತನಿಖೆ ಆಗಿದೆಯೇ? ಎಂಬುದು ತಿಳಿದಿಲ್ಲ.
6. 334.93 ಎಕರೆ ಡೀಮ್ಡ್ ಕನ್ವರ್ಶನ್ ಎಂದು ಹೇಳಲ್ಪಟ್ಟಿರುವ ಕೃಷಿಭೂಮಿಯಲ್ಲಿ ಕಟ್ಟಡಗಳು, ರಸ್ತೆಗಳು, ಸೈಟುಗಳು ಅಥವಾ ಕೃಷಿಯೇತರ ಭೂಮಿ ಎಂದು ಸಾರಾಸಗಟಾಗಿ ಹೇಳಲಾಗಿದೆ. Form 11, ಅನುಬಂಧ-ಎ ಯಲ್ಲಿ ಪುಟ 1 ರಿಂದ 21ರ ತನಕ ಕಾಣಿಸಿದ 535 ಸರ್ವೆನಂಬರ್‌ಗಳಲ್ಲಿ 1974ರ ಮೊದಲು ಇವೆಲ್ಲಾ ಕೃಷಿಭೂಮಿ ಆಗಿತ್ತು.
7. ಕಾನೂನಿನ ಪರಿಭಾಷೆಯಲ್ಲಿ ಕೃಷಿಭೂಮಿಯನ್ನು ಕೃಷಿಯೇತರ ಭೂಮಿ ಎಂದು ಪರಿಗಣಿಸಲು ಅವಕಾಶವಿರುವುದಿಲ್ಲ.
8. ಈ ಸ್ಥಳಗಳ ಸ್ಥಳ ತನಿಖೆ ಮಾಡಿ ವಾಸ್ತವ ಸ್ಥಿತಿಯನ್ನು ಕಂದಾಯ ಇಲಾಖೆಯಾಗಲಿ ಅಥವಾ ಭೂನ್ಯಾಯ ಮಂಡಳಿಯು ದಾಖಲು ಮಾಡಿರುವುದು ಕಂಡುಬರುವುದಿಲ್ಲ ಹಾಗೂ ಆದೇಶದಲ್ಲಿ ಈ ಬಗ್ಗೆ ಉಲ್ಲೇಖ ಇಲ್ಲ, ಇದೊಂದು ಸುಳ್ಳು ದಾಖಲೆ ಸೃಷ್ಟಿಯಾಗಿದ್ದು ಕಾನೂನುಬಾಹಿರ ಮತ್ತು ಅಕ್ರಮವಾಗಿದೆ ಎಂಬುದು ನಿಸ್ಸಂಶಯ.
9. ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಮಂಡಳಿಗೆ ಸಲ್ಲಿಸಿದ ಹೇಳಿಕೆಯಲ್ಲಿ (O.R. 2468/92 ತಾ. 11.10.1992 ರಲ್ಲಿ) ಕೊಟ್ಟ ಮಾಹಿತಿ ಸತ್ಯವೇ ಎಂದು ತನಿಖೆ ಮಾಡಿರುವುದಿಲ್ಲ ಮತ್ತು ಈ ಬಗ್ಗೆ ಆದೇಶದಲ್ಲಿ ಉಲ್ಲೇಖ ಇಲ್ಲ.


ಮೇಲ್ಕಾಣಿಸಿದ ಕಾರಣಗಳಿಗಾಗಿ ಈ ಅಕ್ರಮ ಭೂ ಕರ್ಮಕಾಂಡದ ಸಮಗ್ರ ತನಿಖೆ ಮಾಡಿ, ಇದರಲ್ಲಿ ಭಾಗಿಯಾದ ಕಂದಾಯ ಇಲಾಖಾಧಿಕಾರಿಗಳು, ಭೂನ್ಯಾಯ ಮಂಡಳಿಯ ಅಧ್ಯಕ್ಷರು (ಸಹಾಯಕ ಕಮೀಷನರ್) ಮೇಲೆ ಕಾನೂನು ಕ್ರಮಕೈಗೊಂಡು ಶಿಕ್ಷೆ ವಿಧಿಸಬೇಕಾಗಿಯೂ ಸುಳ್ಳು ಘೋಷಣಾ ಪತ್ರ ಸಲ್ಲಿಸಿದ ಘೋಷಣೆದಾರರ ಮೇಲೆ ಕಾನೂನು ಕ್ರಮ ಕೈಗೊಂಡು ಹೆಚ್ಚುವರಿ ಕೃಷಿಭೂಮಿಯನ್ನು ಸರ್ಕಾರ ಮುಟ್ಟುಗೋಲು ಹಾಕಿ ಸ್ವಾಧೀನಕ್ಕೆ ಪಡೆದು ಇದನ್ನು ಭೂರಹಿತ ದಲಿತರಿಗೆ, ಹಿಂದುಳಿದವರ್ಗಗಳಿಗೆ ಹಂಚಬೇಕಾಗಿಯೂ ನಾವು ಸರ್ಕಾರಕ್ಕೆ ಆಗ್ರಹಪೂರ್ವಕ ವಿನಂತಿ ಮಾಡುತ್ತಿದ್ದೇವೆ ಎಂದು ನಾಗರಿಕ ಸೇವಾ ಟ್ರಸ್ಟ್ ಪತ್ರದಲ್ಲಿ ಕೋರಿದೆ.

ಪ್ರಜಾಪ್ರಭುತ್ವ ದೇಶವೊಂದರಲ್ಲಿ ಕಾನೂನು ಕಟ್ಟಳೆಗಳು ಸರಿಯಾಗಿ ಪಾಲನೆಯಾಗದೆ, ಬಲಾಢ್ಯರ ಪರವಾಗಿ ದುರ್ಬಳಕೆ ಆಗುವ ಸಾಧ್ಯತೆಯಿರುವಾಗ ಈ ಬಗ್ಗೆ ದನಿ ಎತ್ತಲು ನಮ್ಮ ಸಂವಿಧಾನ, ಕಾನೂನುಗಳು ನಮಗೆ ಅವಕಾಶ ಕಲ್ಪಿಸಿಕೊಟ್ಟಿವೆ. ಹೀಗಿರುವಾಗ ವೀರೇಂದ್ರ ಹೆಗ್ಗಡೆಯವರ ಭೂಮಿ ಪ್ರಕರಣದಲ್ಲಿ ಸರ್ಕಾರ ಜವಾಬ್ದಾರಿಯುತವಾಗಿ ವರ್ತಿಸಿ ಸೂಕ್ತ ತನಿಖೆ ಕೈಗೊಳ್ಳಬೇಕು. ಅದೇ ರೀತಿ ಧರ್ಮಾಧಿಕಾರಿಯೆಂಬ ಜವಾಬ್ದಾರಿಯುತ ಸ್ಥಾನದಲ್ಲಿರುವ ವೀರೇಂದ್ರ ಹೆಗ್ಗಡೆ ಈ ಬಗ್ಗೆ ಸೂಕ್ತ ದಾಖಲಾತಿಗಳನ್ನು ಸರ್ಕಾರದ ಮುಂದಿಟ್ಟು ತನಿಖೆ ಪಾರದರ್ಶಕವಾಗಿರುವಂತೆ ನೋಡಿಕೊಳ್ಳಬೇಕಾದ್ದು ಹಾಗೂ ಸಾರ್ವಜನಿಕರಿಗೆ ಸಮರ್ಪಕ ಉತ್ತರ ಕೊಡಬೇಕಾದ್ದು ಇಂದಿನ ಸಂದರ್ಭದಲ್ಲಿ ಅಪೇಕ್ಷಣೀಯ ನಡವಳಿಕೆ.

ಸರ್ಕಾರ ಹಾಗೂ ಸಂಬಂಧಿಸಿದವರಿಂದ ಇಂಥಾ ಜವಾಬ್ದಾರಿಯುತ, ಪ್ರಜಾತಾಂತ್ರಿಕ ನಡವಳಿಕೆಯನ್ನು ನಿರೀಕ್ಷಿಸಬಹುದೆ? ■

ಸೌಜನ್ಯಳನ್ನು ಕೊಂದವರ್ಯಾರು?





ಧರ್ಮಸ್ಥಳದ ಉಜಿರೆಯಲ್ಲಿ ಆಕ್ರೋಶಭರಿತ ಹಾಡೊಂದು ಕೇಳಿಬರುತ್ತಿದೆ. ಹಾಡು ಹೀಗಿದೆ.

'ಇಷ್ಟೇನಾ... ಇಷ್ಟೇನಾ... ಹೆಮ್ಮೆಯ ಭಾರತ ಇಷ್ಟೇನಾ...?

ಕೊಲೆಯಾದಳು ಸೌಜನ್ಯ ಸಾವಿನ ತನಿಖೆ ಇಷ್ಟೇನಾ...?

ದೇವರ ನಾಡು ಧರ್ಮದ ಬೀಡಲಿ ದೇವರ ಮಹಿಮೆ ಇಷ್ಟೇನಾ...?

ಭಾರತಾಂಬೆಯ ನ್ಯಾಯ ಪೀಠದಿ ನ್ಯಾಯಕ್ಕೆ ಬೆಲೆ ಇಷ್ಟೇನಾ...?

ರಕ್ಷಣೆಗಿರುವ ಆರಕ್ಷಕರು ಧನಿಕರ ರಕ್ಷಣೆಗಷ್ಟೇನಾ...?

ಮುಚ್ಚಿದ ಸತ್ಯವ ಬಿಚ್ಚಿಡುವಲ್ಲಿ ಮಾಧ್ಯಮದ ನಡೆ ಇಷ್ಟೇನಾ...?'

-ಬರ್ಬರ ಅತ್ಯಾಚಾರಕ್ಕೀಡಾಗಿ ಕೊಲೆಯಾದ ಸೌಜನ್ಯ ಎಂಬ ಅಮಾಯಕ ಯುವತಿಯ ಪೋಷಕರು ಹಾಗೂ ಬಂಧುಗಳಿಗೆ ಬೆಂಬಲವಾಗಿ ನಿಂತಿರುವ ಜನವಾದಿ ಮಹಿಳಾ ಸಂಘಟನೆ ಹಾಗೂ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟದ ಯುವತಿ-ಯುವಕರು ಕಟ್ಟಿದ ಹಾಡು ಇದು. ಈ ಹಾಡು ಧರ್ಮಸ್ಥಳ, ಉಜಿರೆಗಳಲ್ಲಿ ಮಾತ್ರವಲ್ಲದೆ ಬೆಳ್ತಂಗಡಿ ತಾಲೂಕು ಕೇಂದ್ರದ ರಾಜಬೀದಿಗಳಲ್ಲಿ, ಮಂಗಳೂರು ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ನೊಂದವರ ಆಕ್ರಂದನವಾಗಿ ಮೊಳಗುತ್ತಿದೆ. ಆದರೆ ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿರುವ ಸರ್ಕಾರಿ ಯಂತ್ರಾಂಗ ಮಾತ್ರ ಬಂಡೆಗಲ್ಲಿನಂತೆ ಕಿವುಡಾಗಿ ಕುಳಿತಿದೆ.

ಇದೇ ಅಕ್ಟೋಬರ್ 9ಕ್ಕೆ ಧರ್ಮಸ್ಥಳದಲ್ಲಿ ಸೌಜನ್ಯ ಎಂಬ ಪಿಯುಸಿ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ನಡೆದು ಒಂದು ವರ್ಷ ಕಳೆದು ಹೋಯಿತು. ಆದರೆ ಇದುವರೆಗೆ ಈ ಪ್ರಕರಣದ ತನಿಖೆ ಮಾತ್ರ ಒಂದಿಂಚೂ ಮುಂದೆ ಸಾಗಿಲ್ಲ. ಸ್ಥಳೀಯ ಪೊಲೀಸರು ಸಂತೋಷ್ ರಾವ್ ಎಂಬ ಮಾನಸಿಕ ಅಸ್ವಸ್ಥನೊಬ್ಬನನ್ನು ಹಿಡಿದು ಆತನೇ ಈ ಅತ್ಯಾಚಾರ ಮತ್ತು ಕೊಲೆ ಮಾಡಿದ್ದಾನೆಂದು ಘೋಷಿಸಿ ಕೈತೊಳೆದುಕೊಂಡಿದ್ದಾರೆ. ಆದರೆ ಸೌಜನ್ಯಳ ಬಂಧುಗಳು ಪೊಲೀಸರ ಈ ನಡವಳಿಕೆಯನ್ನು ಅಪ್ಪಟ ಕಟ್ಟುಕತೆಯೆಂದು ಘಂಟಾಘೋಷವಾಗಿ ಹೇಳುತ್ತಿದ್ದಾರೆ. ಈ ಪಾತಕ ಕೃತ್ಯ ಎಸಗಿದ ಪ್ರಭಾವಿ ವ್ಯಕ್ತಿಗಳ ಪುತ್ರರನ್ನು ರಕ್ಷಿಸುವ ಸಲುವಾಗಿಯೇ ಪೊಲೀಸರು ಇಂಥಾ ಕಟ್ಟುಕತೆ ಹೆಣೆದಿದ್ದಾರೆ ಎಂಬುದು ಅವರ ಆರೋಪ.

ಸದರಿ ಪ್ರಕರಣದ ತನಿಖಾಧಿಕಾರಿಯಾಗಿರುವ ಎಸ್‌ಐ ಯೋಗೀಶ್‌ಕುಮಾರ್ ಸ್ವತಃ ಅಪರಾಧಿಗಳ ರಕ್ಷಣೆಗೆ ನಿಂತಿದ್ದಾರೆ ಎಂದು ಸೌಜನ್ಯಳ ತಂದೆತಾಯಿ ಮತ್ತು ಬಂಧುಗಳು ನೇರವಾಗಿ ಆರೋಪಿಸುವ ಮಟ್ಟಕ್ಕೆ ಈ ಪ್ರಕರಣ ಹಳ್ಳ ಹಿಡಿದುಹೋಗಿದೆ. ಈ ಪ್ರಕರಣದ ತನಿಖೆಗೆಂದು ಸರ್ಕಾರದಿಂದ ನಿಯೋಜಿತಗೊಂಡಿದ್ದ ಸಿಓಡಿ ತನಿಖಾಧಿಕಾರಿಯು ಮುಂದೆ ತಾರೀಖು 11-01-2013ರಂದು ಸೌಜನ್ಯಳ ತಂದೆ ಚಂದಪ್ಪಗೌಡ ಮತ್ತೊಂದು ಅಹವಾಲು ಸಲ್ಲಿಸಿ ತಮಗೆ ಸಂಶಯವಿರುವ ಮೂವರು ವ್ಯಕ್ತಿಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಈ ಮೂವರು ಶಂಕಿತ ವ್ಯಕ್ತಿಗಳೇ ಧೀರಜ್ ಕೆಲ್ಲ, ಮಲ್ಲಿಕ್ ಜೈನ್ ಮತ್ತು ಉದಯ್ ಜೈನ್. ಧೀರಜ್ ಕೆಲ್ಲನ ತಂದೆ ರವಿರಾಜ್ ಕೆಲ್ಲ ಧರ್ಮಸ್ಥಳದ ಛತ್ರದ



ಉಸ್ತುವಾರಿ ನೋಡಿಕೊಳ್ಳುತ್ತಿರುವ ವ್ಯಕ್ತಿ. ಮಲ್ಲಿಕ್‌ನ ತಂದೆ ಮೇಘರಾಜ್ ಧರ್ಮಸ್ಥಳದ ದೇವಸ್ಥಾನದ ಕಚೇರಿ ನೌಕರ. ಮತ್ತೊಬ್ಬ ಧರ್ಮಸ್ಥಳದ ಡಿ ನಂಬರ್ ಹೊಂದಿರುವ ಆಟೋ ಚಾಲಕ.


ತಮ್ಮ ಮಗಳ ಕೊಲೆಯ ಬಗ್ಗೆ ಗ್ರಾಮಸ್ಥರು ಹಾಗೂ ಇನ್ನಿತರ ಮೂಲಗಳಿಂದ ತಿಳಿದುಬಂದ ಮಾಹಿತಿಯನ್ನಾಧರಿಸಿ ಚಂದಪ್ಪಗೌಡ ನೀಡಿದ ದೂರನ್ನು ಆಧರಿಸಿ ಆರೋಪಿತರನ್ನು ಬಂಧಿಸುವುದು ಹಾಗಿರಲಿ, ಅಪರಾಧಿಗಳ ಪತ್ತೆಗೆ ಪೂರಕವಾಗುವಂಥ ಯಾವುದೇ ಕ್ರಮವನ್ನೂ ಪೊಲೀಸರು ಕೈಗೊಂಡಿಲ್ಲ. ಅಷ್ಟು ಮಾತ್ರವಲ್ಲ, ಶವದ ಮಹಜರು ವೇಳೆಯಲ್ಲಿ ಪೊಲೀಸರ ನಡವಳಿಕೆ ಈ ಪ್ರಕರಣದ ದಿಕ್ಕು ತಪ್ಪಿಸುವಂತಿತ್ತು ಎಂಬುದು ಸೌಜನ್ಯಳ ಮಾವ ವಿಠಲಗೌಡರ ಆರೋಪ. ಪ್ರತ್ಯಕ್ಷದರ್ಶಿ ವಿಠಲರ ಪ್ರಕಾರ ಮಹಜರು ನಡೆದ ವೇಳೆ ಪೊಲೀಸರು ಬಂಧಿಸಿರುವ ಸಂತೋಷ್ ಎಂಬ ವ್ಯಕ್ತಿಗೆ ಪೊಲೀಸರೇ ಗೈಡ್ ಮಾಡುತ್ತಿದ್ದರು.

ಅಲ್ಲದೆ ಶವ ದೊರೆತ ಸ್ಥಳ ಮುಖ್ಯರಸ್ತೆಗೆ ಸುಮಾರು 50 ಅಡಿ ದೂರದಲ್ಲಿದ್ದು, ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾ ಕೇಂದ್ರಕ್ಕೆ ಸಮೀಪದಲ್ಲೇ ಇದೆ. ಅಂದು ರಾತ್ರಿ ಭಾರೀ ಮಳೆ ಸುರಿದಿತ್ತು. ಆದರೆ ಶವ ದೊರೆತ ಸ್ಥಳವನ್ನು ಪ್ರತ್ಯಕ್ಷ ಕಂಡ ಬಂಧುಗಳು ಸ್ಪಷ್ಟವಾಗಿ ಹೇಳುತ್ತಿರುವ ಪ್ರಕಾರ ಈ ಸಾಮೂಹಿಕ ಅತ್ಯಾಚಾರ, ಕೊಲೆಯನ್ನು ಬೇರೆಲ್ಲೋ ನಡೆಸಿ ನಂತರದಲ್ಲಿ ಶವವನ್ನು ಇಲ್ಲಿ ಬಿಸಾಡಿದ್ದಾರೆ. ಹಿಂದಿನ ರಾತ್ರಿ ಸುಮಾರು 300 ಜನರ ಗುಂಪು ಆ ಜಾಗವಿಡೀ ಜಾಲಾಡಿದರೂ ಪತ್ತೆಯಾಗದ ಶವ ಮರುದಿನ ಅದೇ ಸ್ಥಳದಲ್ಲಿ ಪತ್ತೆಯಾಗಿದ್ದಾದರೂ ಹೇಗೆ ಎಂಬುದು ಅವರ ಪ್ರಶ್ನೆ.

ಹೀಗೆ ಹಲವಾರು ಸಾಂದರ್ಭಿಕ ಸಾಕ್ಷ್ಯಗಳನ್ನು ಪೊಲೀಸರು ಸರಿಯಾಗಿ ದಾಖಲಿಸಿಲ್ಲ. ಸ್ಥಳೀಯ ಪೊಲೀಸರು ನಿಜವಾದ ಅಪರಾಧಿಗಳನ್ನು ರಕ್ಷಿಸಿ, ಅಮಾಯಕನೊಬ್ಬನ ತಲೆಗೆ ಪ್ರಕರಣ ಕಟ್ಟಿ ಕೈತೊಳೆದುಕೊಳ್ಳುತ್ತಿರುವ ಬಗ್ಗೆ ನಾಡಿನಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಗಿತ್ತು. ದಕ್ಷಿಣ ಕನ್ನಡದಾದ್ಯಂತ ಪ್ರತಿಭಟನೆಯ ಬಿಸಿಯೇರಿದ ಹಿನ್ನೆಲೆಯಲ್ಲಿ ತನ್ನ ಮುಖ ಉಳಿಸಿಕೊಳ್ಳಲು ಅಂದಿನ ಬಿಜೆಪಿ ಸರ್ಕಾರ ಸಿಓಡಿ ತನಿಖೆಗೆ ಆದೇಶಿಸಿತ್ತು. ಧರ್ಮಸ್ಥಳಕ್ಕೆ ಭೇಟಿ ನೀಡಿದ ತನಿಖಾಧಿಕಾರಿಗಳ ಮುಂದೆ ಸೌಜನ್ಯಳ ಬಂಧುಗಳು ತಮ್ಮ ಅಹವಾಲುಗಳನ್ನು ಸಲ್ಲಿಸಿ ಪಾತಕಕೃತ್ಯದಲ್ಲಿ ಭಾಗಿಯಾಗಿರುವ ಅಪರಾಧಿಗಳನ್ನು ಬಂಧಿಸುವಂತೆ ಆಗ್ರಹಿಸಿದರೂ ಎಳ್ಳಷ್ಟೂ ಪ್ರಯೋಜನವಾಗಲಿಲ್ಲ. ಧರ್ಮಸ್ಥಳಕ್ಕೆ ಭೇಟಿ ನೀಡಿದ ಅಂದಿನ ಗೃಹಮಂತ್ರಿ ಅಶೋಕ್ ಗಣ್ಯ ವ್ಯಕ್ತಿಗಳನ್ನು ಭೇಟಿಯಾಗಿ ಮಸಲತ್ತು ನಡೆಸುವುದರಲ್ಲಿ ಮಗ್ನರಾಗಿದ್ದರೇ ಹೊರತು ಕನಿಷ್ಠ ಸೌಜನ್ಯಕ್ಕಾದರೂ ಸೌಜನ್ಯಳ ಕುಟುಂಬದವರನ್ನು ಭೇಟಿಯಾಗುವ 'ಪಾಪ' ಕಾರ್ಯ ಮಾಡಲಿಲ್ಲ.

ಹೀಗೆ ಈ ಪ್ರಕರಣ ಹಳ್ಳ ಹಿಡಿಯುವುದು ಖಚಿತವಾಗುತ್ತಿದ್ದಂತೆ ಸೌಜನ್ಯಳ ಬಂಧುಗಳು ಹಾಗೂ ಸಂಘಸಂಸ್ಥೆಗಳು ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ ಬೇಡಿಕೆಗೆ ಕೆಲವು ಮಠಾಧೀಶರು, ಈ ಹಿಂದೆ ಸಂಘ ಪರಿವಾರದಲ್ಲಿ ಸಕ್ರಿಯವಾಗಿದ್ದ ಮಹೇಶ್ ಶೆಟ್ಟಿಯಂಥವರೂ ದನಿಗೂಡಿಸಿದ್ದಾರೆ. ಹೀಗೆ ಹೋರಾಟದ ಕಾವು ತೀವ್ರಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಈಗಿನ ಕಾಂಗ್ರೆಸ್ ಸರ್ಕಾರ ಇನ್ನು ಹತ್ತು ದಿನಗಳಲ್ಲಿ ತನಿಖಾ ವರದಿ ಸಲ್ಲಿಸುವಂತೆ ಸಿಓಡಿಗೆ ಸೂಚಿಸಿದೆ. ಆದರೆ ಈ ವರದಿಯು ನ್ಯಾಯಸಮ್ಮತವಾಗಿರುತ್ತದೆಯೆಂಬ ವಿಶ್ವಾಸ ಮಾತ್ರ ಯಾರೊಬ್ಬರಿಗೂ ಇಲ್ಲ.

ಸೌಜನ್ಯಳಿಗೆ ನ್ಯಾಯ ಒದಗಿಸಬೇಕೆಂಬ ಕೂಗು ಅಂತರ್‌ಜಾಲದಲ್ಲೂ ವ್ಯಾಪಿಸಿದೆ. ಫೇಸ್‌ಬುಕ್, ಬ್ಲಾಗ್‌ಸ್ಪಾಟ್‌ಗಳಲ್ಲಿ ನಡೆಯುತ್ತಿರುವ 'ಜಸ್ಟೀಸ್ ಫಾರ್ ಕುಮಾರಿ ಸೌಜನ್ಯ' ಎಂಬ ಅಭಿಯಾನದಲ್ಲಿ 23 ಸಾವಿರಕ್ಕೂ ಹೆಚ್ಚು ಮಂದಿ ತಮ್ಮ ದನಿಗೂಡಿಸಿದ್ದಾರೆ. ಈಗಾಗಲೇ ಪೊಲೀಸ್ ಠಾಣೆ, ತಾಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ ಮುಂತಾದೆಡೆ ಹಲವಾರು ಪ್ರತಿಭಟನೆಗಳು, ರ್‍ಯಾಲಿಗಳು ನಡೆದಿವೆ. ಸರ್ಕಾರದ ಸ್ಪಂದನೆ ಮಾತ್ರ ಶೂನ್ಯ.



ಸೌಜನ್ಯಳ ತಂದೆ ಸಿಐಡಿಗೆ ನೀಡಿದ ದೂರು



ಸೌಜನ್ಯಳ ತಾಯಿ ಕುಸುಮಾ

ಹೀಗಾಗಿ ಹೋರಾಟ ನಿರತ ಸಂಘಟನೆಗಳು, ನತದೃಷ್ಟ ಹುಡುಗಿಯ ಹೆತ್ತವರು, ಬಂಧು ಮಿತ್ರರು ಸೌಜನ್ಯಳ ಹುಟ್ಟುಹಬ್ಬವಾದ ಅಕ್ಟೋಬರ್ 18ರಂದು ಬೆಳ್ತಂಗಡಿ ತಾಲೂಕು ಕಚೇರಿಯ ಮುಂದೆ ವಿಭಿನ್ನವಾಗಿ ಆಚರಿಸಲು ನಿರ್ಧರಿಸಿದ್ದಾರೆ. ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ ಕೇಸನ್ನು ಸಿಬಿಐಗೆ ವಹಿಸಬೇಕೆಂದು ಒತ್ತಾಯಿಸಿ 24 ಗಂಟೆಗಳ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ.


ಇಷ್ಟು ಮಾತ್ರವಲ್ಲದೆ, ಈ ಹಿಂದೆ ಮುಚ್ಚಿಹೋಗಿದ್ದ ಅದೆಷ್ಟೋ ಕೇಸುಗಳ ಬಗ್ಗೆ ನೊಂದವರು ದನಿಯೆತ್ತುತ್ತಿದ್ದಾರೆ. 27 ವರ್ಷಗಳ ಹಿಂದೆ ಕಮ್ಯುನಿಸ್ಟ್ ನಾಯಕರೊಬ್ಬರ ಮಗಳು ಪದ್ಮಲತಾಳ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಮತ್ತೊಮ್ಮೆ ಮಾಧ್ಯಮಗಳಲ್ಲಿ ಚರ್ಚೆಯಾಗಿದೆ. ಸ್ಥಳೀಯ ಪ್ರಭಾವಿ ವ್ಯಕ್ತಿಯೊಬ್ಬ ಹಲವು ವರ್ಷಗಳ ಹಿಂದೆ ತಮ್ಮ ಹೆಂಡತಿಯನ್ನು ಅತ್ಯಾಚಾರ ಮಾಡಿ, ಪೆಟ್ರೋಲ್ ಹಾಕಿ ಸುಟ್ಟು ಹಾಕಿದ್ದರೆಂದೂ, ಪೊಲೀಸರು ಈ ಪ್ರಕರಣವನ್ನು ಮುಚ್ಚಿ ಹಾಕಿದ್ದಾರೆಂದೂ ಡಾಕ್ಟರ್ ಹರಳಿ ಎಂಬುವವರು ಆರೋಪಿಸಿದ್ದಾರೆ. ಇದುವರೆಗೂ ಧರ್ಮಸ್ಥಳದಲ್ಲಿ ದಾಖಲಾದ ಅತ್ಯಾಚಾರಗಳ ಹಾಗೂ ಕೊಲೆಗಳ ಸಂಖ್ಯೆ 400ಕ್ಕೂ ಹೆಚ್ಚು! ಹೀಗೆ ಎಲ್ಲಿ ನೋಡಿದರೂ ಮಡುಗಟ್ಟಿದ ಜನರ ಆಕ್ರೋಶ ಕಂಡುಬರುತ್ತಿದೆ.

ಹೀಗೆ ಪ್ರತಿಭಟನೆಯ ಕಾವು ಏರುತ್ತಿರುವುದನ್ನು ಕಂಡು ಇದಕ್ಕೆ ಪ್ರತಿಯಾಗಿ ಮತ್ತೊಂದು ಸಂಘಟನೆಯನ್ನು ಹುಟ್ಟುಹಾಕಲಾಗಿದೆ. ಅದೇ ಬೆಳ್ತಂಗಡಿ ತಾಲೂಕು ಹಿತರಕ್ಷಣಾ ವೇದಿಕೆ. ಆಶ್ಚರ್ಯವೆಂದರೆ ಈ ವೇದಿಕೆಯಲ್ಲಿ ಬಿಜೆಪಿ, ಕಾಂಗ್ರೆಸ್, ಜನತಾದಳ ಪಕ್ಷಗಳ ಸ್ಥಳೀಯ ನಾಯಕರೆಲ್ಲರೂ ಒಗ್ಗೂಡಿದ್ದಾರೆ. ಇವರೆಲ್ಲಾ ಒಟ್ಟುಗೂಡಿದ್ದು ಸೌಜನ್ಯಳ ಪರವಾಗಿ ದನಿಯೆತ್ತಲು ಎಂದು ಯಾರಾದರೂ ಭಾವಿಸಿದರೆ ಅದು ಖಂಡಿತಾ ತಪ್ಪು. ಅವರು ಒಟ್ಟುಗೂಡಿರುವುದು ಧರ್ಮಸ್ಥಳ ಕ್ಷೇತ್ರದ 'ಘನತೆ'ಯನ್ನು ಕಾಪಾಡಲಿಕ್ಕೆಂದು! ಹೀಗೆ ಬೆಳ್ತಂಗಡಿಯಲ್ಲಿ ಜನಸಾಮಾನ್ಯರು ಸೌಜನ್ಯಳ ಪರವಾಗಿ ನಿಂತರೆ ಪಟ್ಟಭದ್ರರು ಪರೋಕ್ಷವಾಗಿ ಅಪರಾಧಿಗಳ ರಕ್ಷಣೆಯ ಕಾರ್ಯದಲ್ಲಿ ತೊಡಗಿದ್ದಾರೆ.

ಇತ್ತೀಚೆಗೆ ಹೊಸದಾಗಿ ನಿಯೋಜಿತಗೊಂಡಿರುವ ಸಿಓಡಿ ತನಿಖಾಧಿಕಾರಿ ಸಿರಿಗೌರಿಯವರು ಬೆಳ್ತಂಗಡಿ ಎಸ್‌ಐ ಯೋಗೀಶ್‌ರನ್ನು ವಿಚಾರಣೆಗೆ ಒಳಪಡಿಸಿದ್ದಾರೆಂಬ ವರದಿ ಬಂದಿದೆ. ಆದರೆ ಎಲ್ಲವೂ ನಿಗೂಢವಾಗಿ ತೆರೆಮರೆಯಲ್ಲೇ ನಡೆಯುತ್ತಿದ್ದು, ಇದರಿಂದ ತಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆಯಂತೂ ನೊಂದವರಿಗಿಲ್ಲ.

ನಿಜವಾದ ಅಪರಾಧಿಗಳನ್ನು ಪತ್ತೆಹಚ್ಚುವ ಕಾಳಜಿ ಸರ್ಕಾರಕ್ಕಿದ್ದರೆ ಸಿಬಿಐ ತನಿಖೆಗೆ ವಹಿಸುವುದೊಂದೇ ಉಳಿದಿರುವ ಮಾರ್ಗ.


■ ದೊಡ್ಡಿಪಾಳ್ಯ ನರಸಿಂಹಮೂರ್ತಿ




ಲೋಕಸಭಾ ಎಲೆಕ್ಷನ್ ಮೇಲೆ ಕಣ್ಣು : ಕಳಸಾ-ಬಂಡೂರಿ ಹೋರಾಟ-ಹಾರಾಟ


ಪ್ರಹ್ಲಾದ ಜೋಷಿ


ಬಸವರಾಜ ಹೊರಟ್ಟಿ


ಪಾಂಡುರಂಗ


ಎಸ್.ಮುನೇನ ಕೊಪ್ಪ

ಕಳಸಾ-ಬಂಡೂರಿ ನಾಲಾ ಜೋಡಣೆ ಎಂಬುದೇ ಅವಿಭಜಿತ ಧಾರವಾಡ ಜಿಲ್ಲೆಯ ರೈತರ ಕನಸಿನ ಕೂಸು. ಅದರೊಟ್ಟಿಗೆ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಜನತೆಯ ನೀರಿನ ದಾಹ ಇಂಗಿಸುವುದು ಆಗಿದೆ. ಶತಮಾನಗಳಷ್ಟೇ ಹಳೇ ಇತಿಹಾಸ ಹೊಂದಿದ ಈ ಯೋಜನೆಯನ್ನು ಮುಂದಿಟ್ಟುಕೊಂಡು ಅಧಿಕಾರಕ್ಕೇರಿದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ರೈತರನ್ನು ಯಾಮಾರಿಸುತ್ತಾ ಬಂದಿವೆ. ಇವ್ರುಗಳು ಒಬ್ಬರಮೇಲೊಬ್ಬರು ಕೆಸರು ಎರಚುತ್ತಾ ಬಂದಿದ್ದಾರೆ. ಪ್ರತಿವರ್ಷ ನವಲಗುಂದ-ನರಗುಂದದಲ್ಲಿ ರೈತರ ಹುತಾತ್ಮ ದಿನಾಚರಣೆ ಸಂದರ್ಭದಲ್ಲಿ ಈ ಯೋಜನೆ ನಾವು ಮಾಡಿಯೇ ಸಿದ್ಧ ಎಂದು ಆಣೆ ಪ್ರಮಾಣ ಮಾಡಿ ಹೋಗುವದು ಸಾಮಾನ್ಯವಾಗಿ ಬಿಟ್ಟಿದೆ. ಈಗ ಒಂದು ಹಂತಕ್ಕೆ ಬಂದಂತೆ ಕಾಣುವ ಯೋಜನೆಯು ಕೇಂದ್ರ ಸರ್ಕಾರದ ಹಾಗೂ ಕೃಷ್ಣಾ ನದಿ ಪ್ರಾಧಿಕಾರದ ಅನುಮತಿಗಾಗಿ ಹೋಗಲಿದೆ.

ಕಾವೇರಿ, ಕೃಷ್ಣಾ ನದಿ ನೀರಿನ ಹಂಚಿಕೆ ಕುರಿತು ಅದೇ ಸಮಯದಲ್ಲಿ ಕಳಸಾ-ಬಂಡೂರಿ ನಾಲಾ ಜೋಡಣೆಯಂತಹ ಸಣ್ಣ ಸಣ್ಣ ವಿಷಯಗಳಲ್ಲಿ ರಾಜಕೀಯದ ವಾಸನೆ ಬಡಿದು ಅವು ಕಗ್ಗಂಟಾಗಿ ಸಾಗಿವೆ. ನಾಲಾ ಜೋಡಣೆಗೆ ಪಕ್ಕದ ರಾಜ್ಯ ಗೋವಾ ಕ್ಯಾತೆ ತೆಗೆಯುತ್ತಲೇ ಇದೆ. ಅದನ್ನೇ ಮುಂದಿಟ್ಟುಕೊಂಡು ರಾಜಕೀಯ ಪಕ್ಷಗಳು ತೇಪೆ ಸಾರಿಸುತ್ತಾ ಸಾಗಿವೆ.

ಕರ್ನಾಟಕದ ದೇವೇಗೌಡರೇ ದೇಶದ ಪ್ರಧಾನಿಯಾಗಿದ್ದಾಗ ಬಗೆಹರಿಸಲು ಪುರುಸೊತ್ತೇ ಸಿಗಲಿಲ್ಲ. ಹುಬ್ಬಳ್ಳಿಯವರೇ ಆದ ದಿ. ಎಸ್.ಬೊಮ್ಮಾಯಿ, ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದರೂ ಕಳಸಾ-ಬಂಡೂರಿ ನಾಲಾಕ್ಕೆ ಮುಕ್ತಿ ಸಿಗಲಿಲ್ಲ, ಬೊಮ್ಮಾಯಿಯವರ ಪುತ್ರನೇ ಆದ ಬಸವರಾಜ ಬೊಮ್ಮಾಯಿ, ಗದಗದ ಎಚ್.ಕೆ ಪಾಟೀಲ್ ನೀರಾವರಿ ಸಚಿವರಾದರೂ ಯಾವುದೇ ಭಾಗ್ಯ ಸಿಗಲಿಲ್ಲ.

ಈ ಯೋಜನೆಯ ಪ್ರದೇಶಗಳಲ್ಲಿ ಆಯ್ಕೆಯಾಗಿ ಮಂತ್ರಿಯಾಗಿದ್ದ ಕೆ.ಎನ್. ಗಡ್ಡಿ (ನವಲಗುಂದ) ಪಾಟೀಲ, (ಬ್ಲೂಫಿಲಂ ಖ್ಯಾತಿಯ ನರಗುಂದ), ಕಳಕಪ್ಪ ಬಂಡಿ, ಬಿ.ಆರ್. ಯಾವಗಲ್ (ನರಗುಂದ) ಹೀಗೆ ದೊಡ್ಡದಂಡೇ ವಿಧಾನಸೌಧದಲ್ಲಿ ಕುಳಿತು ಇವತ್ತು ಮಾಜಿಯಾದವರು (ಬಿ.ಆರ್. ಯಾವಗಲ್ ಹಾಲಿ ಶಾಸಕ, ಮಾಜಿ ಸಚಿವ) ಈಗ ರೈತರ ಎದುರು ಕಳಸಾ-ಬಂಡೂರಿ ನಾಲಾ ಯೋಜನೆಯ ಕನಸನ್ನು ಬಿತ್ತುತ್ತಿದ್ದಾರೆ.

ಇವರೆಲ್ಲರೊಂದಿಗೆ ಕೆಲಸ ಕಳೆದುಕೊಂಡು ನಿವೃತ್ತಿ ಹೊಂದಿದ ಮಾಜಿ ಶಾಸಕರಾದ ಹುಬ್ಬಳ್ಳಿಯ ಅಶೋಕ್ ಕಾಟವೆ, ಕೆಜೆಪಿಯ ಗುಂಪು ಬಿಜೆಪಿಯ ಮಹಾನಗರ ಅಧ್ಯಕ್ಷ ಲಿಂಗರಾಜ ಅಂಗಡಿ, ಮಾಜಿ ಮಹಾಪೌರ ಡಾ. ಪಾಂಡುರಂಗ ಪಾಟೀಲ ಕೆಲ ಬಿಜೆಪಿ ಕಾರ್ಪೋರೇಟರ್‌ಗಳು, ಹಲವು ಸಂಘಟನೆಗಳು, ಸಿಪಿಎಂ ಜೊತೆಗೂಡಿದ್ದರೆ ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನಗರ ಮಗ ವಿಕಾಸ ಸೊಪ್ಪಿನ ರೈತ ಸಂಘದೊಂದಿಗೆ ತಾವೇ ಸೇರಿಕೊಂಡು ಕಳಸಾ-ಬಂಡೂರಿ ಹೋರಾಟ ಸಮನ್ವಯ ಸಮಿತಿ ರಚಿಸಿಕೊಂಡು ಹೋರಾಟಕ್ಕೆ ಇಳಿದದ್ದು. ಹುಬ್ಬಳ್ಳಿ-ಧಾರವಾಡ ಬಾರ್ ಅಸೋಸಿಯೇಷನ್ ಹಾಗೂ ಆಟೋರಿಕ್ಷಾ ಚಾಲಕರ ಸಂಘಟನೆಗಳು, ಕನ್ನಡಪರ ಸಂಘಟನೆಗಳು ಒಂದಾಗಿದ್ದು ಹೋರಾಟಕ್ಕೆ ಬಲ ನೀಡಿತು.



ತೆರೆಮರೆಯಲ್ಲಿ ಹೊರಟ್ಟಿ ಆಟ

ಪಕ್ಷಾತೀತವಾಗಿ ಪ್ರಾರಂಭವಾಗಿದ್ದ ರೈತರ ಹೋರಾಟ ಕಂಡು ನವಲಗುಂದದಿಂದ ಆಯ್ಕೆ ಆದ ಜೆಡಿಎಸ್ ಶಾಸಕ ಎನ್.ಎಚ್. ಕೋನರಡ್ಡಿ ಬಸವರಾಜ ಹೊರಟ್ಟಿಗೆ ದುಂಬಾಲು ಬಿದ್ದ ಎಷ್ಟಾದರೂ ಖಾಸಾ ಶಿಷ್ಯ ಕೋನರೆಡ್ಡಿ ಮಾತಿಗೆ ತಲೆದೂಗಿದ ಹೊರಟ್ಟಿಗೆ ಹೊಳೆದದ್ದೇ ಬೇರೊಂದು ಐಡಿಯಾ. ಹೋರಾಟ ದಿನೇದಿನೇ ಬೆಳೆಯುತ್ತಿದೆ. ಲೋಕಸಭೆಗೆ ಚುನಾವಣೆ ಬೇರೆ ಹತ್ತಿರ ಬರುತ್ತಿದೆ. ತಾನೂ ಏಕೆ ಒಂದು ಬಾರಿ ಛಾನ್ಸ್ ಪಡೆಯಬಾರದು. ಈಗಾಗಲೇ ಎರಡು ಬಾರಿ ಬಿಜೆಪಿಯಿಂದ ಲೋಕಸಭೆಗೆ ಆಯ್ಕೆಯಾಗಿರುವ ಪ್ರಹ್ಲಾದ ಜೋಶಿಯ ಹೆಸರು ಜಿಮಾಖಾನ ಮೈದಾನ ವಿವಾದದಲ್ಲಿ ಹೆಸರು ಕೆಟ್ಟುಹೋಗಿದೆ. ಹೊರಟ್ಟಿ ಐದು ಬಾರಿ ಎಂಎಲ್‌ಸಿಯಾಗಿ ಮಂತ್ರಿಯಾಗಿ ರಾಜ್ಯದ ರಾಜಕಾರಣದ ಫಲ ಉಂಡು ಆಗಿದೆ. ಈಗಾಗಲೇ ಅವರ ಮಗನಾದ ವಸಂತ ಹೊರಟ್ಟಿ ತನ್ನ ಕ್ಷೇತ್ರಕ್ಕೆ ಎಂಟ್ರಿ ಕೊಡಿಸಿದ್ದಾರೆ.


ಇನ್ನುಳಿದ ಅವಧಿಯನ್ನು ದೆಹಲಿ ರಾಜಕಾರಣದಲ್ಲಿ ಕಳೆಯಬೇಕೆನ್ನುವದು ಹೊರಟ್ಟಿ ಪ್ಲಾನ್. ದೆಹಲಿ ಕೆಂಪುಕೋಟೆ ಎನ್‌ಡಿಎ ವಶವಾಗುತ್ತೆ ದೇವೇಗೌಡರನ್ನು ಹಿಡಿದುಕೊಂಡು ಕೇಂದ್ರ ಸಚಿವನಾಗುವ ಕನಸು ಕಾಣುತ್ತಿರುವ ಸಂದರ್ಭದಲ್ಲಿ ಕಳಸಾ-ಬಂಡೂರಿ ನಾಲಾ ಹೋರಾಟ ಶುರುವಾಗಿದ್ದನ್ನು ತಾನು ಹೈಜಾಕ್ ಮಾಡುವ ತಂತ್ರಗಾರಿಕೆಗೆ ಶಾಸಕ ಹಾಗೂ ಶಿಷ್ಯ ಕೋನರೆಡ್ಡಿಯ ಸಲಹೆ ಸಹ್ಯವಾಯಿತು.

ಜಿಲ್ಲಾ, ತಾಲ್ಲೂಕ್, ಮಹಾನಗರಗಳ ಪಕ್ಷಗಳ ಪದಾಧಿಕಾರಿಗಳ ಸಭೆ ಹಗಲು ರಾತ್ರಿ ಪ್ರಾರಂಭವಾದವು. ಅಲ್ಲಿ ಬಸವರಾಜ ಹೊರಟ್ಟಿ ಎಲ್ಲರೂ ಈ ಹೋರಾಟ ಬೆಂಬಲಿಸಿ ಭಾಗವಹಿಸಬೇಕೆನ್ನುವ ಫರ್ಮಾನು ಹೊರಡಿಸಿದರು. ಅಲ್ಲಿಗೆ ಹೋರಾಟವನ್ನು ಹೊರಟ್ಟಿ ಹೈಜಾಕ್ ಮಾಡಿಬಿಟ್ಟರು.

ಪಾಪ ರಾಮದುರ್ಗದಿಂದ ವಿಧಾನಸಭೆಗೆ ಚುನಾವಣೆಯಲ್ಲಿ ಸ್ಪರ್ಧಿಸಿ ಒಮ್ಮೆಯಾದರೂ ಎಂಎಲ್‌ಎ ಆಗುವ ಕನಸು ಕಾಣುತ್ತಿರುವ ಪಾಲಿಕೆಯ ಮಾಜಿ ಮೇಯರ್, ಬಸು ಬೊಮ್ಮಾಯಿ ಶಿಷ್ಯ ಡಾ. ಪಾಂಡುರಂಗ ಪಾಟೀಲ ಹೋರಾಟದ ಮುಂಚೂಣಿಗೆ ಇಳಿದಿದ್ದು ಜೋಶಿ ಹಾಗೂ ಶೆಟ್ಟರ್‌ಗೇ ಕೋಪ ತರಿಸಿದೆ. 'ಬಂದ್'ನಲ್ಲಿ ಅವರ್‍ಯಾರು ಪಾಲ್ಗೊಳ್ಳದೇ ಪ್ರತ್ಯೇಕವಾಗಿ ಮಾಜಿ ನವಲಗುಂದದ ಶಾಸಕ ಹಾಗೂ ಸಂಸದೀಯ ಕಾರ್ಯದರ್ಶಿಯಾಗಿದ್ದ ಶಂಕರ ಪಾಟೀಲು ಮುನೇನ ಕೊಪ್ಪ ಏರ್ಪಡಿಸಿದ್ದ ನಾಲಾ ವೀಕ್ಷಣಾ ಕಾರ್ಯಕ್ರಮಕ್ಕೆ ತೆರಳಿ ತಾವು ರೈತರ ಪರವಾಗಿದ್ದೇವೆ ಎಂದು ಸಾಬೀತುಪಡಿಸಲು ಪರದಾಡಿದರು.

ಒಟ್ಟಿನಲ್ಲಿ ಕಳಸ ಬಂಡೂರಿ ನಾಲೆ ವಿಚಾರವು ಈಗ ರಾಜಕೀಯ ಪಕ್ಷಗಳ ಲೋಕಸಭಾ ಚುನಾವಣಾ ತಯಾರಿಯ ಭಾಗವಾಗಿ ರೂಪಾಂತರ ಹೊಂದುತ್ತಿದೆ.

■ ಹುಬ್ಬಳ್ಳಿಯಾವ್



10 ◂◂

ಎಜುಕೇಷನಲ್ ಟ್ರಸ್ಟ್ ಮತ್ತು ಸಿದ್ಧವನ ಗುರುಕುಲಕ್ಕೆ ನೀಡಲಾಗಿದೆ. ಇದು ಊಹಾಪೋಹವಲ್ಲ; ಸುಳ್ಳು ಆರೋಪವಲ್ಲ. ಮಾಹಿತಿಹಕ್ಕು ಕಾಯ್ದೆ ಪ್ರಕಾರ ಪಡೆದುಕೊಂಡಿರುವ ದಾಖಲೆಗಳಲ್ಲಿ ಈ ಎಲ್ಲ ವಿವರಗಳು ಸ್ಪಷ್ಟವಾಗಿ ನಮೂದಾಗಿವೆ.

ಒಂದುವೇಳೆ 'ಬೇರೆ ವಿಧಿಯಿಲ್ಲದೆ', 'ಅನಿವಾರ್ಯವಾಗಿ' ಈ ಡಿ.ಸಿ.ಮನ್ನಾ ಭೂಮಿಯನ್ನು ಬಳಕೆ ಮಾಡಿಕೊಳ್ಳಲಾಗಿದೆ ಎಂದಿಟ್ಟುಕೊಂಡರೂ, ಇದಕ್ಕೆ ಬದಲಿಯಾಗಿ ಅಷ್ಟೇ ಭೂಮಿಯನ್ನು ಮೀಸಲು ಇಟ್ಟಿರುವುದಕ್ಕೆ (ಕಾಲಂ.12ರಲ್ಲಿ) ಯಾವುದೇ ಪುರಾವೆ ಲಭ್ಯವಿಲ್ಲ, ಇದು ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಬಗ್ಗೆ ಪದೇ ಪದೇ ವಿವಿಧ ದಲಿತಸಂಘಟನೆಗಳು, ನಾಗರಿಕ ಸೇವಾ ಟ್ರಸ್ಟ್ ಮುಂತಾದವರು ಒತ್ತಾಯಿಸುತ್ತಾ ಬಂದರೂ ಕಂದಾಯ ಇಲಾಖಾಧಿಕಾರಿಗಳು ಯಾವುದೇ ಕ್ರಮಕೈಗೊಳ್ಳದಿರಲು ಕಾರಣವೇನು? ಪ್ರಭಾವಿ ವ್ಯಕ್ತಿಗಳಿಗೆ ಒಂದು ಕಾನೂನು, ಸಾಮಾನ್ಯ ಜನತೆಗೆ ಮತ್ತೊಂದು ಕಾನೂನು ಎಂಬ ನೀತಿಯನ್ನು ಅಧಿಕಾರಿಗಳು ಅನುಸರಿಸುತ್ತಿದ್ದಾರೆಯೆ?

ಅಲ್ಲಿರುವ ಕಾಲೇಜು, ಸಿದ್ಧವನ ಮುಂದುವರಿಯಬೇಕೆಂಬುದೇನೋ ಸರಿ. ಆದರೆ ದಲಿತವರ್ಗದವರಿಗೆ ಸೇರಬೇಕಾದ ಭೂಮಿಯಿಂದ ಅವರನ್ನು ವಂಚಿಸುವುದು ಯಾವ ಧರ್ಮ? ಸರ್ಕಾರ ಈ ಕೂಡಲೇ ಕ್ರಮ ಕೈಗೊಂಡು ಪರ್ಯಾಯ ಭೂಮಿಯನ್ನು ಒದಗಿಸಲು ಮುಂದಾಗಬೇಕು.

ಮಾಹಿತಿ ಹಕ್ಕನ್ನು ಚಲಾಯಿಸಿ ಗಳಿಸಿಕೊಂಡ ದಾಖಲೆಗಳು ಮತ್ತೊಂದು ಅಂಶವನ್ನು ನಮ್ಮ ಮುಂದೆ ತೆರೆದಿಡುತ್ತವೆ. ಬೆಳ್ತಂಗಡಿ ತಾಲೂಕಿನ ವಿವಿಧ ಗ್ರಾಮಗಳ ಡಿ.ಸಿ ಮನ್ನಾ ಜಮೀನಿನ ವಿವರಗಳ ಪಟ್ಟಿಯಲ್ಲಿ ಕೊಯ್ಯೂರು ಎಂಬ ಗ್ರಾಮದಲ್ಲಿ 0.35 ಸೆಂಟ್ ಭೂಮಿ ಮಾತ್ರ ಕೊರಗರಿಗೆ ಪ್ರಸ್ತಾವನೆ ಎಂದೂ, ಕಲ್ಮಂಜ ಎಂಬ ಊರಿನಲ್ಲಿ ನಾಲ್ಕುವರೆ ಎಕರೆ ಮತ್ತು 2-40 ಎಕರೆ ಭೂಮಿ- ಹೀಗೆ ಒಟ್ಟು 6ರಿಂದ 7 ಎಕರೆಯಷ್ಟು ಭೂಮಿ ಮಾತ್ರ ಕೊರಗ ಜನಾಂಗ ಪ.ಜಾ. ದರ್ಖಾಸ್ತು ಪ್ರಸ್ತಾವನೆ ಎಂದು ನಮೂದಾಗಿರುವುದನ್ನು ಬಿಟ್ಟರೆ ದಲಿತರಿಗೆ ಭೂಮಿ ಹಂಚಿಕೆ ಮಾಡಿದ ಪುರಾವೆಗಳು ಅದರಲ್ಲಿ ಲಭ್ಯವಿಲ್ಲ, ಆದರೆ ಅದೇ ಪುಟಗಳಲ್ಲಿ ವಿವಿಧ ಸಂಸ್ಥೆಗಳಿಗೆ ನೂರಾರು ಎಕರೆ ನೀಡಲಾಗಿದೆ.

ಇದೇ ಜುಲೈ 18ರಂದು ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ ನಾಯಕ್ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿರುವ ಮತ್ತೊಂದು ಅಂಶ ಕೂಡ ಬಹಳ ಮಹತ್ವವುಳ್ಳದ್ದು. 'ಉಜಿರೆ ಗ್ರಾಮದಲ್ಲಿ ಡಿ.ಸಿ.ಮನ್ನಾ ಭೂಮಿಯನ್ನು ಕಲಂ ನಂಬ್ರ 4ರಲ್ಲಿ ಕಾಣಿಸಿದಂತೆ ಸಾರ್ವಜನಿಕ ಉದ್ದೇಶಕ್ಕಾಗಿ, ಸರಕಾರಿ ಕಚೇರಿಗಳಿಗೆ, ಶಾಲೆಗಳಿಗೆ 53.33 ಎಕ್ರೆ ಜಮೀನನ್ನು ಕಾದಿರಿಸಲಾಗಿದ್ದು, ಇದನ್ನು ಕಾಲಂ ನಂಬ್ರ 14ರಲ್ಲಿ ಕಾಣಿಸಿದಂತೆ ಎಸ್‌ಡಿಎಂ ಎಜುಕೇಷನ್ ಟ್ರಸ್ಟ್ ಮತ್ತು ಸಿದ್ಧವನ ಗುರುಕುಲಕ್ಕೆ ಮಂಜೂರು ಮಾಡಲಾಗಿದೆ.' ಅಂದರೆ ಸಾರ್ವಜನಿಕ ಉದ್ದೇಶಕ್ಕೆ, ಸರ್ಕಾರಿ ಶಾಲೆಗಳಿಗೆ ಮೀಸಲಾಗಿದ್ದ ಜಮೀನನ್ನು ಖಾಸಗಿ ಸಂಸ್ಥೆಗೆ ನೀಡಲಾಗಿದೆ ಎಂದರ್ಥ. ದಲಿತ ಸಂಘರ್ಷ ಸಮಿತಿಯ ಸಂಚಾಲಕ ಆರ್.ಸಂಜೀವ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದುಕೊಂಡ ದಾಖಲಾತಿಗಳಲ್ಲಿ ಈ ವಿವರಗಳು ಸ್ಪಷ್ಟವಾಗಿ ನಮೂದಾಗಿವೆ.

ಜಿಲ್ಲಾಧಿಕಾರಿ ನೇತೃತ್ವದಲ್ಲಿ ರಚಿಸಲಾಗಿರುವ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ನಾಗರಿಕ ಸೇವಾಟ್ರಸ್ಟ್ ಕೂಡ ಒಂದು ಸದಸ್ಯ ಸಂಘಟನೆ. 2009ರಿಂದ ಇದುವರೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಹಲವು ಸಭೆಗಳಲ್ಲಿ ಈ ಅಕ್ರಮದ ಬಗ್ಗೆ ನಾಗರಿಕ ಸೇವಾ ಟ್ರಸ್ಟ್‌ನ ಸದಸ್ಯರು ಪ್ರಶ್ನೆಯೆತ್ತಿದ್ದಾರೆ. ತಹಸೀಲ್ದಾರ್ ಮತ್ತು ಉಪವಿಭಾಗಾಧಿಕಾರಿಗಳು ತನಿಖೆ ನಡೆಸಿ ವರದಿ ಕೊಡಲು ಆಗ್ರಹಿಸಿದ್ದಾರೆ. ಈ ವಿಷಯ ನಡಾವಳಿಯಲ್ಲೂ ದಾಖಲಾಗಿದೆ. ಆದರೂ ಇದುವರೆಗೆ ಯಾವುದೇ ಅಧಿಕಾರಿಯಿಂದಲೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲವೆಂದರೆ ಇದಕ್ಕೆ ಏನು ಹೇಳಬೇಕು?

ಖಾಸಗಿ ಆಡಳಿತದಲ್ಲಿರುವ ಅತ್ಯಂತ ಶ್ರೀಮಂತ ಸಾರ್ವಜನಿಕ ದೇವಸ್ಥಾನದ ಒಡೆಯರಾದ ಹೆಗ್ಗಡೆಯವರು ಡಿ.ಸಿ.ಮನ್ನಾ ಭೂಮಿಯನ್ನು ಅಕ್ರಮವಾಗಿ ಪಡೆದಿರುವುದು ಅವರಿಗೆ ಶೋಭೆಯಲ್ಲ, ಧರ್ಮಾಧಿಕಾರಿ ಎನಿಸಿಕೊಂಡವರು ಪರ್ಯಾಯ ಭೂಮಿಯನ್ನು ನೀಡಲು ಮುಂದಾಗುವುದು ಕಾನೂನನ್ನು ಗೌರವಿಸುವ ದೃಷ್ಟಿಯಿಂದ ಮಾತ್ರವಲ್ಲದೆ, ಧಾರ್ಮಿಕ ಸಂಸ್ಥೆಯ ಮುಖ್ಯಸ್ಥರಾಗಿ ದಲಿತರಿಗೆ ಸಲ್ಲಬೇಕಾದ ಭೂಮಿಯನ್ನು ಕೊಡುವುದು ಅವರ ನೈತಿಕ ಹೊಣೆ ಕೂಡಾ ಆಗಿರುತ್ತದೆ ಎಂಬ ಜ್ಞಾನವನ್ನು ಮಂಜುನಾಥಸ್ವಾಮಿ ಅವರಿಗೆ ಕರುಣಿಸಲಿ ಎಂಬುದಷ್ಟೆ ಭಕ್ತಾದಿಗಳ ಆಗ್ರಹ.

ಲೀಸ್ ವ್ಯವಹಾರ

ಡಿ.ಸಿ.ಮನ್ನಾ ಭೂಮಿಯ ಕತೆ ಹೀಗಾದರೆ ಸರ್ಕಾರಿ ಭೂಮಿಯನ್ನು ಲೀಸ್ ಪಡೆದುಕೊಂಡ ಪ್ರಕರಣ ಮತ್ತಷ್ಟು ಕುತೂಹಲಕಾರಿಯಾಗಿದೆ.

ಉಜಿರೆ ಗ್ರಾಮದ ಮುಖ್ಯರಸ್ತೆಯ ಆಸುಪಾಸಿನಲ್ಲಿದ್ದ ಸರಕಾರಿ ಭೂಮಿಯನ್ನು ಶ್ರೀ ಧರ್ಮಸ್ಥಳ ಎಜುಕೇಷನ್ ಟ್ರಸ್ಟ್‌ಗೆ ಲೀಸ್ ನೀಡಲಾಗಿದೆ. ಈ ಲೀಸ್ ವ್ಯವಹಾರದಲ್ಲೂ ಕಾನೂನನ್ನು ಗಾಳಿಗೆ ತೂರಿರುವುದು ಕಂಡುಬರುತ್ತದೆ. ಇದು ಬರೋಬ್ಬರಿ 42.05 ಎಕರೆಗೆ ಸಂಬಂಧಿಸಿದ ವ್ಯವಹಾರ. ಮುಖ್ಯರಸ್ತೆಯ ಎರಡೂ ಬದಿಯಲ್ಲಿದ್ದ ವಿವಿಧ ಸರ್ವೆ ನಂಬರ್‌ಗಳ ಒಟ್ಟು 42.05 ಎಕರೆ ಭೂಮಿಯನ್ನು 1970ರಲ್ಲಿ ಒಂದು ಎಕರೆಗೆ ವಾರ್ಷಿಕ ರೂ.420/-ರಂತೆ 30 ವರ್ಷಗಳ ಲೀಸ್‌ಗೆ ನೀಡಲಾಗಿತ್ತು, ಈ ಲೀಸ್ ಅವಧಿ 2000ಕ್ಕೆ ಮುಕ್ತಾಯವಾಯಿತಾದರೂ ಈ ಪ್ರಭಾವಿ ಸಂಸ್ಥೆಯ ಹಿಡಿತದಲ್ಲೇ ಆ ಭೂಮಿ ಉಳಿದಿತ್ತು,

ಇದೀಗ 1-4-2008ರಂದು ದ.ಕ. ಜಿಲ್ಲಾಧಿಕಾರಿಗಳು ಸೆಪ್ಟೆಂಬರ್ 2000ರಿಂದ ಪೂರ್ವಾನ್ವಯಗೊಳಿಸಿ ಎಕರೆಗೆ ವಾರ್ಷಿಕ ರೂ.9500/- ಪ್ರಕಾರ ಮತ್ತೆ 30 ವರ್ಷಗಳ ಅವಧಿ ಲೀಸ್‌ಗೆ ನೀಡಿದ್ದಾರೆ. ಸುಮಾರು ಎಂಟು ವರ್ಷಗಳ ಕಾಲ ಕಾನೂನು ಸಮ್ಮತಿಗೆ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ತೋರಿದ್ದು ಒಂದುಕಡೆಯಾದರೆ, ಮತ್ತೊಂದುಕಡೆ ಮಾರುಕಟ್ಟೆ ಮೌಲ್ಯಕ್ಕಿಂತ ಅತಿ ಕಡಿಮೆ ಮೊತ್ತಕ್ಕೆ ಲೀಸ್ ಕೊಡುವುದರ ಮೂಲಕ ಸರಕಾರದ ಬೊಕ್ಕಸಕ್ಕೆ ಭಾರೀ ನಷ್ಟ ಮಾಡಲಾಗಿದೆ. ಅಷ್ಟು ಮಾತ್ರವಲ್ಲ; ಲೀಸ್ ನವೀಕರಣ ಮಾಡುವಾಗ ಸಂಸ್ಥೆಯನ್ನು ಬದಲಾಯಿಸಲಾಗಿದೆ. ಇದು ಕಾನೂನಿನ ಉಲ್ಲಂಘನೆಯಾಗಿದ್ದು ಈ ಆದೇಶ ರದ್ದುಪಡಿಸಬೇಕೆಂದು ಆಗ್ರಹಿಸುತ್ತಿರುವ ಮಾತಿಗೆ ಮನ್ನಣೆ ನೀಡಿ ಈ ಬಗ್ಗೆ ಸಮಗ್ರ ತನಿಖೆಗೆ ಸರ್ಕಾರ ಮುಂದಾಗಬೇಕು. ಹೀಗೆ ಕಾನೂನು ಉಲ್ಲಂಘನೆ ಮಾಡಿರುವ ಅಧಿಕಾರಿಗಳು ಹಾಗೂ ವ್ಯಕ್ತಿಗಳು ಎಷ್ಟೇ ದೊಡ್ಡವರಿದ್ದರೂ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಇಚ್ಛಾಶಕ್ತಿ ಈ ಸರ್ಕಾರಕ್ಕಿದೆಯೆ ಎಂಬುದೇ ಇಂದಿನ ಪ್ರಶ್ನೆ.

■ ದೊಡ್ಡಿಪಾಳ್ಯ ನರಸಿಂಹಮೂರ್ತಿ

'ಅಖಂಡ ಆಂಧ್ರ'ದ ಹಕೀಕತ್ತು

ಇದು ಬಿಸಿನೆಸ್ ಪೊಲಿಟಿಕ್ಸ್!

ತೆಲಂಗಾಣವು ದೇಶದ 29ನೇ ಹೊಸ ರಾಜ್ಯವಾಗಿ ಉದಯಿಸುವುದು ಬಹುತೇಕ ಖಚಿತ. ಮುಂಬರುವ ಚಳಿಗಾಲ ಅಧಿವೇಶನದಲ್ಲಿ ಸಂಸತ್ತಿನ ಅಂಗೀಕಾರದ ಮುದ್ರೆ ಬೀಳುವುದೊಂದೇ ಬಾಕಿ. ಇದು ಖಾತ್ರಿಯಾಗುತ್ತಿದ್ದಂತೆಯೇ 'ಅಖಂಡ ಆಂಧ್ರ'ಕ್ಕಾಗಿ ಸೀಮಾಂಧ್ರ ಹೊತ್ತಿ ಉರಿಯಲು ಆರಂಭಿಸಿದೆ. ಜನರ ಪ್ರತಿಭಟನೆ, ಆಕ್ರೋಶ ವಿಪರೀತ ಕಾವು ಪಡೆದುಕೊಳ್ಳುತ್ತಿದೆ. ಸೀಮಾಂಧ್ರದ ರಾಜಕಾರಣಿಗಳಂತು ತಮ್ಮ ಕೇಂದ್ರ ಸಚಿವ ಸ್ಥಾನಕ್ಕೆ, ಎಂ.ಪಿ. ಸದಸ್ಯತ್ವಕ್ಕೆ ರಾಜೀನಾಮೆ ಗೀಚಿದ್ದರೆ ವೈಎಸ್‌ಆರ್ ಕಾಂಗ್ರೆಸ್‌ನ ಜೈಲುಹಕ್ಕಿ ಜಗನ್ ಮತ್ತು ಟಿಡಿಪಿಯ ಚಂದ್ರಬಾಬುನಾಯ್ಡು ಮೊದಲಾದವರು ಉಪವಾಸ ಕೂತು ಆಂಧ್ರ ವಿಭಜನೆಗೆ ಧಿಕ್ಕಾರ ಕೂಗುತ್ತಿದ್ದಾರೆ. ಸಾಮಾನ್ಯ ಜನರ 'ಅಖಂಡ ಆಂಧ್ರ'ದ ಹೋರಾಟಕ್ಕೆ ಭಾಷಾಭಿಮಾನವೋ, ತಾಯ್ನೆಲದ ಸಾರ್ವಭೌಮತೆಯ ಸ್ವಾಭಿಮಾನವೊ ಕಾರಣವಿರಬಹುದು. ಹಾಗಾಗಿ ಆ ಜನರ ಆಕ್ರೋಶಕ್ಕೆ ಒಂದು ಅರ್ಥವಿದೆ. ಆದರೆ ರಾಜಕಾರಣಿಗಳ ಅಖಂಡತೆ ಅರಚಾಟದ ಹಿಂದಿರುವ ಅಸಲಿಯತ್ತೇ ಬೇರೆ. ಸಾವಿರಾರು ಕೋಟಿ ರೂಪಾಯಿ ಹೂಡಿ ತೆಲಂಗಾಣ ಪ್ರಾಂತ್ಯದಲ್ಲಿ ಆರಂಭಿಸಿರುವ ಬಿಸಿನೆಸ್‌ಗಳು ಅತಂತ್ರವಾಗಿಬಿಡುತ್ತವೆಂಬ ಸ್ವಹಿತಾಸಕ್ತಿಯ ಹೊರತಾಗಿ ಮತ್ತಾವ ಕಾಳಜಿಯೂ ಅವರಿಗಿಲ್ಲ. ಅದಕ್ಕಾಗೇ ಅಭಿಮಾನದ ಹೆಸರಲ್ಲಿ ಜನರನ್ನು ಹೋರಾಟಕ್ಕೆ ಪ್ರಚೋದಿಸಿ ತಮ್ಮ ವ್ಯವಹಾರಗಳನ್ನು ಸೇಫ್ ಮಾಡಿಕೊಳ್ಳುವ ಹುನ್ನಾರ ಅವರದ್ದು. ತೆಲಂಗಾಣ ರಚನೆಯನ್ನು ವಿರೋಧಿಸುತ್ತಿರುವ ಪ್ರಮುಖ ಪೊಲಿಟಿಷಿಯನ್‌ಗಳ ನೈಜ ಆಂಧ್ರಾಭಿಮಾನ ಹೀಗಿದೆ.

ವೈ.ಎಸ್.ಆರ್ ಕಾಂಗ್ರೆಸ್‌ನ ಜಗನ್‌ಮೋಹನ್ ರೆಡ್ಡಿ ಆಂಧ್ರ ವಿಭಜನೆಯನ್ನು ವಿರೋಧಿಸುತ್ತಿರುವುದಕ್ಕೆ ಅವರ ತಂದೆ ರಾಜಶೇಖರ್ ರೆಡ್ಡಿ ಕಾಲದಲ್ಲಾದ ಪ್ರಾಜೆಕ್ಟ್‌ಗಳೇ ಪ್ರಮುಖ ಕಾರಣ. ವೈ.ಎಸ್.ರಾಜಶೇಖರ್ ರೆಡ್ಡಿ ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಕುಟುಂಬಕ್ಕೆ ಮತ್ತು ವ್ಯವಹಾರ ಆಪ್ತೇಷ್ಟರಿಗೆ ಎಸ್.ಇ.ಝಡ್ ನೆಪದಲ್ಲಿ ತೆಲಂಗಾಣದ ಸಾವಿರಾರು ಎಕರೆ ಜಮೀನುಗಳನ್ನು ಧಾರೆ ಎರೆದು ಕೊಟ್ಟಿದ್ದರು. ಅವರೆಲ್ಲಾ ಅಲ್ಲಿ ಸಾವಿರಾರು ಕೋಟಿಗಳನ್ನು ಹೂಡಿ ಯೋಜನೆಗಳನ್ನು ಆರಂಭಿಸುವ ಹಂತದಲ್ಲಿದ್ದಾರೆ. ಉದಾಹರಣೆಗೆ, ಅಯೋಧ್ಯ ರಾಮಿರೆಡ್ಡಿ ಒಡೆತನವಿರುವ ರಾಮ್ಕಿ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆಗೆ ನೀರಾವರಿ ಪ್ರಾಜೆಕ್ಟ್‌ಗಳ ನೆಪದಲ್ಲಿ ನೂರಾರು ಎಕರೆ ಜಾಗವನ್ನು ನೀಡಲಾಗಿದೆ. ತೆಲಂಗಾಣದ ಅದಿಲಾಬಾದ್ ಜಿಲ್ಲೆಯಲ್ಲಿ





299 ಕೋಟಿಯ ಪ್ರಾಣಹಿತ-ಚೆವೆಲ್ಲಾ ಸುಜಲಾ ಪ್ರಾಜೆಕ್ಟ್ ಮತ್ತು ಬಹುಪಾಲುದಾರಿಕೆಯ 2536 ಕೋಟಿ ಮೊತ್ತದ ಜ್ಯೋತಿರಾವ್‌ಫುಲೆ ದುಮ್ಮುದ್‌ಗುಡೆನ್- ನಾಗಾರ್ಜುನ ಸಾಗರ್ ಪ್ರಾಜೆಕ್ಟ್‌ಗಳಲ್ಲಿ ಈ ರಾಮಿರೆಡ್ಡಿ ಕಾಸು ಹಾಕಿದ್ದಾನೆ. ಈ ಯೋಜನೆಗಳೆಲ್ಲ ವೈ.ಎಸ್.ಆರ್ ಅವಧಿಯಲ್ಲಿ ಅನುಷ್ಠಾನಕ್ಕೆ ಬಂದಂತವು. ಅಂದಹಾಗೆ ಈ ಅಯೋಧ್ಯ ರಾಮಿರೆಡ್ಡಿ, ಜಗನ್‌ನ ಜಗತಿ ಕಂಪನಿಯ ಬಹುಮುಖ್ಯ ಪಾಲುದಾರರಲ್ಲಿ ಒಬ್ಬ. ಇಂತಹ ಹಲವಾರು ಉದ್ಯಮಿಗಳಲ್ಲದೆ ಸ್ವತಃ ಜಗನ್‌ದೇ ನೂರಾರು ಕೋಟಿ ಉದ್ಯಮ ತೆಲಂಗಾಣ ಮತ್ತು ಸೀಮಾಂಧ್ರದ ನಡುವೆ ಇಬ್ಭಾಗವಾಗಲಿದೆ.

ಮತ್ತೊಂದು ಸ್ವಾರಸ್ಯಕರ ಸಂಗತಿ ಎಂದರೆ ಆಂಧ್ರ ಇಬ್ಭಾಗವನ್ನು ಪ್ರತಿಭಟಿಸಿ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಜವಳಿ ಸಚಿವ, ಸೀಮಾಂಧ್ರ ಭಾಗದ ಕಾಂಗ್ರೆಸ್ ಸಂಸದ ಕಾವುರು ಸಾಂಬಶಿವರಾವ್ ಸಹ 2536 ಕೋಟಿ ವೆಚ್ಚದ ಬಹುಪಾಲುದಾರರಲ್ಲಿ ಒಬ್ಬನಾಗಿರುವುದು.

ತೆಲಂಗಾಣ ರಚನೆಯನ್ನು ವಿರೋಧಿಸುತ್ತಿರುವ ಮತ್ತೊಬ್ಬ ಕಾಂಗ್ರೆಸ್ ಸಂಸದ ಟಿ.ಸುಬ್ಬಿರಾಮಿ ರೆಡ್ಡಿ ತನ್ನ ಹೆಂಡತಿ ಇಂದಿರಾರೆಡ್ಡಿಯ ಒಡೆತನದಲ್ಲಿ ನಡೆಸುತ್ತಿರುವ ಗಾಯತ್ರಿ ಗ್ರೂಪ್ ಆಫ್ ಕಂಪನೀಸ್ ಏನಿಲ್ಲವೆಂದರೂ 2453 ಕೋಟಿ ರೂಪಾಯಿಯನ್ನು ತೆಲಂಗಾಣದ ನೆಲದಲ್ಲಿ ಹೂಡಿಕೆ ಮಾಡಿದೆ. ಅದರಲ್ಲಿ ಜ್ಯೋತಿರಾವ್ ಫುಲೆ-ನಾಗಾರ್ಜುನ ಸುಜಲ ಪ್ರಾಜೆಕ್ಟ್ ಕೂಡಾ ಒಂದು. ಸುಬ್ಬಿರಾಮಿಯ ಕಂಪನಿ ಅದಾಗಲೇ ಈ ಪ್ರಾಜೆಕ್ಟ್‌ನ ಪ್ಯಾಕೇಜ್ 8 ಮತ್ತು ಪ್ಯಾಕೇಜ್ 9ರ ಅಡಿಯಲ್ಲಿ 95.50 ಕೋಟಿ ರೂ. ಖರ್ಚು ಮಾಡಿದೆ. ಅಂದಹಾಗೆ ಈ ಪ್ರಾಜೆಕ್ಟ್‌ನಡಿ ಸುಬ್ಬಿರಾಮಿ ರೆಡ್ಡಿಯ ಕಂಪನಿಗೆ ಸರ್ಕಾರದಿಂದ ಅಲಾಟ್ ಆಗಿರುವ ಒಟ್ಟು ಮೊತ್ತ 1950 ಕೋಟಿ! ತೆಲಂಗಾಣ ಭಾಗದ ಮತ್ತೊಂದು ಪ್ರಾಜೆಕ್ಟ್ ಆದ ರಾಜೀವ್ ಸಾಗರ [illegible] ಯೋಜನೆಗೆ ಸುಬ್ಬಿರಾಮಿ ರೆಡ್ಡಿಯ ಗಾಯತ್ರಿ ಕಂಪನಿ 281 ಕೋಟಿ ರೂಪಾಯಿ ಸುರಿದಿದೆ.

ಇನ್ನು ರಾಜೀನಾಮೆ ನೀಡಿದ ಮತ್ತೊಬ್ಬ ಕಾಂಗ್ರೆಸ್ ಸಂಸದ ಕೊಮತ್ತಿ ರಾಜಗೋಪಾಲ ರೆಡ್ಡಿ ಕುಟುಂಬದ ಸುಶೀ ಗ್ರೂಪ್ ತೆಲಂಗಾಣದ ಮೂರು ಬೇರೆ ಬೇರೆ ಉದ್ಯಮಗಳಲ್ಲಿ ಹೂಡಿರುವುದು 2618 ಕೋಟಿ ರೂಪಾಯಿ ಬೃಹತ್ ಮೊತ್ತವನ್ನು. ಪ್ರಾಣಹಿತ-ಚವೆಲ್ಲಾ ಸಂಪರ್ಕ ಶ್ರಾವಂತಿ ನೀರಾವರಿ ಯೋಜನೆಯ ಪ್ಯಾಕೇಜ್ 4 ಮತ್ತು 27 ರ ಅಡಿಯಲ್ಲಿ ಈ ಕಂಪನಿಗೆ ಒಟ್ಟು 943 ಕೋಟಿ ರೂ. ಮೊತ್ತದ ಷೇರು ಹೂಡಿಕೆ ಲಭ್ಯವಾಗಿದೆ. ಅದರಲ್ಲಿ ಈಗಾಗಲೇ 150 ಕೋಟಿ ರೂಪಾಯಿಯನ್ನು ಕಂಪನಿ ಖರ್ಚು ಮಾಡಿದೆ.

ಐದು ಬಾರಿ ಕಾಂಗ್ರೆಸ್ ಸಂಸದನಾಗಿರುವ ರಾಯಪತಿ ಸಾಂಬಶಿವರಾವ್‌ದೂ ಇದೇ ಕತೆ. ಆತನ ಟ್ರಾನ್ಸ್‌ಟ್ರಾಯ್ ಇಂಡಿಯಾ ಕಂಪನಿಯು ತೆಲಂಗಾಣದ ನೀರಾವರಿ ಯೋಜನೆಗಳಿಗಾಗಿ ರೂ.1364 ಮೊತ್ತದ ಹೂಡಿಕೆಯನ್ನು ಒಪ್ಪಿ ಕೂತಿದೆ. ಅದರಲ್ಲಿ ಕೊಮರಮ್ ಭೀಮ್ ಪ್ರಾಜೆಕ್ಟ್‌ಗೆ ರೂ. 220 ಕೋಟಿ ಮತ್ತು ಪ್ರಾಣಹಿತ-ಚವೆಲ್ಲಾ ಸಂಪರ್ಕ ಯೋಜನೆಗೆ ರೂ. 1114 ಕೋಟಿ ಹೂಡಿಕೆಗಳೆ ಪ್ರಮುಖವಾದವು. ಇವುಗಳ ಕೆಲಸವೂ ಈಗ ಅರ್ಧಂಬರ್ಧವಾಗಿವೆ.

ಇದೇರೀತಿ ತೆಲಂಗಾಣ ವಿರೋಧಿಸಿ ರಾಜೀನಾಮೆ ನೀಡಿದ ಟಿಡಿಪಿ ಸಂಸದ ನಾಗೇಶ್ವರ್ ರಾವ್‌ನ ಮಧುಕಾನ್ ಸಂಸ್ಥೆಯೂ ತೆಲಂಗಾಣದಲ್ಲಿ ಹೂಡಿರುವುದು 1448 ಕೋಟಿ ಹಣವನ್ನು, ಕರೀಮ್‌ನಗರದ ಎಸ್.ಆರ್.ಎಸ್.ಪಿ ಪ್ರಾಜೆಕ್ಟ್‌ನ ಪ್ಯಾಕೇಜ್ ನಂಬರ್ ಸಿ-17ಗೆ 205 ಕೋಟಿ ರೂಪಾಯಿಯನ್ನೂ, ಮಹಾತ್ಮಾಗಾಂಧಿ-ಕಾಲ್ವಾಕುರ್ತಿ ಯೋಜನೆಗೆ 546 ಕೋಟಿಯನ್ನೂ ಮಧುಕಾನ್ ಸಂಸ್ಥೆ ಹೂಡಿದೆ. ಇವೆರಡಲ್ಲದೆ ಪ್ರಾಣಹಿತ-ಚವೆಲ್ಲಾ ಸಂಪರ್ಕ ಯೋಜನೆಯಲ್ಲೂ ಈ ಕಂಪನಿಯ 700 ಕೋಟಿ ಹೂಡಿಕೆ ಇದೆ.

ಅಖಂಡ ಆಂಧ್ರ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ತೆಲುಗು ದೇಶಂ ಪಾರ್ಟಿಯ ಸಂಸದ ಸಿ.ಎಂ.ರಮೇಶ್‌ರ ಹೃತ್ವಿಕ್ ಕಂಪನಿ ತೆಲಂಗಾಣದಲ್ಲಿ 4200 ಕೋಟಿ ರೂಪಾಯಿಯನ್ನು ಹೂಡಿದೆ. 39,000 ಕ್ಯುಸೆಕ್ಸ್ ನೀರು ಪೂರೈಕೆಯ ಎನ್.ಎಚ್-9 ಲಿಂಕ್ ಕೆನಾಲ್ ಎನ್.ಎಸ್.ಪಿ ಯೋಜನೆಯೊಂದರಲ್ಲೇ ಈ ಹೃತ್ವಿಕ್ ಕಂಪನಿ 2536.32 ಕೋಟಿ ರೂಪಾಯಿ ಹಣವನ್ನು ಹೂಡಿದೆ. ಇನ್ನು ನಾಗಾರ್ಜುನ ಸಾಗರ್ ಯೋಜನೆಯಲ್ಲಿ ಕಂಪನಿಯ ಹೂಡಿಕೆ ಮೊತ್ತ 1706 ಕೋಟಿ ರೂಪಾಯಿ. ಈ ರಮೇಶ್, ತೆಲಂಗಾಣ ರಚನೆ ವಿರೋಧಿಸಿ ಧರಣಿ ಕುಳಿತಿರುವ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುವಿನ ಅತೀ ಆತ್ಮೀಯರಲ್ಲಿ ಒಬ್ಬ.

TELANGANA
AREA: 1.14 lakh sq. km
POPULATION: 3.5 cr
LOK SABHA SEATS: 17
ASSEMBLY SEATS: 119

SEEMANDHRA
AREA: 1.60 lakh sq. km
POPULATION: 5 cr
LOK SABHA SEATS: 25
ASSEMBLY SEATS: 175

ಒಂದೊಮ್ಮೆ ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಯಾದರೆ ಇವಿಷ್ಟೂ ಉದ್ಯಮ, ಹೂಡಿಕೆಗಳ ಗತಿಯೇನಾಗುತ್ತೆ? ಸೀಮಾಂಧ್ರ ರಾಜಕಾರಣಿಗಳ 'ಅಖಂಡ ಆಂಧ್ರ' ಪ್ರೇಮವನ್ನು ಬಡಿದೆಬ್ಬಿಸಿರುವುದೇ ಈ ಆತಂಕ. ಕೆಲ ಯೋಜನೆಗಳಿಗೆ ಇನ್ನೂ ಭೂಸ್ವಾಧೀನ ಪ್ರಕ್ರಿಯೆಯೇ ಮುಗಿದಿಲ್ಲ, ಇನ್ನು ಕೆಲವು ಯೋಜನೆಗಳಿಗೆ ಅದಾಗಲೆ ನೂರಾರು ಕೋಟಿ ಖರ್ಚಾಗಿಹೋಗಿದೆ. ಹೊಸ ರಾಜ್ಯ, ಹೊಸ ಸರ್ಕಾರ, ಎಲ್ಲಕ್ಕಿಂತ ಹೆಚ್ಚಾಗಿ ಆ ಭಾಗದ ಆಡಳಿತದಿಂದ ತಮ್ಮ ಪ್ರಭಾವಗಳು ಹೊರಗುಳಿದು ಅವರ ಲೆಕ್ಕಾಚಾರಗಳೆಲ್ಲ ಬುಡಮೇಲಾಗಿಬಿಡುತ್ತವೆ. ಈಗಾಗಲೇ ಉದ್ಯೋಗ, ಅಭಿವೃದ್ಧಿ ಮತ್ತು ಸರ್ಕಾರೀ ಆಡಳಿತದಲ್ಲಿ ಸೀಮಾಂಧ್ರದವರ ಪ್ರಾಬಲ್ಯತೆಯಿಂದ ರೋಸಿಹೋಗಿರುವ ತೆಲಂಗಾಣದ ಜನ ಮತ್ತು ಮೇಲ್ನೋಟಕ್ಕಾದರೂ ಆ ಜನರ ಆಶೋತ್ತರಗಳಿಗೆ ಸ್ಪಂದಿಸುವಂತೆ ನಡೆದುಕೊಳ್ಳಬೇಕಾದ ಹೊಸ ಸರ್ಕಾರಗಳು ಈ ಉದ್ಯಮಿಗಳಿಗೆ ದುಬಾರಿಯಾಗಿ ಪರಿಣಮಿಸಲಿವೆ. ಹಾಗೇನಾದರು ಆದರೆ, ತೆಲಂಗಾಣದ ನೆಲದಲ್ಲಿರುವ ಸೀಮಾಂಧ್ರ ಉದ್ಯಮಿ ಕಮ್ ರಾಜಕಾರಣಿಗಳ ಬಿಸಿನೆಸ್‌ಗಳು ಅಕ್ಷರಶಃ ಅತಂತ್ರವಾಗುತ್ತವೆ.

ಹೀಗಿದೆ ನೋಡಿ, ಅಖಂಡ ಆಂಧ್ರದ ಹೋರಾಟದ ಹಕೀಕತ್ತು...

■ ಗಿರೀಶ್ ತಾಳಿಕಟ್ಟೆ

ತೆಲಂಗಾಣ: ಯಾಕೆ? ಮತ್ತು ಬೇಕೆ?

ಆಂಧ್ರ ವಿಭಜನೆಯನ್ನು ಖಂಡತುಂಡವಾಗಿ ವಿರೋಧಿಸಿ ತೆಲಂಗಾಣವನ್ನು ತಮ್ಮೊಟ್ಟಿಗೇ ಬಿಟ್ಟುಬಿಡಬೇಕೆಂದು ಸೀಮಾಂಧ್ರ ರಾಜಕಾರಣಿಗಳು, ಉದ್ಯಮಿಗಳು ರಚ್ಚೆ ಹಿಡಿದು ಹೋರಾಡುವುದಕ್ಕೂ ಒಂದು ಕಾರಣವಿದೆ. ತೆಲಂಗಾಣ ಪ್ರಾಂತ್ಯವು ಅಭಿವೃದ್ಧಿಯಲ್ಲಿ ಎಷ್ಟು ಹಿಂದುಳಿದಿದೆಯೋ, ಶಿಕ್ಷಣ-ಆರೋಗ್ಯ-ನೀರಾವರಿ ಮೊದಲಾದ ಮೂಲಭೂತ ಸೌಕರ್ಯಗಳಲ್ಲಿ ಅದೆಷ್ಟು ಹೀನಾಯಸ್ಥಿತಿಯಲ್ಲಿದೆಯೋ ಅಷ್ಟೇ ಸಂಪದ್ಭರಿತ ನಾಡು ಅದು. ಆಂಧ್ರಪ್ರದೇಶದ ಒಟ್ಟಾರೆ ಅರಣ್ಯದಲ್ಲಿ 45% ದಟ್ಟಸಿರು ಹರಡಿಕೊಂಡಿರುವುದು ತೆಲಂಗಾಣದಲ್ಲೇ. ಇನ್ನುಳಿದ 55% ಸೀಮಾಂಧ್ರ ಮತ್ತು ಕರಾವಳಿ ಆಂಧ್ರದಲ್ಲಿ ಹಂಚಿಹೋಗಿದೆ. ಆಂಧ್ರದ ಈ ಮೂರು ತುಂಡುಗಳನ್ನು ಒಟ್ಟಿಗೇ ನೋಡಿದರೆ ಹೆಚ್ಚು ಅರಣ್ಯ ಪ್ರದೇಶ ಇರುವುದು ತೆಲಂಗಾಣದಲ್ಲೆ. ಇಡೀ ದೇಶದ ಒಟ್ಟಾರೆ ಕಲ್ಲಿದ್ದಲು ನಿಕ್ಷೇಪದಲ್ಲಿ ಶೇ.20 ರಷ್ಟು ನಿಕ್ಷೇಪಗಳು ತೆಲಂಗಾಣ ಒಂದರಲ್ಲೇ ಇವೆ. ಅಲ್ಲದೆ ಸಿಮೆಂಟ್ ತಯಾರಿಕೆಗೆ ಅತ್ಯಗತ್ಯವಾದ ಸುಣ್ಣದ ಕಲ್ಲು ಸಂಪನ್ಮೂಲವೂ ತೆಲಂಗಾಣದ ಮಣ್ಣಿನಲ್ಲಿ ಹೇರಳವಾಗಿ ಬೆರೆತು ಹೋಗಿದೆ. ಬಾಕ್ಸೈಟ್ ಮತ್ತು ಮೈಕಾದಂತಹ ಅತ್ಯಮೂಲ್ಯ ಅದಿರುಗಳ ನಿಕ್ಷೇಪಗಳೂ ಇಲ್ಲಿ ಮೈಚಾಚಿಕೊಂಡಿವೆ. ಇಷ್ಟೆಲ್ಲಾ ನಿಕ್ಷೇಪಗಳ ಜೊತೆಗೆ ಕೃಷ್ಣ ಮತ್ತು ಗೋದಾವರಿಯಂತಹ ನದಿಗಳು ತೆಲಂಗಾಣದಲ್ಲೇ ಅತಿಹೆಚ್ಚು ಸಾಗುವಳಿ ಭೂಮಿಯನ್ನು ಹೊಂದಿರುವುದು. ಅಲ್ಲದೆ ಕೈಗಾರಿಕೆಗಳಿಗೆ ಅತ್ಯಂತ ಪ್ರಾಶಸ್ತ್ಯವಾಗಿ ಮಾಡಿರುವುದೂ ಇದೇ ನದಿಗಳು.

ಈ ಎಲ್ಲಾ ಕಾರಣಗಳಿಂದ ಸೀಮಾಂಧ್ರದ ರೊಕ್ಕಸ್ಥರೆಲ್ಲ ತೆಲಂಗಾಣವನ್ನು ಎಣ್ಣೆ ತೆಗೆಯುವ ಗಾಣದಂತೆ ಬಳಸಿಕೊಳ್ಳುತ್ತಾ ಬಂದಿದ್ದಾರೆ. ನೆನಪಿರಲಿ, ತೆಲಂಗಾಣದಲ್ಲಿರುವ ಒಟ್ಟಾರೆ ಕೈಗಾರಿಕೆಗಳ ಪೈಕಿ ಶೇ.60ರಷ್ಟು ಸೀಮಾಂಧ್ರದವರ ಒಡೆತನದಲ್ಲಿರುವಂತವು. ಆದರೆ ತೆಲಂಗಾಣದ ಒಬ್ಬನೇ ಒಬ್ಬ ಉದ್ಯಮಿ ಸೀಮಾಂಧ್ರದಲ್ಲಿ ಕೈಗಾರಿಕೆ ಸ್ಥಾಪಿಸಿಲ್ಲ. ಈಗ್ಗೆ ಒಂದೆರಡು ವರ್ಷಗಳ ಹಿಂದೆ ಕೇಂದ್ರ ಸಚಿವ ಜೈಪಾಲ್‌ರೆಡ್ಡಿಯ ಸಂಬಂಧಿಕನೊಬ್ಬ ಸೀಮಾಂಧ್ರದಲ್ಲಿ ಕೈಗಾರಿಕೆ ಸ್ಥಾಪಿಸಲು ಮುಂದಾದಾಗ ಆತನಿಗೆ ಇಲ್ಲದ ಕಿರುಕುಳ ಕೊಟ್ಟು ಹಿಂದೆ ಸರಿಯುವಂತೆ ಮಾಡಲಾಗಿತ್ತು. ಈಗ ಹಾಗೇ ಸೀಮಾಂಧ್ರದವರಿಂದ 'ಅಕ್ಷಯ ಪಾತ್ರೆ'ಯನ್ನು ಕಿತ್ತುಕೊಂಡಂತಾಗಿದೆ. ಸಹಜವಾಗಿಯೇ ಅವರೊಳಗಿನ 'ಅಖಂಡ ಆಂಧ್ರದ' ನಾಡಭಕ್ತಿ ಧಗ್ಗೆಂದು ಹೊತ್ತಿ ಉರಿಯುತ್ತಿದೆ. ಇವತ್ತು ತೆಲಂಗಾಣ ಪ್ರತ್ಯೇಕ ರಾಜ್ಯವಾಗಿ ರೂಪುಗೊಳ್ಳಲಾಗದಂತೆ [illegible] ಆಂಧ್ರದಲ್ಲೇ ಅದು ಉಳಿಯಬೇಕೆಂದು ಬೊಬ್ಬಿಡುತ್ತಿರುವ ರಾಜಕಾರಣಿಗಳನ್ನೆಲ್ಲ ಸಾಲಾಗಿ ಕೂರಿಸಿ, 'ಇಷ್ಟೂ ದಿನ ತೆಲಂಗಾಣದ ಅಭಿವೃದ್ಧಿಗಾಗಿ ಅಧಿಕಾರಸ್ಥರಾಗಿ ನಿಮ್ಮ ಕೊಡುಗೆ ಏನು?' ಎಂಬ ಪ್ರಶ್ನೆ ಕೇಳಿದರೆ ಒಬ್ಬರೂ ಉತ್ತರ ಕೊಡಲಾರರು.

ತೆಲಂಗಾಣದ ದುರಾದೃಷ್ಟವೇ ಅಂತದ್ದು. ತನ್ನ ಒಡಲೊಳಗೆ ಅಷ್ಟೆಲ್ಲಾ ಸಂಪದ್ಭರಿತವಿದ್ದರೂ ಅದರ ಲಾಭ ಸ್ಥಳೀಕರಿಗೆ ಕಿಂಚಿತ್ತೂ ಲಭಿಸಿಲ್ಲ. ಸೀಮಾಂಧ್ರವನ್ನು ಅತ್ಯಂತ




ಸಿರಿವಂತ ನಾಡನ್ನಾಗಿಸಿದ ತೆಲಂಗಾಣ ಇವತ್ತಿಗೂ ದಾರಿದ್ರ್ಯದಲ್ಲೇ ತೊಳಲಾಡಬೇಕಿದೆ. ಕೃಷ್ಣಾ, ಗೋದಾವರಿ ನದಿಗಳ ನೀರು ಹಂಚಿಕೆಯನ್ನು ನೋಡಿದರೆ ಸಾಕು ಸೀಮಾಂಧ್ರದಿಂದ ತೆಲಂಗಾಣಕ್ಕೆ ಅದೆಂತಹ ಅನ್ಯಾಯವಾಗಿದೆ ಎಂಬುದು ಸಾಬೀತಾಗುತ್ತದೆ. ಕೃಷ್ಣಾ ನದಿಗೆ ಸೀಮಾಂಧ್ರದಲ್ಲಿ ಇರುವುದು ಕೇವಲ 13% ಜಲಾನಯನ ಪ್ರದೇಶ ಮಾತ್ರ, ತೆಲಂಗಾಣದಲ್ಲಿ ಈ ನದಿಯ ಜಲಾನಯನ ಪ್ರದೇಶ 69%ನಷ್ಟಿದೆ. ಆದರೆ ಕೃಷ್ಣಾ ನದಿ ನೀರಲ್ಲಿ 49% ಸೀಮಾಂಧ್ರಕ್ಕೂ, 35% ತೆಲಂಗಾಣಕ್ಕೂ ಬಳಕೆಯಾಗಬೇಕೆನ್ನುವ ಹಂಚಿಕೆ ನಿಯಮವನ್ನು ರೂಪಿಸಲಾಗಿದೆ. ಹೆಚ್ಚು ಜಲಾನಯನ ಪ್ರದೇಶ ಹೊಂದಿದ್ದರೂ ಕಡಿಮೆ ನೀರು ಮಾತ್ರ ತೆಲಂಗಾಣದ ಪಾಲು. ಇದು ಕೇವಲ ಹಂಚಿಕೆಯ ಅಂಕಿ-ಅಂಶ ಮಾತ್ರ. ಕಳೆದ ಮೂರು ವರ್ಷಗಳಿಂದ ಕೃಷ್ಣಾ ನದಿ ನೀರಿನ ಬಳಕೆಯನ್ನು ಗಮನಿಸಿದರೆ ಶೇ.87% (ಹಂಚಿಕೆ ಪ್ರಮಾಣ 49% ಮಾತ್ರ)ನ್ನು ಸೀಮಾಂಧ್ರ ಬಳಸಿಕೊಂಡಿದ್ದರೆ, ತೆಲಂಗಾಣಕ್ಕೆ ಖರ್ಚಾಗಿರುವ ಪ್ರಮಾಣ 1%ಗೂ ಕಡಿಮೆಯೇ ಇದೆ. ಗೋದಾವರಿ ನದಿ ವಿಚಾರದಲ್ಲೂ ಇದೇ ವಂಚನೆ. ಈ ನದಿಗೆ ಸೀಮಾಂಧ್ರದಲ್ಲಿ ಇರುವುದು ಕೇವಲ 21% ಮಾತ್ರ ಜಲಾನಯನ ಪ್ರದೇಶ ಆದರೂ ಗೋದಾವರಿಯ 23% ನೀರನ್ನು ಇಲ್ಲಿಗೆ ಬಳಸಿಕೊಳ್ಳಲಾಗುತ್ತದೆ. ತೆಲಂಗಾಣದಲ್ಲಿ ಈ ನದಿಯ ಜಲಾನಯನ ಪ್ರದೇಶ 79%ನಷ್ಟಿದ್ದರೂ ಗೋದಾವರಿಯಿಂದ ಇಲ್ಲಿಗೆ ಲಭ್ಯವಾಗೋದು ಕೇವಲ 9.6% ನೀರು ಮಾತ್ರ!

ತೆಲಂಗಾಣ ಮೇಲಿನ ಅನ್ಯಾಯ ಇಷ್ಟಕ್ಕೇ ಮುಗಿಯುವುದಿಲ್ಲ. ಮನುಗುರು ಶಾಖ ವಿದ್ಯುತ್ ಘಟಕವನ್ನು ತೆಲಂಗಾಣದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿತ್ತು, ನಂತರದಲ್ಲಿ ನಡೆದ ಲಾಬಿಗಳಿಂದ ಅದನ್ನು ಸೀಮಾಂಧ್ರದ ವಿಜಯವಾಡಕ್ಕೆ ಶಿಫ್ಟ್ ಮಾಡಲಾಗಿದೆ. ಅದು ಇಲ್ಲಿಯೇ ಸ್ಥಾಪಿತವಾಗಿದ್ದರೆ ತೆಲಂಗಾಣದ ಅರ್ಧದಷ್ಟು ವಿದ್ಯುತ್ ಸಮಸ್ಯೆ ಬಗೆಹರಿಯುತ್ತಿತ್ತು, ಅಂದಹಾಗೆ, ಈ ಘಟಕಕ್ಕೆ ಬೇಕಾದ ಕಲ್ಲಿದ್ದಲನ್ನು ಕೊಂಡೊಯ್ಯುತ್ತಿರುವುದು ಅದೇ ತೆಲಂಗಾಣದ ಸಿಂಗರೇನಿಯಿಂದ. ಸೀಮಾಂಧ್ರದಲ್ಲಿ ಒಟ್ಟು 39,800 ಶಾಲೆಗಳಿದ್ದರೆ ತೆಲಂಗಾಣದಲ್ಲಿ ಕೇವಲ 17,954 ಶಾಲೆಗಳು ಮೂಲ ಸೌಕರ್ಯವಿಲ್ಲದೆ ನೆಪಮಾತ್ರಕ್ಕೆ ತೆರೆದುಕೊಂಡಿವೆ. ಸೀಮಾಂಧ್ರದ 13 ಜಿಲ್ಲೆಗಳಲ್ಲಿ ಒಟ್ಟು 969 ಸರ್ಕಾರಿ ಆಸ್ಪತ್ರೆಗಳಿದ್ದರೆ 10 ಜಿಲ್ಲೆಗಳಿರುವ ತೆಲಂಗಾಣದಲ್ಲಿರುವುದು ಕೇವಲ 270 ಆಸ್ಪತ್ರೆಗಳು ಮಾತ್ರ.

ರಾಜಕೀಯದಲ್ಲೂ ತೆಲಂಗಾಣಕ್ಕೆ ಸಿಕ್ಕ ಪ್ರಾತಿನಿಧ್ಯತೆ ಅಷ್ಟಕ್ಕಷ್ಟೇ. ಆಂಧ್ರಪ್ರದೇಶಕ್ಕೆ ತೆಲಂಗಾಣ ಭಾಗದಿಂದ ಮುಖ್ಯಮಂತ್ರಿಯಾದ ಎಲ್ಲರ ಅಧಿಕಾರಾವಧಿಯನ್ನು ಒಟ್ಟಿಗೆ ಸೇರಿಸಿದರೆ 6 ವರ್ಷವನ್ನೂ ದಾಟುವುದಿಲ್ಲ. ಮಕ್ಕಳಿಗೆ ಬೊಂಬೆ ತೋರಿಸಿ ಸಮಾಧಾನ ಪಡಿಸಿದಂತೆ ಅಧಿಕಾರ ಕೊಟ್ಟು ಕಿತ್ತುಕೊಳ್ಳುವುದು ಸೀಮಾಂಧ್ರದ ಮತ್ತೊಂದು ರೂಢಿ. 1953ಕ್ಕೂ ಮುನ್ನ ತೆಲಂಗಾಣದ 11 ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶವಾಗಿತ್ತು, ಈಗ ಅದು 6.5 ಲಕ್ಷ ಹೆಕ್ಟೇರ್‌ಗೆ ಕ್ಷೀಣಿಸಿದೆ. ಸೀಮಾಂಧ್ರದ 9 ಲಕ್ಷ ಮಂದಿ ಸರ್ಕಾರಿ ಕೆಲಸ ಗಿಟ್ಟಿಸಿಕೊಂಡಿದ್ದರೆ, ಸರಿಸುಮಾರು ಅಷ್ಟೇ ಭೂಪ್ರದೇಶ ಹೊಂದಿರುವ ತೆಲಂಗಾಣದಲ್ಲಿ ಸರ್ಕಾರಿ ಕೆಲಸದ ಭಾಗ್ಯ ಕಂಡವರು ಕೇವಲ 3 ಲಕ್ಷ ಮಂದಿ ಅಷ್ಟೆ. ಅಖಂಡ ಆಂಧ್ರ ಅಸ್ತಿತ್ವಕ್ಕೆ ಬಂದಾಗಿನಿಂದ ರಾಜ್ಯ ಸರ್ಕಾರ 40 ಪ್ರಮುಖ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಅದರಲ್ಲಿ ತೆಲಂಗಾಣಕ್ಕೆ ಲಭ್ಯವಾಗಿರುವುದು ಮೂರು ಮಾತ್ರ. ಉಳಿದ 37 ಯಥಾ ಪ್ರಕಾರ ಸೀಮಾಂಧ್ರದ ಪಾಲಾಗಿವೆ. 1961ರಲ್ಲಿ ತೆಲಂಗಾಣ ಆಂಧ್ರಕ್ಕೆ ಸೇರಿಕೊಂಡಾಗಿನಿಂದ ಇಂತಹ ಸಾಕಷ್ಟು ವಂಚನೆಗಳು ನಡೆಯುತ್ತಲೇ ಬಂದಿವೆ. ಇದಕ್ಕೆಲ್ಲ ಯಾರು ಹೊಣೆ? ಇವತ್ತು ಅಖಂಡ ಆಂಧ್ರಕ್ಕಾಗಿ ಬೊಬ್ಬಿಡುತ್ತಿರುವ ರಾಜಕಾರಣಿಗಳು ತಮ್ಮ ಇಷ್ಟು ಬಗೆಯ ಅಧಿಕಾರಾವಧಿಯಲ್ಲಿ ತೆಲಂಗಾಣಕ್ಕಾಗಿ ಮಾಡಿದ್ದಾದರೂ ಏನು? ಉತ್ತರ ಶೂನ್ಯ!

ಆದರೂ ತೆಲಂಗಾಣ ಅವರಿಗೆ ಬೇಕು. ಯಾಕೆಂದರೆ ಅದು ಅವರ ಅಕ್ಷಯ ಪಾತ್ರೆ.....

ಮೋದಿಯ ಗುಜರಾತ್‌ನಲ್ಲಿ ದಲಿತರ ಸ್ಥಿತಿ..



ಗುಜರಾತಿನಲ್ಲಿರುವ ದಲಿತರು ಕಡಿಮೆಯೇ. ಕೇವಲ ಶೇಕಡಾ 8ರಷ್ಟು ಮಾತ್ರ ದಲಿತರು ಅಲ್ಲಿ ವಾಸಿಸುತ್ತಾರೆ. ದಲಿತರ ವಿಚಾರದಲ್ಲಿ ಅಲ್ಲಿನ ಸವರ್ಣೀಯರ ಧೋರಣೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಅಂತಹ ಬದಲಾವಣೆಗಳೇನೂ ಆಗಿಲ್ಲ, ಬದಲಾಗಿ ಮಿಕ್ಕೆಲ್ಲ ರಾಜ್ಯಗಳಿಗಿಂತ ದಲಿತರನ್ನು ಬಹಿಷ್ಕರಿಸುವುದು ಗುಜರಾತಿನಲ್ಲೇ ಹೆಚ್ಚು ಎನ್ನಬಹುದಾದಷ್ಟು ಪ್ರಕರಣಗಳು ನಮಗೆ ಸಿಗುತ್ತವೆ. ಗಾಂಧೀಜಿಯ ನಾಡಿನಲ್ಲಿ ದಲಿತರ ಬದುಕು ಎಂದಿಗೂ ಸರಿಹೋಗಲಿಲ್ಲ ಎನ್ನುವುದಕ್ಕೆ ಇಲ್ಲಿನ ಮಿತಿಮೀರಿದ ತಾರತಮ್ಯಗಳು ಸಾಕ್ಷಿಗಳಾಗಿವೆ. 1981ರಲ್ಲಿ ಗುಜರಾತಿನಲ್ಲಿ ಮೀಸಲಾತಿ ವಿರೋಧಿಸಿ ಆಂದೋಲನ ನಡೆದಾಗ ಅಹಮದಾಬಾದಿನ ಗೋಡೆಗಳ ಮೇಲೆ ದಪ್ಪದಪ್ಪ ಅಕ್ಷರಗಳಲ್ಲಿ 'ಅಸ್ಪೃಶ್ಯರೆ ನೀವೇಕೆ ಕಸ ಗುಡಿಸುವ ಕೆಲಸ ಮಾಡಬಾರದು? ನೀವೇಕೆ ಚಪ್ಪಲಿ ಹೊಲಿಯುವ, ಚರಂಡಿ ತೊಳೆಯುವ ಕೆಲಸ ಮಾಡಬಾರದು?' ಎಂದು ಬರೆದಿದ್ದರು. ಅದಲ್ಲದೆ ದಲಿತರು ಓಡಿಸುವ ಆಟೋಗಳ ನಂಬರ್‌ಗಳನ್ನು ಬರೆದು ಆ ಆಟೋಗಳನ್ನು ಹತ್ತಬಾರದೆಂದು ತಾಕೀತು ಮಾಡಿದ್ದರು. ಇಷ್ಟು ವಿಷಕಾರುತ್ತಿದ್ದ ಸವರ್ಣೀಯರೇ ಇಂದು ಮೋದಿಯ ಪರ ಮಾತಾಡುತ್ತಿರುವುದೆಂದರೆ ಅತಿಶಯೋಕ್ತಿಯಾಗಲಾರದು. ಆದರೆ 2002 ರ ಗೋಧ್ರಾ ಹತ್ಯಾಕಾಂಡದಲ್ಲಿ ದಲಿತರು ಇದೆಲ್ಲವನ್ನು ಮರೆತು ಮನುವಾದಿಗಳ ಪರ ಕೆಲಸ ಮಾಡಿದ್ದು ನಿಜಕ್ಕೂ ವಿಪರ್ಯಾಸ (ಹಲವು ದಲಿತರು ಮುಸಲ್ಮಾನರನ್ನು ರಕ್ಷಿಸಿದ ಉದಾಹರಣೆಗಳು ಕೂಡ ಇವೆ). ಅಂಬೇಡ್ಕರ್ ಪ್ರಜ್ಞೆ ಬೆಳೆಸಿಕೊಳ್ಳದ ದಲಿತರು ಇಂತಹ ಕುಕೃತ್ಯದಲ್ಲಿ ಪಾಲ್ಗೊಳ್ಳಲು ಹಿಂದೂತ್ವವಾದಿಗಳು ದಲಿತರು ಮತ್ತು ಮುಸಲ್ಮಾನರ ನಡುವೆ ಇದ್ದ ಸಾಂಸ್ಕೃತಿಕ ಭಿನ್ನತೆಯನ್ನು ಎಂದಿನಂತೆ ಬಳಸಿಕೊಂಡಿದ್ದರು. ಅದೇನೇ ಇರಲಿ ಇಂದು ದಲಿತರು ಮೋದಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದ ತುರ್ತಿದೆ.

ಗುಜರಾತಿನಲ್ಲಿ ಸುಮಾರು 1.2 ಕೋಟಿ ಕುಟುಂಬಗಳಿವೆ. ಇವುಗಳಲ್ಲಿ 64 ಲಕ್ಷ ಮನೆಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲ, 52 ಲಕ್ಷ ಮನೆಗಳಿಗೆ ಶೌಚಾಲಯ ವ್ಯವಸ್ಥೆ ಇಲ್ಲ, ಗುಜರಾತ್ ಕೇವಲ 2 ಲಕ್ಷ ಸಾರ್ವಜನಿಕ ಶೌಚಾಲಯಗಳನ್ನು ಮಾತ್ರ ಹೊಂದಿದೆ. ಮಾಧ್ಯಮಗಳು ತೋರಿಸದ ಗುಜರಾತಿನ ನೈಜ ಪರಿಸ್ಥಿತಿ ಇದು. ಈ ಅಂಕಿಅಂಶಗಳನ್ನು ಗಮನಿಸಿದರೆ ಅಲ್ಲಿನ ಬಯಲು ಮಲವನ್ನು ತೆಗೆಯಲು ಪ್ರಕಾಶಿಸುತ್ತಿರುವ ಗುಜರಾತಿನಲ್ಲಿ ಮೆಷಿನ್ನುಗಳಿರಬೇಕಲ್ಲವೆ?

2011 ರ ಜನಗಣತಿಯ ಪ್ರಕಾರ ಅಲ್ಲಿ 12,566 ಮಲ ಹೊರುವ ಮೆಷಿನ್ನುಗಳಿವೆ. ಅವುಗಳ ಹೆಸರು ದಲಿತರು!!

ಈ ಅಮಾನವೀಯ ಕಾಯಕವನ್ನು ನಂಬಿಕೊಂಡು ಗುಜರಾತಿನ 2500 ದಲಿತ ಕುಟುಂಬಗಳು ಜೀವಿಸುತ್ತಿವೆ. ಆದರೆ ಶೇಕಡ 70ರಷ್ಟು ದಲಿತ ಕುಟುಂಬಗಳಿಗೇ ಶೌಚಾಲಯಗಳಿಲ್ಲ! ಇದು ಇಡೀ ದೇಶಕ್ಕೇ ಅಂಟಿರುವ ರೋಗ. ಗುಜರಾತ್ ಇದರಿಂದ ಹೊರತಾಗಿಲ್ಲ, ಗುಜರಾತ್ 1992 ರಲ್ಲಿ ಮಲ ಹೊರುವ ಪದ್ಧತಿ ನಿಷೇಧಿಸಿದೆಯಾದರೂ ಮೋದಿ ಬಂದಮೇಲೂ ಅದು ಮುಂದುವರಿದೇ ಇದೆ. ಇದರ ಜೊತೆಗೆ ಶಾಲೆಗಳಲ್ಲಿ ದಲಿತ ಮಕ್ಕಳನ್ನು ಶೌಚಾಲಯ ತೊಳೆಯುವಂತೆ ಒತ್ತಾಯಿಸಿದ ಹಾಗು ತೊಳೆಸುತ್ತಿದ್ದ ಪ್ರಕರಣಗಳು ಬೆಳಕಿಗೆ ಬಂದಿವೆ.


ಇನ್ನು ದಲಿತರನ್ನು ಪೂಜಾರಿಗಳನ್ನಾಗಿ ಮಾಡಲು ಹೊರಟಿರುವ ಮೋದಿಯನ್ನು ದಲಿತಪರ ಎಂದು ಪ್ರಚಾರ ಮಾಡಲು ಬಳಸಿಕೊಳ್ಳಲಾಗುತ್ತಿದೆ. ಅದರ ಮರ್ಮ ತಿಳಿಯುವ ಮೊದಲು 2009 ರಲ್ಲಿ ನಡೆಸಿದ ಸಮೀಕ್ಷೆಯೊಂದನ್ನು ನೋಡಿ. ಅದರ ಪ್ರಕಾರ 1655 ಹಳ್ಳಿಗಳಲ್ಲಿ 98 ಸಾವಿರ ದಲಿತರಿಗೆ ಸ್ಥಳೀಯ ದೇವಸ್ಥಾನಗಳಿಗೆ ಪ್ರವೇಶವಿಲ್ಲ, ದಲಿತರಿಗೆ ಪ್ರವೇಶವೇ ಇಲ್ಲದಿರುವಾಗ ದಲಿತ ಪೂಜಾರಿಗಳು ಎಲ್ಲಿ ಪೂಜೆ ಮಾಡಬೇಕು? ಎಲ್ಲಿಯೆಂದರೆ ಶಿಥಿಲಗೊಂಡಿರುವ, ಪಾಳು ಬಿದ್ದಿರುವ, ಊರ ಹೊರಗಿರುವ, ಕಾಡಿನಲ್ಲಿರುವ ದೇವಸ್ಥಾನಗಳಲ್ಲಿ! ಇದರಿಂದ ಮೋದಿಯ ಹಿಂದೂತ್ವ ಅಜೆಂಡಾದಲ್ಲಿ ನೇರವಾಗಿ ದಲಿತರನ್ನು ಪಾಲ್ಗೊಳ್ಳುವಂತೆ ಮಾಡಿ ನಿಧಾನವಾಗಿ ಅಂಬೇಡ್ಕರರನ್ನು ಗೌಣಗೊಳಿಸುವಂತೆ ಮಾಡುವುದೇ ಆಗಿದೆ. ಅಂದರೆ ದಲಿತರನ್ನು ಮತ್ತದೇ ಬ್ರಾಹ್ಮಣಶಾಹಿ ವ್ಯವಸ್ಥೆಗೆ ತಂದು ಹಿಂದೂತ್ವದ ಕಾಲ್ದಳವನ್ನಾಗಿ ಮಾಡಿಸಿಕೊಳ್ಳುವುದೇ ಆಗಿದೆ. ಈ ಉಪಾಯ ಆದಾಗಲೇ ಶೂದ್ರರಲ್ಲಿ ವರ್ಕ್‌ಔಟ್ ಆಗಿರುವುದರಿಂದಲೇ ಮೋದಿ ಇಂದು ಆರೆಸ್ಸೆಸ್‌ಗೆ ಗುಲಾಮನಾಗಿರುವುದಲ್ಲವೆ?

ಇಂತಹ ಪರಿಸ್ಥಿತಿಯಲ್ಲಿ ದಲಿತರು ಎಚ್ಚೆತ್ತು ಮೋದಿಗೊಂದು ಪ್ರಶ್ನೆ ಹಾಕಬೇಕಿದೆ.

ಅದೇನೆಂದರೆ ರಾಜ್ಯದ ಪ್ರತಿಷ್ಠಿತ ದೇವಸ್ಥಾನಗಳಾದ ಸೋಮನಾಥ, ಅಂಬಾಜಿ, ಅಕ್ಷರಧಾಮಗಳಲ್ಲಿ ದಲಿತರಿಗೆ ಪೂಜಾರಿಕೆ ಮಾಡಲು ಅವಕಾಶ ಕೊಡುವರೇ? ಆ ಟ್ರಸ್ಟುಗಳನ್ನು ದಲಿತರಿಗೆ ಬಿಟ್ಟು ಕೊಡುತ್ತಾರೆಯೆ?

ದೇವಸ್ಥಾನದ ಕಥೆ ಹಾಗಿರಲಿ ಗುಜರಾತಿನಲ್ಲಿ ದಲಿತನೊಬ್ಬ ಸವರ್ಣೀಯರನ್ನು ಮುಟ್ಟಿಸಿಕೊಳ್ಳುವಂತೆಯೂ ಇಲ್ಲ. ಸಂತೆಯಲ್ಲಿ ತರಕಾರಿಗಳನ್ನು ದಲಿತ ಮಹಿಳೆ ಸ್ವತಂತ್ರವಾಗಿ ಕೊಂಡುಕೊಳ್ಳುವಂತಿಲ್ಲ, ಬದಲಾಗಿ ಅವಳ ಮಡಿಲಿಗೆ ಎಸೆಯಲಾಗುತ್ತದೆ.


ಭೂಸುಧಾರಣೆ ಕಾಯ್ದೆಯಿಂದಾಗಿ ದಲಿತರಿಗೆ ಒಂದಷ್ಟು ಜಮೀನು ಬಂದದ್ದು ನಿಜ. ಆದರೆ ಇಂದು ಆ ಜಮೀನುಗಳು ಹೆಸರಿಗೆ ಮಾತ್ರ ದಲಿತರ ಬಳಿ ಇದ್ದು ಮೂಲದಲ್ಲಿ ಜಮೀನುದಾರನೇ ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದಾನೆ. ತಿರುಗಿಬಿದ್ದ ದಲಿತರನ್ನು ಇಡೀ ಊರಿಗೆ ಊರೇ ಬಹಿಷ್ಕರಿಸುತ್ತದೆ. ಕೆ.ಜಿ.ಬಾಲಕೃಷ್ಣನ್ ನೇತೃತ್ವದ ರಾಷ್ಟ್ರೀಯ ಮಾನವ ಹಕ್ಕು ಆಯೋಗ ದಲಿತರ ಸಾಕ್ಷರತೆ ಕುರಿತು ನೀಡಿರುವ ಹೇಳಿಕೆಯನ್ನು ಹಿಡಿದುಕೊಂಡು ಮೋದಿಯನ್ನು ಹೊಗಳುತ್ತಿರಬಹುದು ಆದರೆ ಅವರೇ ನಡೆಸಿದ ಎರಡು ದಿನ ಪ್ರವಾಸದಲ್ಲಿ ಬರೋಬ್ಬರಿ 77 ಬಹಿಷ್ಕಾರದ ಪ್ರಕರಣಗಳನ್ನು ಗುರುತಿಸಿದ್ದರು. ದಲಿತರ ದೌರ್ಜನ್ಯಗಳಿಗೆ ಸರಿಯಾಗಿ ಸ್ಪಂದಿಸಿಲ್ಲ ಎಂದು ಪೊಲೀಸರ ಮೇಲೆ 100ಕ್ಕೂ ಹೆಚ್ಚು ದೂರುಗಳು ಬಂದಿದ್ದವು. ತೀರ ಇತ್ತೀಚೆಗೆ ಆಗಸ್ಟ್ 8, 2013 ರಂದು ಒಂದೇ ದಿನ 13 ದಲಿತ ಕುಟುಂಬಗಳನ್ನು ಬಹಿಷ್ಕರಿಸಲಾಗಿದೆ. ಅಂತರ್ಜಾತಿ ಪ್ರೇಮದಿಂದಾಗಿ ಅಕೋಲ ಗ್ರಾಮದ 150 ಸವರ್ಣೀಯರು ಲಾಲಾಜಿ ಕಾಲಾಭಾಯಿಯನ್ನು ಜೀವಂತ ದಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.



ಗುಜರಾತಿನಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. 2009 ರಲ್ಲಿ 8353 ಪ್ರಕರಣಗಳು ದಾಖಲಾಗಿದ್ದರೆ, 2011 ರಷ್ಟೊತ್ತಿಗೆ 11,342 ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ 1557 ಅತ್ಯಾಚಾರ ಪ್ರಕರಣಗಳಿವೆ. ಆದರೆ ಈ ಪ್ರಕರಣಗಳಲ್ಲಿ ಒಂದಕ್ಕೂ ತೀರ್ಪು ಸಿಕ್ಕಿಲ್ಲ, ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ಕನ್ವಿಕ್ಷನ್ ದರ ಕೇವಲ 5% ಮಾತ್ರ. ಶೇಕಡ 80 ರಷ್ಟು ಪ್ರಕರಣಗಳು ತುಕ್ಕು ಹಿಡಿಯುತ್ತಿವೆ. ಇದಕ್ಕಾಗಿಯೇ 25 ವಿಶೇಷ ನ್ಯಾಯಾಲಯಗಳನ್ನು ಮಾಡಬೇಕಾಗಿತ್ತು ಆದರೆ ಗುಜರಾತಿನಲ್ಲಿ 19 ವಿಶೇಷ ನ್ಯಾಯಾಲಯಗಳು ಮಾತ್ರ ಇವೆ.

ಈ ಬಾರಿ ನರೇಂದ್ರ ಮೋದಿ ಗದ್ದುಗೆಗೆ ಏರುವ ಕೆಲವು ತಿಂಗಳುಗಳ ಮುಂಚೆ ಪೊಲೀಸರು ಪ್ರತಿಭಟನಾನಿರತ 3 ದಲಿತರನ್ನು ಗುಂಡಿಕ್ಕಿ ಕೊಂದಿದ್ದರು. ಸತ್ತ ದಲಿತರ ಪೈಕಿ ಇಬ್ಬರು 17 ವರ್ಷದ ಅಪ್ರಾಪ್ತ ಬಾಲಕರು. ಹೀಗೆ ಮೋದಿಯ ಗುಜರಾತೆಂಬ ಮಾಯಾಬಜಾರಿನಲ್ಲಿ ದಲಿತರೆಂದರೆ ಅದೇ ಹಿಂದೂ ಸಮಾಜದಲ್ಲಿನ ಕೀಳು ಜಾತಿಯ, ಆಟಕ್ಕುಂಟು ಲೆಕ್ಕಕ್ಕಿಲ್ಲದ ಮಾನವರಷ್ಟೆ. ಮೋದಿಯ ಪರ ಕೂಗುವವರಿಗೆ ದಲಿತರಿಗೆ ಮೋದಿ ಏನು ಮಾಡಿದ್ದಾನೆ ಎಂಬ ಪ್ರಶ್ನೆ ಕೇಳಬೇಕಿದೆ. ಅದರ ಜೊತೆಗೆ ಇತರ ರಾಜ್ಯಗಳಿಗಿಂತ ಭಿನ್ನವಾದ ಸೌಲಭ್ಯಗಳನ್ನು ಅಲ್ಲಿನ ದಲಿತರು ಏನು ಪಡೆದಿದ್ದಾರೆ? ಸಮಾಜ ಕಲ್ಯಾಣಕ್ಕೆ ಅತಿ ಕಡಿಮೆ ಅನುದಾನ ಮೀಸಲಿಡುವ ಮೋದಿಯಿಂದ ದಲಿತರಾಗಲೀ ಹಿಂದುಳಿದವರಾಗಲೀ ಏನು ಬದಲಾವಣೆ ಬಯಸಲು ಸಾಧ್ಯ? ದೇಶದ ಎಲ್ಲಾ ರಾಜ್ಯಗಳಲ್ಲಿ ಇರುವಂತೆ ಬಹಿಷ್ಕಾರ, ಅಸ್ಪೃಶ್ಯತೆ, ಜೀತಗಾರಿಕೆ, ಅತ್ಯಾಚಾರ, ಜಾತಿ ಕ್ರೌರ್ಯ, ಮಲ ಹೊರುವ ಪದ್ಧತಿ ಇವೆಲ್ಲ ಇದ್ದೂ ಅದು ಹೇಗೆ ಮೋದಿಯ ಗುಜರಾತ್ ಪ್ರಕಾಶಿಸುತ್ತಿದೆ? ಇದಕ್ಕೆ ಉತ್ತರ ಕಾರ್ಪೋರೇಟುಗಳ ಕರಾಮತ್ತು ಅಷ್ಟೆ.

ಹೌದು, ಮೋದಿಯ ಹಿಂದೆ ಕೆಲಸ ಮಾಡುತ್ತಿರುವುದು ಈ ದೇಶದ ಮೀಸಲಾತಿ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿರುವ ಕಾರ್ಪೋರೇಟ್ ವಲಯ. 2007-08 ರಲ್ಲಿ 3.6 ರಷ್ಟಿದ್ದ ಗುಜರಾತಿನ ನಿರುದ್ಯೋಗ ದರ 2011 ರಷ್ಟೊತ್ತಿಗೆ 6.9 ಕ್ಕೆ ಬಂದು ನಿಂತಿತ್ತು, ಈಗ ಇನ್ನೂ ಪಾತಾಳಕ್ಕೆ ಹೋಗುತ್ತಿದೆ. ಆದರೆ ಖಾಸಗೀಕರಣದಲ್ಲಿ ಉದ್ಯೋಗ ಬೆಳವಣಿಗೆ ದಿನದಿಂದ ದಿನಕ್ಕೆ ಏರುತ್ತಿದೆ. ಅರ್ಥಾತ್ ಮತ್ತೆ ಅಸಮಾನತೆಯ ಆರಂಭ ಘಟ್ಟಕ್ಕೆ ಗುಜರಾತ್ ಮರಳುತ್ತಿದೆ. ಮೀಸಲಾತಿಯೆಂಬ ಉಪ್ಪಿನಕಾಯಿ ಕೂಡ ಮಾಯವಾಗುತ್ತಿದೆ. ಮೋದಿಯೇನಾದರೂ ಪ್ರಧಾನಿಯಾದರೆ ಮೋದಿಯ ಹೆಸರಿನಲ್ಲಿ ಕೋಮುವಾದವನ್ನು ಪೋಷಿಸುತ್ತಿರುವ ಸಂಘಪರಿವಾರವೂ, ಖಾಸಗೀಕರಣವನ್ನು ಹಂಬಲಿಸುವ ಬಂಡವಾಳಶಾಹಿಗಳೂ ನಮ್ಮ ದೇಶವನ್ನು ಆಳುತ್ತಾರೆ. ಇದರಿಂದ ಅಂಬೇಡ್ಕರರು ವಿರೋಧಿಸುತ್ತಿದ್ದ ಬ್ರಾಹ್ಮಣಶಾಹಿ-ಬಂಡವಾಳಶಾಹಿ ಜೋಡಿ ಬಲಗೊಳ್ಳುತ್ತದೆ.




■ ವಿ.ಆರ್.ಮೌರ್ಯ
ಫೋ: 9535320556

ನಟಿ ಆರತಿ ಮತ್ತು ಚಂದ್ರಶೇಖರ್ ದೇಸಾಯಿಗೌಡರ್ 'ಬೆಳ್ಳಿತೆರೆ'ಯ ಮೇಲೊಂದು ಚೆನ್ನದ ಗೆರೆ

ಬಹುಶಃ 2004 ರಲ್ಲಿ ಎಂದು ಕಾಣುತ್ತದೆ. ಚಂದ್ರಶೇಖರ ದೇಸಾಯಿಗೌಡರ್ ಅವರಿಗೆ ತಮ್ಮ ಹುಟ್ಟೂರು ಕುಣಿಮೆಣಿಹಳ್ಳಿಯನ್ನು ನೋಡಬೇಕೆನಿಸಿತು. 1963 ಅಥವಾ 64 ನೇ ಇಸವಿಯಲ್ಲಿ ಅಮೆರಿಕದಲ್ಲಿ ಓದು ಮುಗಿಸಿ ಅಲ್ಲಿಯೇ ತಮ್ಮ ಒಂದು ಉದ್ಯಮವನ್ನು ಕಟ್ಟಿ ಬೆಳೆಸಿದ ಈ ಸಾಹಸಿಗೆ ಬಿಡುವೇ ಇರಲಿಲ್ಲ, ಆದರೆ ಈಚೆಗೆ ಉದ್ಯಮದಿಂದ ಬಿಡುಗಡೆ ಪಡೆದ ಮೇಲೆ ತಮ್ಮ ತಾಯಿಯ ಊರು ಹಾವೇರಿ ಜಿಲ್ಲೆಯ ಕುಣಿಮೆಣಿಹಳ್ಳಿ ಮತ್ತು ತಂದೆಯ ಊರು ಮುಗುಳಿಯಲ್ಲಿ ಜನಪರವಾದ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆನಿಸಿತು.

ಚಂದ್ರಶೇಖರ್ ಅವರ ಜೊತೆ ಕುಣಿಮೆಣಿಹಳ್ಳಿಗೆ ನಾನೂ ಹೋದೆ. ಇವರ ಪತ್ನಿ ಶ್ರೀಮತಿ ಆರತಿಯವರು ಕಾರಣಾಂತರದಿಂದ ಬರಲಿಲ್ಲ. "ನಾನು ಹುಡುಗನಾಗಿದ್ದಾಗ ಈ ಊರು ಇಷ್ಟು ಕೆಟ್ಟಿರಲಿಲ್ಲ" ಎನ್ನುತ್ತ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತ, ರಸ್ತೆಬದಿಯ ಕೊಳಕುಗಳನ್ನು ದಾಟುತ್ತ ತಮ್ಮ ಚಿಕ್ಕಂದಿನ ಮನೆಯನ್ನು ಗುರುತು ಹಿಡಿದು ಒಳಗೆಹೋದರು. ಚಂದ್ರಶೇಖರ್ ಅವರ ಸಂಬಂಧಿಗಳಿಗೆ ಆಶ್ಚರ್ಯವೋ ಆಶ್ಚರ್ಯ. ಎಲ್ಲರೂ ಸುತ್ತ ನೆರೆದರು. ಮನೆ ಪ್ರವೇಶಿಸುತ್ತಿದ್ದಂತೆ ಇಕ್ಕೆಲಗಳಲ್ಲೂ ದನಗಳನ್ನು ಕಟ್ಟಿದ್ದರು; ಹಾಗಾಗಿ ಇದು ರೈತಾಪಿ ಕುಟುಂಬ ಎಂದು ಅರಿತೆ. ದನಗಳ ಪಕ್ಕದ ಕಟ್ಟೆಯ ಮೇಲೇ ಕುಳಿತ ಚಂದ್ರಶೇಖರ್ ಅವರ ಮನಸ್ಸಿನಾಳದಲ್ಲಿ ಹಳೇ ನೆನಪುಗಳ ಬಿರುಗಾಳಿಯೇ ಬೀಸಿದಂತೆ ಕಂಡಿತು. ಮಾತು ಬೆಳೆದಂತೆ ಅರಿವಾಯಿತು - ಹಿಂದಿನ ತಲೆಯವರ ಮಕ್ಕಳು-ಮೊಮ್ಮಕ್ಕಳು ಕುಟುಂಬದ ಜಮೀನನ್ನು ಪಾಲಿಗೆ ಬಂದಷ್ಟು



ಹಂಚಿಕೊಂಡಿದ್ದರು. ಹಿಂದಿನ ಸಮೃದ್ಧಿ ನೆಮ್ಮದಿ ಬದುಕಿನ ಸ್ಥಳದಲ್ಲಿ ವರ್ತಮಾನದ ಆಗಂತುಕ ಬದುಕು ತಲೆ ಎತ್ತಿತ್ತು, ಹಳ್ಳಿಯ ಬಹುಪಾಲು ಜನರಿಗೆ ಶೌಚಾಲಯಗಳೇ ಇರಲಿಲ್ಲ, ಆದರೂ ಅಲ್ಲಿ ನೆರೆದ ಊರ ಮುಖಂಡರು ಚಂದ್ರಶೇಖರ್ ಬಹಳ ಶ್ರೀಮಂತರು ಎಂಬುದನ್ನು ಮನಗಂಡು ಊರಿನ ಹಳೆಯ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕೆಲವು ಲಕ್ಷ ರೂ.ಗಳ ಪ್ರಸ್ತಾವನೆ ಇಟ್ಟರು. ಆಗ ಚಂದ್ರಶೇಖರ್ ಅವರು "ನನ್ನ ಹತ್ರ ದೇವಸ್ಥಾನಕ್ಕೆ ಅಂತ ದುಡ್ಡಿಲ್ರಿ; ಎಷ್ಟು ಹಣ ಖರ್ಚಾದ್ರು ಚಿಂತಿಲ್ಲ ಊರನಾಗೆ ಎಲ್ಲಾರಿಗೂ ಶೌಚಾಲಯ ಕಟ್ಟೋಣ – ನಿವು ಒಪ್ಪೋದಾದ್ರೆ" ಎಂದರು. ಕ್ಷಣಕಾಲ ತಬ್ಬಿಬ್ಬಾದ ಹಳ್ಳಿ ಮುಖಂಡರು ಏನೋ ಗುಸುಗುಸು ಮಾತಾಡಿ ಒಪ್ಪಿದರು.

ಹೀಗೆ ಹಳ್ಳಿಯ ಮುನ್ನೂರಕ್ಕೂ ಹೆಚ್ಚು ಕುಟುಂಬಗಳಿಗೆ ಶೌಚಾಲಯ ಕಟ್ಟುವ ಯೋಜನೆ ತಯಾರಾಯಿತು. ಚಂದ್ರಶೇಖರ್ ಹಣವನ್ನು ನಮ್ಮ ದೀನಬಂಧು ಸಂಸ್ಥೆಗೆ ಬಿಡುಗಡೆ ಮಾಡಿದರು. ಕುಣಿಮೆಣಿಹಳ್ಳಿ ಮತ್ತು ಮುಗುಳಿ ಗ್ರಾಮಗಳ ಸುಮಾರು ಆರುನೂರು ಕುಟುಂಬಗಳಿಗೂ ಶೌಚಾಲಯ ನಿರ್ಮಾಣ ಪ್ರಾರಂಭವಾಯಿತು. ನಮ್ಮ ಕಂಟ್ರಾಕ್ಟ್‌ದಾರ ಹಳ್ಳಿ ರಾಜಕೀಯದ ಒತ್ತಡಕ್ಕೆ ಮಣಿದು ಮೊದಲು ಲಿಂಗಾಯತರಿಗೆ, ಆನಂತರ ಹರಿಜನರಿಗೆ ಶೌಚಾಲಯ ಕಟ್ಟುವ ಏರ್ಪಾಟು ಮಾಡಿದ. ಈ ವಿಷಯ ಚಂದ್ರಶೇಖರ್ ಅವರ ಕಿವಿಗೆ ಬಿದ್ದು ತೀವ್ರ ಅಸಮಾಧಾನಗೊಂಡರು. ಕಟ್ಟುವುದೇ ಆದರೆ ಮೊದಲು ಹರಿಜನರಿಗೆ ಕಟ್ಟಬೇಕೆಂದು ಇಲ್ಲದಿದ್ದರೆ ಕೆಲಸ ನಿಲ್ಲಿಸಬೇಕೆಂದು ಆಗ್ರಹಪೂರ್ವಕವಾಗಿ ಹೇಳಿದರು. ವಿಧಿಯಿಲ್ಲದೆ ನಾನೇ ಈ ಹಳ್ಳಿಗಳಿಗೆ ಓಡಿದೆ. ಮೊದಲು ಹರಿಜನರ ಕೇರಿಯಲ್ಲಿ ಕಟ್ಟಬೇಕೆಂದು ನಮ್ಮ ಕಂಟ್ರಾಕ್ಟದಾರನಿಗೆ ತಾಕೀತು ಮಾಡಿ ಏಕಕಾಲದಲ್ಲಿ ಎಲ್ಲರಿಗೂ ಶೌಚಾಲಯ ನಿರ್ಮಾಣವಾಗುವಂತೆ ಏರ್ಪಾಡು ಮಾಡಿದೆ.

ಶ್ರೀಮತಿ ಆರತಿಯವರೂ ಈ ನಿರ್ಧಾರವನ್ನು ಎತ್ತಿ ಹಿಡಿದರು. ಪ್ರತಿಭಾವಂತ ಕಲಾವಿದೆಯಾದ ಆರತಿಯವರ ಸಾಮಾಜಿಕ ಕಳಕಳಿ ವಿಶೇಷವಾದದ್ದು. ಅವರ ಮನೆ 'ಬೆಳ್ಳಿತೆರೆ'ಯಲ್ಲಿದ್ದ ಅನೇಕ ಅಮೂಲ್ಯ ವಸ್ತುಗಳನ್ನೆಲ್ಲ ನಮ್ಮ ದೀನಬಂಧು ಆಶ್ರಮಕ್ಕೆ ಕೊಟ್ಟರು. ಆಗ ಅವರು ಹೇಳಿದರು: "ನೋಡಿ ಜೀವನವೆಲ್ಲ ಎಷ್ಟೊಂದು ವಸ್ತುಗಳನ್ನು ಸಂಗ್ರಹ ಮಾಡುತ್ತಲೇ ಇರುತ್ತೇವೆ. ಆದರೆ ಈಗ ಇವಾವುವೂ ಅಗತ್ಯವಲ್ಲ ಎನ್ನಿಸುತ್ತಿದೆ; ಎಷ್ಟು ವಿಚಿತ್ರ, ಇದೇ ಜೀವನ."

ಒಮ್ಮೆ ನಾನು ನಮ್ಮ ಆಶ್ರಮದ ನಾಲ್ಕೈದು ಅಡುಗೆ ಸಿಬ್ಬಂದಿಯವರನ್ನು ಕರೆದುಕೊಂಡು ಆರತಿ ಅವರ ಮನೆಗೆ ಹೋಗಿದ್ದೆ. ಎಲ್ಲರೂ ಮನೆಯೊಳಗೆ ಹೋಗುವುದು ಬೇಡ ಎಂದು ಅವರನ್ನೆಲ್ಲ ವಾಹನದಲ್ಲೆ ಬಿಟ್ಟು ನಾನು ಮತ್ತು ನನ್ನ ಅಸಿಸ್ಟೆಂಟ್ ಮಾತ್ರ ಹೋಗಿದ್ದೆವು. ನನ್ನನ್ನು ಕಳುಹಿಸಲು ಹೊರಗೆ ಬಂದ ಆರತಿಯವರು ವಾಹನದಲ್ಲೇ ಕುಳಿತಿದ್ದವರನ್ನು ಕಂಡು ಕೋಪಗೊಂಡರು. "ನೀವು ಹೀಗೇಕೆ ಮಾಡಿದಿರಿ? ಇವರೆಲ್ಲ ಮನೆಯೊಳಗೆ ಬರಲಿ, ಕಾಫಿ ಕೊಡುತ್ತೇನೆ". ಎಂದು ಒಳಗೆ ಕರೆದು ತಾವೇ ಕಾಫಿ ಮಾಡಿಕೊಟ್ಟರು. ಅವರು ಮನೆಯಲ್ಲಿ ಪ್ರತ್ಯೇಕವಾಗಿ ಅಡುಗೆಯವರನ್ನು ಇಟ್ಟುಕೊಂಡಿಲ್ಲ, ನಮ್ಮ ತಂದೆ ಅಮೆರಿಕಕ್ಕೆ ಹೋದಾಗ ಚಂದ್ರಶೇಖರ್-ಆರತಿ ಅವರ ಮನೆಯಲ್ಲೇ ನಾಲ್ಕು ದಿನ ಉಳಿದುಕೊಂಡಿದ್ದರಂತೆ. ಆರತಿಯವರು ನಮ್ಮ ಮನೆಗೆ ಬಂದಾಗ ನಮ್ಮ ತಂದೆ ಆ ದಿನಗಳನ್ನು ನೆನೆದು ಹೇಳಿದರು "ನೀವು ಸಿನಿಮಾದಲ್ಲಿ ಅಡುಗೆ ಮಾಡುವುದನ್ನು ನೋಡಿದ್ದೆ, ಆದರೆ ನೀವು ನಿಜವಾಗಿಯೂ ರುಚಿಯಾದ ಅಡುಗೆ ಮಾಡುತ್ತೀರಿ."

- ಜೆ. ಎಸ್.ಜಯದೇವ, ದೀನಬಂಧು ಟ್ರಸ್ಟ್,
ಚಾಮರಾಜನಗರ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕೃಷ್ಣನೂ ಅಸುರ: ಒಂದು ಅವಲೋಕನ


ಗೋಮಾನ್ ಅಗ್ನೇ ಅವಿಮಾನ್ ಅಶ್ವೀ ಯಜ್ಞೋ ನೃವತ್ಸಖಾ ಸದಮಿದ ಪ್ರಮೃಷ್ಯ ।

ಇಳಾವಾನ್ ಏಷೋ ಅಸುರ ಪ್ರಜಾವಾನ್ ದೀರ್ಘೋ ರಯಿಃ ಪೃಥುಬುಧ್ನಃ ಸಭಾವಾನ್॥ (ಋಗ್ವೇದ: 4.2.5)

ಅಸುರ ಅಗ್ನಿಯೇ, ಈ ನಮ್ಮ ಯಜ್ಞವು ಗೋವು, ಮೇಕೆ, ಕುದುರೆ, ಮಕ್ಕಳು ಎಲ್ಲವನ್ನೂ ಒಳಗೊಂಡಿದೆ. ನಮ್ಮ ಸಭೆಗಳಲ್ಲಿ ನೀನು ಕೋಪರಹಿತನಾಗಿ ಸ್ನೇಹಿತನಂತೆ, ಮನುಷ್ಯ-ಸ್ನೇಹಿತನಂತೆ, ಇರು. ನಿನ್ನಲ್ಲಿ ಸಂಪತ್ತು ಹೇರಳವಾಗಿದೆ.

ಋಗ್ವೇದದ ಈ ಶ್ಲೋಕವನ್ನು ಗಮನಿಸಿದರೆ, ಅಗ್ನಿಯನ್ನು ಅಸುರ ಎಂದು ಸಂಭೋದಿಸಿರುವುದು ಕಂಡುಬರುತ್ತದೆ. ಸಾಯಣರು ಹೇಳುವ ಹಾಗೆ ಅಸುರ ಎಂದರೆ ಬಲಶಾಲಿಯಾದವರು. ಕೋಟೆಗಳನ್ನು ಒಡೆದು ಶತ್ರುಗಳನ್ನು ನಾಶ ಮಾಡಿದ ಇಂದ್ರನಿಗೂ ಅಸುರನೆಂದು ಹೇಳಿರುವುದಾಗಿ ತಿಳಿದುಬಂಧಿದೆ.

ಮಹಾಭಾರತದಲ್ಲಿ ಬ್ರಾಹ್ಮಣರು ಒಬ್ಬ ಚಾರ್ವಾಕನನ್ನು ಕೊಂದಿರುವ ಕಥೆಯಿದೆ. ಅದರಲ್ಲಿ ಆತನು ರಾಕ್ಷಸನೆಂದೂ, ತನ್ನ ತಪಶ್ಶಕ್ತಿಯಿಂದ ಅಗಾಧಶಕ್ತಿ ದೊರೆತಿದ್ದು, ಅದರಿಂದಾಗಿ ದೇವತೆಗಳಿಗೆ ಕಿರುಕುಳ ಕೊಡುತ್ತಿದ್ದನಂತೆ. ಇಂಥಾ ಕಥೆಗಳನ್ನು ಗಮನಿಸಿದಾಗ, ಚಾರ್ವಾಕರು ತಮ್ಮ ಭೌತವಾದಗಳಿಂದ ಲೋಕಾಯತರಾಗಿದ್ದು, ನೇರವಾಗಿ ವೈದಿಕ ದೇವತೆಗಳನ್ನು, ಬ್ರಾಹ್ಮಣರ ವೈದಿಕ ಸಂಪ್ರದಾಯಗಳನ್ನು ನಿರಾಕರಿಸಿದ್ದರು ಅಥವಾ ವಿರೋಧಿಸುತ್ತಿದ್ದರು ಎಂದು ಗಮನಿಸಬಹುದು. ದೇವತೆಗಳನ್ನು ಸುರರೆಂದು ಕರೆದರೆ, ಸುರರು ಅಲ್ಲದವರು ಅಸುರರು ಎಂದಾಗುತ್ತಾರೆ. ಇಲ್ಲಿ ಬಹು ಲಕ್ಷ್ಯಕೊಡಬೇಕಾದ ಮತ್ತೊಂದು ಅಂಶವೆಂದರೆ, ಯಾರೇ ಅಸುರರು ತಪಸ್ಸಾಧನೆಗೆ ತೊಡಗಿದರೆ, ದೇವತೆಗಳು ಅವರ ತಪೋಭಂಗಕ್ಕೆ ಯತ್ನಿಸುತ್ತಿದ್ದರು. ಅಸುರರು ಭೌತಿಕವಾದಿಗಳಾಗಿದ್ದರೂ, ತಮ್ಮ ಏಕಾಗ್ರತೆಯಿಂದ ತಮ್ಮ ಭೌತಿಕ ಆಕರ್ಷಣೆಗಳಿಂದ ಹೊರತಾಗಿ ತಪಸ್ಸಿನ ಮೂಲಕ ಶಕ್ತಿಯ ಉದ್ದೀಪನಕ್ಕೆ ಅಥವಾ ಶಕ್ತಿ ಸಂಪಾದನೆಗೆ ತೊಡಗಿದರೆ, ಈ ದೇವತೆಗಳು ತೀರಾ ತಳಮಳಗೊಳ್ಳುತ್ತಿದ್ದರು. ಈ ದೇವತೆಗಳು ಬಹುಶಃ ಆರ್ಯ ಬ್ರಾಹ್ಮಣರ ವೈದಿಕ ಪರಂಪರೆಯನ್ನು ಪ್ರತಿಪಾದಿಸಲು ಪಣತೊಟ್ಟವರಿರಬೇಕು ಅಥವಾ ಅದರಲ್ಲೇ ತಮ್ಮ ನಿಜವಾದ ಶ್ರದ್ಧೆಯುಳ್ಳವರಿದ್ದಿರಬೇಕು. ಅಸುರರು ತಮ್ಮ ಭೌತಿಕ ಸುಖದಲ್ಲಿ ವ್ಯಯಿಸಬಹುದಾದಂತಹ ಶಕ್ತಿಯನ್ನೂ ಕ್ರೋಢೀಕರಿಸಿಕೊಳ್ಳುವಂತಹ ಶಕ್ತಿ ಸಾಧನೆಯಲ್ಲಿ ನಿರತವಾಗಿರುವಾಗ, ಅವರ ಮಾನಸಿಕ ಏಕಾಗ್ರತೆಗೆ ಭಂಗತಂದು, ಸುಖ ಮತ್ತು ಭೋಗಗಳ ಕಡೆಗೆ ಗಮನ ಹರಿದು ಶಕ್ತಿ ಪತನವಾಗಲೆಂದು ತಪಸ್ಸನ್ನು ಭಂಗಪಡಿಸಲು ನಾನಾರೀತಿಯಲ್ಲಿ ಪ್ರಯತ್ನಿಸುವುದು ಸದಾ ಕಾಣಬರುತ್ತದೆ. ಕಾಮುಕತೆಯ ಮೂಲಕ ಶಕ್ತಿಯು ಸೋರಿ ಹೋಗಲೆಂಬಂತೆ ಬೆಲೆವೆಣ್ಣಿನಂತಹ ವಯ್ಯಾರಿಗಳನ್ನು ಆಕರ್ಷಿಸಲು ಕಳುಹಿಸುವುದು, ಅಗ್ನಿ, ಮಳೆ, ಗಾಳಿ ಇತ್ಯಾದಿಗಳನ್ನು ಸೃಷ್ಟಿಸುವುದು, ಕ್ರೂರ ಪ್ರಾಣಿಗಳನ್ನು ಅವರ ಬಳಿಗೆ ಕಳುಹಿಸುವುದು ಇತ್ಯಾದಿ. ಒಟ್ಟಿನಲ್ಲಿ ಸುರರಲ್ಲದವರು ಶಕ್ತಿ ಸಂವರ್ಧನೆಗೆ ತೊಡಗುವುದು ದೇವತೆಗಳ ರಾಜಕೀಯಕ್ಕೆ ಒಲ್ಲದ್ದು. ಇಲ್ಲಿ ಮತ್ತೊಂದು ಮುಖ್ಯವಾದ ಅಂಶವನ್ನು ಗಮನಿಸಬೇಕಾದದ್ದು, ಅಸುರರು ತಪಸ್ಸು ಮಾಡುತ್ತಿದ್ದದ್ದು ಬ್ರಹ್ಮ ಅಥವಾ ಶಿವನನ್ನು. ಬ್ರಹ್ಮನು ಸೃಷ್ಟ್ಯಾಧಿಪತಿಯಾದರೆ, ಶಿವನು ಲಯಾಧಿಪತಿ. ಬ್ರಹ್ಮ ಮತ್ತು ಶಿವನೆಂಬ ಸಾಕಾರ ಮೂರ್ತಿಗಳ ಸಂಕೇತಗಳ ಮೂಲಕ, ಅವರು ಅಧಿಪತಿ ಎಂದು ಹೇಳಲಾಗುವ ನಿರಾಕಾರ ಶಕ್ತಿ ತತ್ತ್ವಗಳ ಕಡೆ ಗಮನಿಸಿದರೆ, ಒಂದು ಸೃಷ್ಟಿಯ ಬಲ, ಮತ್ತೊಂದು ನಾಶದ ಬಲ. ಎರಡಕ್ಕೂ ಶಕ್ತಿಯೇ ಮೂಲ. ಸೃಷ್ಟಿಯಾದ ನಂತರ ಯಾವುದೇ ಒಂದರ ಪ್ರಯಾಣ ಲಯದ ಕಡೆಗೆ, ಹಾಗೆಯೇ ಲಯದ ನಂತರ ಆಗುವುದು ಮರುಸೃಷ್ಟಿ. ವಿಶ್ವದ ಅಸ್ತಿತ್ವದಲ್ಲಿ ಸಹಜವಾಗಿರುವ ಈ ಶಕ್ತಿಯ ಪ್ರಕ್ರಿಯೆಯ ಸರಪಳಿಯನ್ನು ಭೌತವಾದಿಗಳೆಂದು ಕರೆಯಲ್ಪಡುವ ಅಸುರರು ಅರಿತಿದ್ದಿರಬಹುದು. ಹಾಗಾಗಿ ಅವರು ತಮ್ಮ ಮನೋ ನಿಗ್ರಹದಿಂದ ಆ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳಲು, ವೃದ್ಧಿಗೊಳಿಸಿಕೊಳ್ಳಲು ತಪಸ್ಸಾಧನಾದಿಗಳ ಮೂಲಕ ಯತ್ನಿಸಿರಬಹುದು.




ಇಲ್ಲಿ ಸ್ವಾರಸ್ಯಕರವಾದ ಅಂಶವೆಂದರೆ, ಯಾವ ಯಜ್ಞ-ಯಾಗಾದಿಗಳನ್ನು ಬಹು ಶ್ರದ್ಧೆಯಿಂದ, ಗಂಭೀರದಿಂದ ಅತಿಹೆಚ್ಚಿನ ಮಹತ್ವ ಕೊಟ್ಟು ವೈದಿಕರು ಮಾಡುತ್ತಿದ್ದರೋ, ಅದನ್ನು ಅಸುರರು ಸಾರಾಸಗಟಾಗಿ ತಿರಸ್ಕರಿಸಿದ್ದರು. ಬಹು ಕೇವಲವಾಗಿ ಕಂಡಿದ್ದರು. ಅವುಗಳನ್ನು ಭಂಗಗೊಳಿಸುವ ವಿಷಯವಂತೂ ತೀರಾ ಸಾಮಾನ್ಯವಾಗಿತ್ತು. ಲೌಕಿಕಾಪೇಕ್ಷಿಗಳಾಗಿ ವೈದಿಕರು ಅನುಸರಿಸುತ್ತಿದ್ದ ಆಚರಣೆಗಳಿಗಿಂತಲೂ ಅಸುರರ ಅತಿಭೌತಿಕತೆಯ ಕುರಿತು, ಅಧ್ಯಾತ್ಮದ ಶಕ್ತಿಗಳ ಕುರಿತು ಇರಬಹುದಾದ ತಿಳಿವಳಿಕೆಗಳು ಹೆಚ್ಚು ಸೂಕ್ಷ್ಮವಾಗಿಯೂ, ವಿವೇಚನಾ ದೃಷ್ಟಿಯಲ್ಲಿ ಹೆಚ್ಚು ನಿಖರವಾಗಿಯೂ ಇದ್ದಿರಬಹುದೆಂದು ಕಾಣುತ್ತದೆ. ಹಾಗಾಗಿಯೇ ಆರ್ಯ ದೇವತೆಗಳು, ವೈದಿಕ ಬ್ರಾಹ್ಮಣರು ಅವರೊಡನೆ ಅತಿಭೌತಿಕವಾದ ಶಕ್ತಿ ಸಂಘರ್ಷಕ್ಕಿಳಿಯಲಾಗದೇ ಅವರನ್ನು ಮಾಯಾವಿಗಳೆಂದು ಕರೆಯುತ್ತಿದ್ದು, ಶಸ್ತ್ರಧಾರಿ ಕ್ಷತ್ರಿಯ ಅರಸರ ನೆರವಿನಿಂದ ಭೌತಿಕವಾಗಿಯೇ ಅಸುರರನ್ನು ಮುಗಿಸುವ ನಿದರ್ಶನಗಳು ಸಾಕಷ್ಟಿವೆ. ಅದೇ ಮನಸ್ಥಿತಿಯೇ ಇಂದಿನ ಹುಸಿ ಬ್ರಾಹ್ಮಣ್ಯದ ಅಮಲಿನಲ್ಲಿರುವವರೆಗೂ ಸಾಗಿ ಬಂದಿದೆ. ಹತಾಶ ಬ್ರಾಹ್ಮಣ್ಯದ ವೈದಿಕರು ಅಂದು ರಾಮನಂತಹ ಕ್ಷತ್ರಿಯನ ಬಳಿಗೆ ಕೊಲ್ಲೆಂದು ಪ್ರಾರ್ಥಿಸುತ್ತಾ ಹೋಗುತ್ತಿದ್ದವರು, ಈಗ ಟಿವಿ ಚಾನೆಲ್ಲುಗಳಲ್ಲೇ ನಮ್ಮ ಶ್ರದ್ಧಾ ನಂಬುಗೆಯನ್ನು ಅಲ್ಲಗಳೆಯುವ ಕೃತಿಕಾರನನ್ನು ಕೊಲ್ಲೆಂದು, ಕೈ ಕಾಲುಗಳನ್ನು ಕತ್ತರಿಸೆಂದು ಬೊಬ್ಬೆ ಹೊಡೆಯುವುದನ್ನು ಕಂಡರೆ ಅವರ ಬಗ್ಗೆ ತೀರಾ ಮರುಕ ಹುಟ್ಟುತ್ತದೆ. ಯಾಕಾಗಿ ಈ ಹತಾಶೆ? ಯಾಕಾಗಿ ಈ ಆಗ್ರಹ? ಮುಕ್ತ ಮನಸ್ಸಿಂದ, ಪೂರ್ವಾಗ್ರಹಗಳಿಲ್ಲದೇ ಗಟ್ಟಿ ಕಾಳುಗಳನ್ನು ಹುಡುಕಿ ಹೆಕ್ಕಬಾರದೇ? ಹೊಟ್ಟನ್ನು ತೂರಬಾರದೇ?

ಈ ವಿಷಯದ ಕುರಿತು ವಿಚಾರ ಮಾಡುವಾಗ ಅನಾರ್ಯ, ಅಸುರರ ತಪಸ್ಸಿಗೆ ಹೆದರುವ ಆರ್ಯರ ಆಚರಣೆಗಳು ಸತ್ವಹೀನ ಹಾಗೂ ಪೊಳ್ಳು ಎಂದು ಗಮನಕ್ಕೆ ಬಂದಂತೆ, ವೈದಿಕರು ಅದಕ್ಕೆ ಏಕೆ ಗಟ್ಟಿಯಾಗಿ ಅಂಟಿಕೊಂಡಿದ್ದರು? ಅದನ್ನು ಶಕ್ತಿಶಾಲಿಯಾದದ್ದು ಎಂದು ಹುಸಿ ನಂಬುಗೆಯನ್ನು ಪ್ರಚಾರ ಮಾಡಲು ಏಕಾಗಿ ಪಣತೊಟ್ಟಿದ್ದಿರಬಹುದು ಎಂದು ಜಿಜ್ಞಾಸೆ ಮೂಡುತ್ತದೆ. ಅವರಿಗೇ ಅವರ ಆಚರಣಾ ಪದ್ಧತಿಯಲ್ಲಿ ನ್ಯೂನತೆಗಳ ಅರಿವಿದ್ದು, ರಾಜಕೀಯ ಹಿತಾಸಕ್ತಿಯಿಂದ ಆಳರಸರ ಅಥವಾ ಜನಸಾಮಾನ್ಯರ ಭಯ ಮತ್ತು ಆಸೆಗಳ ಬಂಡವಾಳವನ್ನು ಇಟ್ಟುಕೊಂಡು ತಂತ್ರಗಳನ್ನು ಹೂಡುತ್ತಿದ್ದರೇ? ಇದೊಂದು ಪ್ರಶ್ನೆ! ಶಾಕ್ತರ ಬಹುದೊಡ್ಡ ಶ್ರೀವಿದ್ಯಾ ಉಪಾಸನೆಯಲ್ಲಿಯೂ ಅಂತರ್ಯಾಗ ಮತ್ತು ಬಹಿರ್ಯಾಗಗಳೆಂಬ ಶಕ್ತಿಯ ಸಾಕ್ಷಾತ್ಕಾರಕ್ಕೆ ಎರಡು ಮುಖ್ಯವಾದ ಆಚರಣೆಯ ಪದ್ಧತಿಗಳು ಕಾಣುತ್ತವೆ. ಬಹಿರ್ಯಾಗವೆಂದರೆ ಯಜ್ಞ-ಯಾಗ ಇತ್ಯಾದಿ ನೇಮಗಳನ್ನು ಪಾಲಿಸುವುದಾದರೆ, ಅಂತರ್ಯಾಗವೆಂಬುದು ಆಂತರಿಕವಾಗಿ ಆಚರಿಸುವ ತಪಸ್ಸೇ ಆಗಿದೆ. ಆರ್ಯರು ಬಹಿರ್ಯಾಗದವರಾದರೆ, ಅಸುರರು ಅಂತರ್ಯಾಗದವರೆಂದು ಒಂದು ವಿಶ್ಲೇಷಣೆ.

ಅಸುರ ಸಂಹಾರಗಳು ಏಕಾಗಿ?

ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲಾಗದೇ, ಬರಿಯ ಪೊಳ್ಳು ಭರವಸೆಗಳಿಂದಾಗಿ ಸಾಮಾನ್ಯ ಮನಸ್ಸಿನ ಭಯ ಮತ್ತು ಆಸೆಗಳೊಂದಿಗೆ ಆಟವಾಡುತ್ತಾ ಬರುವ ಹುಸಿ ವೈದಿಕ ಪುರೋಹಿತಶಾಹಿಗಳು, ಪ್ರಚಲಿತದಲ್ಲಿರುವ ತಮ್ಮ ನಂಬುಗೆಯ ನೆಲೆಗಳನ್ನು ಗಟ್ಟಿಗೊಳಿಸಿಕೊಳ್ಳಲು ವೈಚಾರಿಕವಾಗಿ, ಸೈದ್ಧಾಂತಿಕವಾಗಿ ಹೋರಾಡಲು ಸಾಧ್ಯವಾಗದೇ ಹೋದಾಗ, ಅಸುರರ ಚಾರಿತ್ರ್ಯವಧೆಯಂತಹ ಕಾರ್ಯಕ್ಕೂ ಹೇಸದೇ ತಮ್ಮ ಎದುರಾಳಿಗಳ ಶಕ್ತಿಪಾತಕ್ಕೆ ಮುಂದಾಗುತ್ತಾರೆ. ಬೃಂದೆಯ ಅಸುರಪತಿ ಮಹಾಶಕ್ತಿಶಾಲಿ ಯಾಗಿರುವ ಕಾರಣ ಅವಳ ಪಾತಿವ್ರತ್ಯವೆಂದೂ, ಅದನ್ನು ಕೆಡಿಸಲು ಕೃಷ್ಣ ಅವಳ ಗಂಡನಂತೆಯೇ ಬಂದು ಅವಳನ್ನು ಕೂಡಿ ಹಾದರ ಮಾಡಿ ಹೋದಾಗ, ಆ ಅಸುರನ ನಾಶವಾಯಿತಂತೆ. ಅದೇ ಮನಸ್ಥಿತಿಯವರು ಇಂದಿಗೂ ಮುಂದುವರೆದು, ಸೈದ್ಧಾಂತಿಕವಾಗಿ ಸಮರ್ಥಿಸಿಕೊಳ್ಳಲು ಸಾಧ್ಯವಾಗದೇ ಹೋದಾಗ, ಅವರ ನಂಬುಗೆಯ ನೆಲೆಯನ್ನು ಅಲುಗಾಡಿಸುವನು ಎಂದು ಸಾಹಿತಿಯೊಬ್ಬನ ಬೆತ್ತಲೆಯ ಚಿತ್ರಗಳನ್ನು ತೆರೆಗಳಿಗೆ ಹೊರತಂದು ತೇಜೋವಧೆಯನ್ನು, ಚಾರಿತ್ರಹರಣ ಮಾಡಲು ಯತ್ನಿಸುವರು. ಒಳಗೆ ತನ್ನ ಪಾಡಿಗೆ ತಾನು ಅಡಗಿರುವ ಬೆತ್ತಲೆಯನ್ನು ಹೊರಗೆ ತಂದು ತಮ್ಮ ಸೈದ್ಧಾಂತಿಕ ಸಂಘರ್ಷದ ದಾರಿ ತಪ್ಪಿಸುವವರೇ ಅಶ್ಲೀಲರು ಎಂದು ಅವರಿಗೆ ತಿಳಿಯದು ಎಂಬ ವಿಚಾರ ಮತ್ತೂ ಮರುಕಪಡುವ ಸಂಗತಿ. ಆದರೆ ಇಂತಹ ಕೃತ್ಯಗಳು ಈ ಸಂಘರ್ಷಗಳಲ್ಲಿ ಹೊಸತೂ ಅಲ್ಲ, ಆಶ್ಚರ್ಯವೂ ಅಲ್ಲ, ಮುಂದೊಂದು ದಿನ, ಈ ವೈದಿಕ ಬ್ರಾಹ್ಮಣ್ಯದ ಮಂದಿ ಮುಕ್ತವಾಗಿ ವಿಚಾರ ಮಂಥನಕ್ಕೆ, ಮುಂದಾಗಿ, ಮೌಢ್ಯಾಧಾರಿತ ವಿಷಯಗಳನ್ನು ವಾಸ್ತವ ನೆಲೆಗಟ್ಟಿನಿಂದ ವಿವೇಚಿಸುತ್ತಾ ಸಿದ್ಧಾಂತಗಳ ಮತ್ತು ಸಂಸ್ಕೃತಿಗಳ ನಿಜವಾದ ಅಧ್ಯಯನಕ್ಕೆ ಮುಂದಾದರೆ, ಅದು ಆಶ್ಚರ್ಯ ಮತ್ತು ಸ್ವಾಗತಾರ್ಹ.

ಈಗಿನ ಮೈಸೂರು ಎಂಬ ಹೆಸರಿನ ಮೂಲ ಮಹಿಷೂರು. ಅಲ್ಲಿನ ಬಹು ಸಮರ್ಥ ಅರಸ ನಾಗ ಕುಲದ ಬುಡಕಟ್ಟಿನವನಾಗಿದ್ದು ಬಹು ಪ್ರೇಮೆಯಿಂದ ಪಾಲಿಸುತ್ತಿದ್ದವನು. ಆದರೆ, ಅವನು ಸುರನಲ್ಲ, ಅಸುರ! ಅಪಾರ ನೈಸರ್ಗಿಕ ಸಂಪತ್ತನ್ನು ಹೊಂದಿದ್ದ ಈ ಮಹಿಷ ಮಂಡಲದಲ್ಲಿ ಯಾಗ, ಯಜ್ಞ ಇತ್ಯಾದಿಗಳನ್ನು ಮಾಡುವಂತಿರಲಿಲ್ಲ, ಎಲ್ಲರೂ ದುಡಿಯಲೇ ಬೇಕಿತ್ತು, ಆದರೆ ದುಡಿಮೆಯಲ್ಲಿಯೇ ವೈರುಧ್ಯತೆಗಳನ್ನು ಕಂಡುಕೊಂಡು, ತಮ್ಮನ್ನು ಮೇಲಿನ ಸ್ತರದಲ್ಲಿಟ್ಟುಕೊಂಡಿದ್ದ ಬ್ರಾಹ್ಮಣವರ್ಗದವರಿಗೆ ದುಡಿಯುವುದರಲ್ಲಿ ಸಮಾನವಾಗಿರಲು ಹೇಗೆ ಸಾಧ್ಯವಾದೀತು? ತಮ್ಮ ಸಾಮಾಜಿಕ ಸ್ಥಾನವನ್ನು ಕಾಪಾಡಿಕೊಳ್ಳಲು ಹಾಗೂ ತಮ್ಮ ಲೌಕಿಕ ಸುಖಾನುಭವವನ್ನು ಮುಂದುವರಿಸಲು ಈ ಮಹಿಷಾಸುರನನ್ನು ಮುಗಿಸಲೇಬೇಕಿತ್ತು, ಅದಕ್ಕೆ ಬೇಕಾದ ತಂತ್ರಗಳನ್ನು ಹೂಡಿ ಅವನನ್ನು ಕೊಲ್ಲಿಸಿದರು ಎಂದು ಒಂದು ಅಧ್ಯಯನವೊಂದು ಹೇಳುತ್ತದೆ. (ವಿಜಯಾ ಮಹೇಶ್‌ರವರ ಮೂಲನಿವಾಸಿ ಬಹುಜನರ ಇತಿಹಾಸದಲ್ಲಿ ಇಂಥಾ ಹತ್ತು ಹಲವು ವಿಷಯಗಳ ಅವಲೋಕನವಿದೆ.) ಮಹಿಷಾಸುರ, ನರಕಾಸುರ, ರಾವಣಾಸುರ ಮತ್ತು ಬಲಿಯಂತಹ ಮೂಲನಿವಾಸಿಗಳಾದ ಅಸುರರನ್ನು ಆರ್ಯರು ತಮ್ಮ ಅಧಿಪತ್ಯವನ್ನು ಸಾಧಿಸಿಕೊಳ್ಳಲು ತಂತ್ರಗಳಿಂದ ಕೊಂದು ವಿಜಯ ಸಾಧಿಸಿದ ದಿನಗಳನ್ನು ಅವರು ಉತ್ಸವಗಳನ್ನಾಗಿ ,ಮತ್ತು ಹಬ್ಬಗಳನ್ನಾಗಿ ಆಚರಿಸುವಾಗ, ನಾವೂ ಅವರೊಡನೆ ಕೂಡಿ ಸಂಭ್ರಮಿಸುತ್ತೇವೆ. ಈ ಹಬ್ಬಗಳನ್ನು ಆಚರಿಸುವುದು ಸಂಸ್ಕೃತಿಯ ಒಂದು ಭಾಗವೆನ್ನುತ್ತೇವೆ. ಯಾವುದೋ ಒಂದು ಪಂಗಡದ ವಿಜಯವು ಸಾರ್ವತ್ರಿಕವಾಗಿ ಹೇಗೆ ಸ್ವೀಕೃತವಾಯಿತು? ತಮ್ಮ ಪ್ರಾಬಲ್ಯವನ್ನು ಹರಡಲು, ತಮ್ಮ ವೈದಿಕ ಪೌರೋಹಿತ್ಯದ ಆಚರಣೆಗಳ ಮೂಲಕ ಬ್ರಾಹ್ಮಣ್ಯದ ಅಧಿಪತ್ಯವನ್ನು ಸಾಧಿಸಲು ಸಂಸ್ಕೃತಿಯನ್ನು ಬಳಸಿಕೊಂಡದ್ದು ಒಂದು ಸಾಂಸ್ಕೃತಿಕ ಶೋಷಣೆಯೇ ಅಲ್ಲವೇ? ಅನೇಕ ಸಂಗೀತವಾದ್ಯಗಳ ಸೃಷ್ಟಿಕರ್ತನಾದ, ಕವಿಯಾದ, ಜ್ಞಾನಿ



ಮತ್ತು ವಿದ್ವಾಂಸನಾದ ರಾವಣನನ್ನು ಯಾವುದೇ ಕಾರಣಕ್ಕೆ ರಾಮನು ಕೊಂದಿರುವುದು ನಮ್ಮ ಹಬ್ಬವು ಹೇಗಾಗಲು ಸಾಧ್ಯ?

ಕೃಷ್ಣನೂ ಅಸುರ?

ಕೃಷ್ಣನನ್ನು ಗೋಪಾಲನೆಂದು ಕರೆದು ಗೊಲ್ಲರ ಕುಲಕ್ಕೆ ಸೇರಿಸಿದ್ದು ಅವನ ತಂದೆ ನಂದಗೋಪ, ತಾಯಿ ಯಶೋದೆಯಿಂದಾಗಿ. ಆದರೆ, ಅವರಿಬ್ಬರೂ ಅವನ ಪಾಲಿಸಿ ಪೋಷಿಸಿದ ಸಾಕು ತಂದೆ-ತಾಯಿಗಳು. ಅವನ ಹೆತ್ತ ತಂದೆ ತಾಯಿಯರೆಂದರೆ ವಸುದೇವ ಮತ್ತು ದೇವಕಿಯರು. ದೇವಕಿಯ ಅಣ್ಣ ಕಂಸ, ಅವನು ಅಸುರನೆಂದು ಹೇಳುತ್ತೇವೆ. ಅದು ನಿಜವೇ. ಅವರಾರೂ ಸುರರಲ್ಲ. ದೇವಕಿಯ ಮಗನಾದ ಕೃಷ್ಣನೂ ತನ್ನ ಸೋದರ ಮಾವನಂತೆ ಅಸುರನೇ ಆಗುತ್ತಾನೆಯೇ ಹೊರತು ಸುರನು ಹೇಗಾದಾನು? ತಾನು ಗೊಲ್ಲರಹಟ್ಟಿಯಲ್ಲಿ ಗೋಪಾಲನಾಗಿದ್ದಾಗಲೂ ಇಂದ್ರಾದಿ ಆರ್ಯರನ್ನು ವಿರೋಧಿಸುವ ಮೂಲಕ ತನ್ನ ಆರ್ಯ ವಿರೋಧವನ್ನು ಪ್ರಕಟಗೊಳಿಸುತ್ತಾನೆ.


ಕಂಸನು ತನ್ನ ಸೋದರಳಿಯ ಕೃಷ್ಣನನ್ನು ಏಕೆ ಕೊಲ್ಲಬೇಕಾಗಿತ್ತು? ದೇವಕಿಯ ಮಕ್ಕಳೆಲ್ಲರನ್ನೂ ಏಕೆ ಕೊಂದ?


ಹೀಗೊಂದು ವಿಚಾರ ಮಾಡುವ. ಮಾತೃಪ್ರಧಾನವಿನ್ನೂ ಮಾನ್ಯವಾಗಿದ್ದ ಆ ಕಾಲದಲ್ಲಿ ಸ್ಥಿರ ಮತ್ತು ಚರ ಆಸ್ತಿಗಳೆಲ್ಲವೂ ಹೆಣ್ಣು ಮಕ್ಕಳಿಗೆ ಮತ್ತು ಹೆಣ್ಣು ಮಕ್ಕಳ ಮಕ್ಕಳಿಗೇ ಹಕ್ಕುದಾರಿಕೆಯಿಂದ ಸಾಗುವ ಪದ್ಧತಿಯಿತ್ತು. ಕಂಸನ ಹಿರಿಯರು ಸ್ಥಾಪಿಸಿದಂತಹ ರಾಜ್ಯವಾಗಲಿ, ಸಂಪತ್ತಾಗಲಿ ವಂಶಪರಂಪರೆಯಿಂದ ಕೈದಾಟುವುದು ಅವನ ತಂಗಿ ಮತ್ತು ಅವಳ ಮಕ್ಕಳಿಗೆ. ಹೀಗಾಗಿ, ಸಾಮ್ರಾಜ್ಯವನ್ನು ತನ್ನದಾಗಿಸಿಕೊಳ್ಳುವ ಸ್ವಾರ್ಥದಿಂದ ಕಂಸ ತನ್ನ ತಂಗಿಯ ಮಕ್ಕಳನ್ನು ಕೊಂದಿರುವ ಸಾಧ್ಯತೆಗಳಿವೆ. ಶಿಶುಪಾಲನಾದಿಯಾಗಿ ಕೃಷ್ಣನ ಸಂಬಂಧಿಗಳನ್ನು ಗಮನಿಸುತ್ತಾ ಹೋದಂತೆ, ಅವರೆಲ್ಲರೂ ಅಸುರರೇ ಆಗಿದ್ದು ಕೃಷ್ಣನೂ ಅವರದೇ ರಕ್ತ ಸಂಬಂಧಿಯಾಗಿರುತ್ತಾನೆ. ಆದರೆ, ಅವನು ಬಾಲ್ಯದಲ್ಲಿ ಬೆಳೆದಿದ್ದು ಗೊಲ್ಲರ ಹಟ್ಟಿಯಲ್ಲಿಯಾದರೂ, ತನಗೆ ತನ್ನ ರಕ್ತ ಸಂಬಂಧದ ಬಗ್ಗೆ ತಿಳಿದಾಗ, ಯೌವನಕ್ಕೆ ಬಂದು ತನ್ನ ಶಕ್ತಿಯನ್ನು ಬಲಪಡಿಸಿಕೊಳ್ಳುವ ಸಂದರ್ಭಗಳಲ್ಲಿ ಅವರೊಡನೆಯೂ ತನ್ನ ಸಂಬಂಧ ಮುಂದುವರಿಸುತ್ತಾನೆ. ಆರ್ಯರು ಕೃಷ್ಣನಿಗೆಷ್ಟೇ ಜನಿವಾರ ಹಾಕಿ ಅವನನ್ನು ಆರ್ಯದೇವತೆಯನ್ನಾಗಿಸಿದರೂ ಜನ್ಮತಃ ಮತ್ತು ಬೆಳೆದುಬಂದ ಎರಡೂ ರೀತಿಗಳಲ್ಲಿ ಅವನು ಸುರನೂ ಅಲ್ಲ, ಆರ್ಯನೂ ಅಲ್ಲ, ಹೇಳಲೇ ಬೇಕೆಂದು ಗುರುತಿಸಲು ಹೋದರೆ ಅಸುರನಾಗಿಯೇ ಕಾಣುತ್ತಾನೆ, ವಂಶವಾಹಿನಿಯಲ್ಲಿಯೂ, ವರ್ತನೆಗಳಲ್ಲಿಯೂ.

ಅಸುರರು ದೇಹವಾದಿಗಳು

ಅಸುರರು ಭೌತಿಕನೆಲೆಗಟ್ಟಿನಿಂದಲೇ ಬಾಳುವವರು. ಅವರಿಗೆ ಸೂಕ್ಷ್ಮವಾದ ಸೈದ್ಧಾಂತಿಕ ನೆಲೆಗಟ್ಟು ಇಲ್ಲ ಎಂಬ ಮಾತು ಸರಿಯಲ್ಲ ಎಂಬ ವಿಷಯ ಈಗಾಗಲೇ ಪ್ರಸ್ತಾಪವಾಗಿದೆ. ಆದರೆ, ಭಾರತದಲ್ಲಿ ತಂತ್ರಶಾಸ್ತ್ರವು ವೇದಗಳಿಗಿಂತಲೂ ಪ್ರಾಚೀನವಾದುದು ಎಂದು ಸಂಶೋಧನಾಕಾರ ಎಸ್.ಬಿ.ದಾಸ್‌ಗುಪ್ತಾ ಹೇಳುತ್ತಾರೆ. ಶ್ರುತಿಯಲ್ಲಿ ಒಂದು ವೈದಿಕವಾದರೆ, ಮತ್ತೊಂದು ತಾಂತ್ರಿಕ. ಅದು ಅವೈದಿಕವೂ ಹೌದು. ಇದು ಆರ್ಯರ ವೈದಿಕ ಸಿದ್ಧಾಂತಗಳ ಪ್ರಕಟಣೆಯ ಮುನ್ನವೇ ಜನಸಾಮಾನ್ಯರಲ್ಲಿ ಪ್ರಚಲಿತವಿತ್ತು ಎನ್ನುವುದು ನಿರ್ವಿವಾದ. ಅವರಲ್ಲಿ ದೇಹವಾದ ಅಥವಾ ಭೌತವಾದಕ್ಕೆ ಮಹತ್ವವಿತ್ತು, ಮಾನವನ ದೇಹವನ್ನು ಇಡೀ ವಿಶ್ವದ ಪ್ರತಿನಿಧಿಯೆಂಬಂತೆ ನೋಡುವುದು ಅವರ ಸಿದ್ಧಾಂತದ ಒಂದು ಮೂರ್ತವೂ ಆಗಿತ್ತು, ಈಗ ನಾವು ತಂತ್ರಶಾಸ್ತ್ರದ ಸಾಧನೆಯಲ್ಲಿ ದೇಹವನ್ನು ಉಪಯೋಗಿಸುವಂತಹ ಆಚರಣೆ ಮತ್ತು ಸಂಪ್ರದಾಯಗಳನ್ನು ನೋಡುತ್ತಿದ್ದೇವೆಯೋ ಅದಕ್ಕೆ ಮೂಲ ಅವೈದಿಕವಾದಂತಹ, ವೈದಿಕಕ್ಕೂ ಪ್ರಾಚೀನವಾದಂತಹ ತಂತ್ರಶಾಸ್ತ್ರವೇ ಇದ್ದಿರಬಹುದು.

ಪರ್ಷಿಯಾದ ಅವೆಸ್ತದಲ್ಲಿ ಅಹಿರ್ ಎಂಬುದಕ್ಕೂ ಅಸಿರಿಯಾದ ಅಸುರ ಎಂಬುದಕ್ಕೂ ಸಂಬಂಧವಿದೆಯೇ? [illegible] ನೆಲೆಸಿದ್ದಿರಬಹುದೆನ್ನಲಾದ ಅಸುರರು ಯಾರು? ಮತ್ತಷ್ಟು [illegible] ವಾರ.





ಪಲ್ಲಕ್ಕಿಗಳು, ಅಡ್ಡಪಲ್ಲಕ್ಕಿಗಳು ಮತ್ತು ಅವನ್ನು ಹೊರುವ ಬೋವಿಗಳು

ಎಸ್.ಎಂ.ಕೃಷ್ಣ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ 2001ರಲ್ಲಿ ಬೆಂಗಳೂರಿನಲ್ಲಿ 'ಜಾಗತಿಕ ಹೂಡಿಕೆದಾರರ ಸಮಾವೇಶ' ನಡೆಯಿತು. ಆ ಸಂದರ್ಭದಲ್ಲಿ ಸಕ್ರಿಯವಾಗಿದ್ದ 'ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟ'ದ ಕಡೆಯಿಂದ ಅದನ್ನು ಪ್ರತಿಭಟಿಸಲು ತೀರ್ಮಾನಿಸಿದೆವು. ಚಿಕ್ಕಲಾಲ್‌ಬಾಗ್‌ನಿಂದ ಹೊರಡಿಸುವ ಪ್ರತಿಭಟನಾ ಮೆರವಣಿಗೆಯನ್ನು ವಿಧಾನಸೌಧದವರೆಗೆ ತೆಗೆದುಕೊಂಡು ಹೋಗಲು ಪ್ರಯತ್ನಿಸಬೇಕು. ಒಂದು ವೇಳೆ ಬಂಧಿಸುವುದಾದರೆ ಬಂಧಿಸಲಿ ಎಂದು ಸಿದ್ಧರಾಗಿಯೇ ಹೋಗಬೇಕು ಎಂದು ನಿರ್ಣಯ ಮಾಡಲಾಗಿತ್ತು. ಈ ಪ್ರತಿಭಟನೆಗೆ ಅನುಮತಿ ಕೇಳಿ ಅಂದು ಕೇಂದ್ರ ವಿಭಾಗದ ಡಿಸಿಪಿ ಆಗಿದ್ದ ಗೋಪಾಲ್ ಹೊಸೂರ್ ಅವರ ಹತ್ತಿರ ಹೋಗಿದ್ದೆವು. ಅವರು ನಮ್ಮ ಮನವಿಯಲ್ಲಿ ಚಿಕ್ಕ ಲಾಲ್‌ಬಾಗ್‌ನಿಂದ ವಿಧಾನಸೌಧದವರೆಗೆ ಅಂತ ಬರೆದಿದ್ದನ್ನು ನೋಡಿ 'ನೀವು ಸೆಂಟ್ರಲ್ ಜೈಲ್ (ಈಗಿನ ಫ್ರೀಡಂ ಪಾರ್ಕ್) ಪಕ್ಕದಿಂದ ಬನಪ್ಪ ಪಾರ್ಕ್‌ಗೆ ಹೋಗಬೇಕು. ವಿಧಾನಸೌಧಕ್ಕೆ ಅನುಮತಿ ಕೊಡಲ್ಲ' ಎಂದರು. 'ಏನ್ ಸಾರ್, ವಿಧಾನಸೌಧದಲ್ಲಿ ರಾಜ್ಯವನ್ನೇ ಮಾರುವ ಸಮ್ಮೇಳನ ನಡೆಯುತ್ತಿದೆ, ಅದನ್ನು ವಿರೋಧಿಸಲು ಆ ಕಡೆಗೆ ಹೋಗಬೇಕೆಂದರೆ ಅನುಮತಿ ಇಲ್ಲ ಅಂತೀರಿ?' ಅಂತ ಕೇಳಿದೆವು. 'ನಿಮ್ಮ ಪ್ರತಿಭಟನೆ ಯಶಸ್ವಿಯಾಗುವ ಹಾಗೆ ನಾನು ನೋಡಿಕೊಳ್ಳುತ್ತೇನೆ, ಅದೇ ರೀತಿ ವಿಧಾನಸೌಧದಲ್ಲಿ ನಡೆಯುತ್ತಿರುವ ಸಮ್ಮೇಳನವೂ ಯಶಸ್ವಿಯಾಗುವಂತೆ ನೋಡಿಕೊಳ್ಳುತ್ತೇನೆ' ಎಂದು ಹೇಳಿದರು.

ಈ ಎರಡರ ನಡುವೆ (ಹೂಡಿಕೆದಾರರ ಸಮ್ಮೇಳನ ಮತ್ತು ಪ್ರತಿಭಟನೆ) ಅನುಸಂಧಾನ ಸಾಧ್ಯವಿಲ್ಲದ ವೈರುಧ್ಯಗಳಿದ್ದವು. ಆದರೂ ಎರಡೂ ಯಶಸ್ವಿಯಾಗುವುದು ಹೇಗೆ ಸಾಧ್ಯ? ಸಮ್ಮೇಳನ ಅದರ ಪಾಡಿಗದು ನಡೆಯುವುದು; ಪ್ರತಿಭಟನೆಯ ಸುದ್ದಿ ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುವುದು! ಇಷ್ಟೇ. ಸಮ್ಮೇಳನವನ್ನು ತಡೆಯುವ ಸಾಮರ್ಥ್ಯ ಹೇಗೂ ಪ್ರತಿಭಟನೆಗಿರಲಿಲ್ಲ; ಆದರೆ ಅದು ನಡೆಯಬಾರದೆಂಬ ಆಶಯ ಪ್ರತಿಭಟನಾಕಾರರಿಗಿತ್ತು; ಅದು ಈಡೇರಲಿಲ್ಲ.

ಒಬ್ಬ ಪೊಲೀಸ್ ಅಧಿಕಾರಿಯಾಗಿ ಗೋಪಾಲ್ ಹೊಸೂರ್ ಅವರು ಅದಕ್ಕಿಂತ ಹೆಚ್ಚಿನದನ್ನು ಮಾಡಲು ಸಾಧ್ಯವಿರಲಿಲ್ಲ. ಆದರೆ ಸರ್ಕಾರ?

ಸರ್ಕಾರಕ್ಕೆ ಜನಪರವಾಗಿ ನಡೆದುಕೊಳ್ಳಬೇಕೆಂದು ಮನಸ್ಸಿದ್ದರೆ ಅದು ಸಾಧ್ಯವಾಗುತ್ತದೆ; ಸಾಧ್ಯವಾಗಬೇಕು. ಗುಲ್ಬರ್ಗಾ ಜಿಲ್ಲೆಯಲ್ಲಿ 2 ದಿನದ ಹಿಂದೆ 'ಶಾಂತಿಯುತವಾಗಿ' ನಡೆದುಹೋದ ಅಡ್ಡ ಪಲ್ಲಕ್ಕಿಯ ಸಂದರ್ಭದಲ್ಲಿ ಅದನ್ನು ಸಾಧ್ಯವಾಗಿಸುವುದು ಈ ಸರ್ಕಾರದ ಕೈನಲ್ಲಿತ್ತು. ಆದರೆ ಸಾಧ್ಯವಾಗಲಿಲ್ಲ, ಅಡ್ಡ ಪಲ್ಲಕ್ಕಿ ಉತ್ಸವ ನಡೆಯಿತು; ಅದರ ವಿರುದ್ಧದ ಪ್ರತಿಭಟನೆಯೂ ಯಶಸ್ವಿಯಾಯಿತು!

ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ಪಟ್ಟಣದಲ್ಲಿ ಶ್ರೀ ಶ್ರೀ ಶ್ರೀ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ (ಇನ್ನೂ ಏನಾದರೂ ಬಿರುದಾವಳಿಗಳು ಬಿಟ್ಟು ಹೋಗಿದ್ದರೆ ಭಕ್ತಾದಿಗಳು ಕ್ಷಮಿಸಬೇಕು) ಅಡ್ಡಪಲ್ಲಕ್ಕಿ ಉತ್ಸವದ ಕುರಿತು ಒಂದು ವಿವಾದ ಎದ್ದಿತ್ತು. ಮನುಷ್ಯರ ಹೆಗಲ ಮೇಲೆ ಇನ್ನೊಬ್ಬ ಮನುಷ್ಯ ಸಾಗುವ ಅಡ್ಡಪಲ್ಲಕ್ಕಿ ಕೂಡದು ಎಂದು ಅಲ್ಲಿನ ಪ್ರಗತಿಪರ ಸಂಘಟನೆಗಳು ಮಾತ್ರವಲ್ಲದೇ ವಿವಿಧ ಮಠಗಳ 30 ಸ್ವಾಮೀಜಿಗಳೂ ಸಹ ವಿರೋಧಿಸಿದ್ದರು. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ತಮ್ಮ ವಿರೋಧ ಸೂಚಿಸಿದ್ದರು. ಅವರಲ್ಲಿ ಮಹಾಂತ ಮಹಾಚಾರ್ಯ, ಮಾತೆ ಮಹಾದೇವಿ ಮತ್ತು ವೀರಭದ್ರ ಚನ್ನಮಲ್ಲ ಸ್ವಾಮೀಜಿಯಂತಹ ಬಸವ ಪರಂಪರೆಯ ಪ್ರಮುಖರು ಇದ್ದರು.

ಜಿಲ್ಲಾಡಳಿತದ ಕಡೆಯಿಂದ ಮೊದಲು ಅದನ್ನು ತಡೆಯಬಹುದೆಂಬ ಸೂಚನೆ ಬಂದಿತಾದರೂ, ನಂತರ ಅನುಮತಿ ಕೋರಿ ಮುಖ್ಯಮಂತ್ರಿಯವರ ಮನೆಯ ಮುಂದೆ ಪ್ರತಿಭಟನಾ ಪ್ರದರ್ಶನಗಳು ನಡೆದ ಮೇಲೆ ಅದು ಬದಲಾಯಿತು. ಆಗ ತಳೆದ ನಿಲುವು 'ಎರಡನ್ನೂ ಯಶಸ್ವಿಗೊಳಿಸುವ', 'ಪ್ರಜಾತಾಂತ್ರಿಕ' ನಿಲುವು. ಹೀಗಾಗಿ ಸುಮಾರು 20 ಜನ ಸ್ವಾಮೀಜಿಗಳು ನಡೆಸಿದ ಉಪವಾಸ ಸತ್ಯಾಗ್ರಹ ಮತ್ತು ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ನಡೆದ ಮೆರವಣಿಗೆಗಳು ಸುದ್ದಿಯಾಗುವಂತೆ, ಆದರೆ ಅದರಿಂದ ಅಡ್ಡಪಲ್ಲಕ್ಕಿಗೆ ಯಾವ ತೊಂದರೆಯೂ ಆಗದಂತೆ ಸರ್ಕಾರ ನೋಡಿಕೊಂಡಿತು.

ಸರ್ಕಾರದ ಈ ನಿಲುವಿನಲ್ಲಿ ಅಂತಹ ಆಶ್ಚರ್ಯವೇನೂ ಇಲ್ಲ. ಅರಮನೆ ಸಂಸ್ಕೃತಿಗೆ ವಿರೋಧವಿದ್ದಾರೆ ಎಂದು ಹೇಳಲಾಗುತ್ತಿದ್ದ ಸಿದ್ದರಾಮಯ್ಯನವರು ಯಾವ ಮುಜುಗರವೂ ಇಲ್ಲದೇ, ವೈಭವದ ಮೈಸೂರು ದಸರಾದಲ್ಲಿ ಪಾಲ್ಗೊಂಡರು. ಅರಸರ ದಸರಾವನ್ನು ಜನಸಾಮಾನ್ಯರ ದಸರಾವನ್ನಾಗಿಸುವುದು, ಜನಸಂಸ್ಕೃತಿಯ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಮಾಡುವುದು ಇತ್ಯಾದಿ ಮಾತುಗಳು, ಕಾರ್ಯಕ್ರಮಗಳ ಮೂಲಕ ಮೈಸೂರು ದಸರಾವನ್ನು ಸಮರ್ಥಿಸಿಕೊಳ್ಳುವ ಕೆಲಸ ಸಾಕಷ್ಟು ಸಮಯದಿಂದ ನಡೆಯುತ್ತಿದೆ. ಈಗ ಸಿದ್ದರಾಮಯ್ಯನವರ ಆಸ್ಥಾನ ವಿದ್ವಾಂಸರುಗಳು ಅಲ್ಲಲ್ಲಿ ಇಂತಹುದೇ ನುಡಿಗಟ್ಟುಗಳ ಮೂಲಕ ಅಂತಹ ಸಮರ್ಥನೆಗಳನ್ನು ನೀಡುವುದೂ ಆಶ್ಚರ್ಯವೇನೂ ತರಿಸುವುದಿಲ್ಲ.


ಇದ್ದುದರಲ್ಲಿ ದಸರಾ ಕುರಿತಂತೆ ತಾತ್ವಿಕ ನಿಲುವಿಗೆ ಅಂಟಿಕೊಂಡವರು ಜಿ.ಎಚ್.ನಾಯಕರೊಬ್ಬರು ಮಾತ್ರ. ಅದನ್ನು ತಮಗೆ ಪಂಪ ಪ್ರಶಸ್ತಿ ನೀಡುತ್ತಿರುವ ಸರ್ಕಾರದ ಮುಖಕ್ಕೆ ನೇರವಾಗಿ ಹೇಳುವ ಛಾತಿಯನ್ನೂ ಅವರು ತೋರಿದರು. ಅಡ್ಡಪಲ್ಲಕ್ಕಿಗೆ ತೋರಬೇಕಾದ ವಿರೋಧವನ್ನು ಈ ಪಲ್ಲಕ್ಕಿಗೂ ತೋರುವ ಅಗತ್ಯವಿದೆ. ಹಾಗೆ ನೋಡಿದರೆ ಇದು ರಂಭಾಪುರಿ ಮಠದ ಜಗತ್ತಿನ ಗುರುವೊಬ್ಬರು ನಡೆಸಿಕೊಳ್ಳುತ್ತಿರುವ ಉತ್ಸವ ಮಾತ್ರವಲ್ಲ, ಶೃಂಗೇರಿ ಜಗದ್ಗುರುಗಳ (ಬ್ರಾಹ್ಮಣ ಜಗತ್ತು?) ಅಡ್ಡಪಲ್ಲಕ್ಕಿಯೂ ನಡೆಯುತ್ತದೆ. ಆಳ್ವಾಸ್ ನುಡಿಸಿರಿಯೆನ್ನುವ ಸಾಹಿತ್ಯ (?) ಸಮ್ಮೇಳನದ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳುವ ಸಾಹಿತಿವರೇಣ್ಯರನ್ನೂ ಪಲ್ಲಕ್ಕಿಯಲ್ಲಿ ಹೊರುವ ಅನಿಷ್ಟ ಪದ್ಧತಿ ಆರಂಭಗೊಂಡಿದೆ. ಜೀವಪರ ಸಾಹಿತ್ಯವನ್ನು ಸೃಷ್ಟಿಸುವ ಸಾಹಿತಿಗಳು ಅದ್ಹೇಗೆ ಇನ್ನೊಬ್ಬರ ಹೆಗಲ ಮೇಲೆ ಕುಳಿತುಕೊಳ್ಳುತ್ತಾರೆ ಎನ್ನುವ ಪ್ರಶ್ನೆ ಓದುಗರನ್ನಂತೂ ಕಾಡುತ್ತದೆ.

ಈ ರೀತಿ ಮನುಷ್ಯರ ಹೆಗಲ ಮೇಲೆ ಮನುಷ್ಯರು ಕುಳಿತುಕೊಳ್ಳುವ ಆಚರಣೆ ಮೈಸೂರು ದಸರಾದಲ್ಲಿ ಇಲ್ಲ ಎಂಬುದೇನೋ ನಿಜ. ಆದರೆ ಮಿಕ್ಕವಕ್ಕೂ, ಇದಕ್ಕೂ ಇರುವ ವ್ಯತ್ಯಾಸದ ಕಾರಣಕ್ಕೆ ಅದನ್ನೂ ಈ ಚರ್ಚೆಯಲ್ಲಿ ಸೇರಿಸಿಕೊಳ್ಳಬೇಕಿದೆ. ಅದೇನೆಂದರೆ ಮೈಸೂರು ದಸರಾ ಕಾರ್ಯಕ್ರಮ ಸರ್ಕಾರದಿಂದ ನಡೆಯುತ್ತದೆ. ಇಂದಿಗೂ ಸರ್ಕಾರದ ವಶದಲ್ಲಿರುವ ಅರಮನೆಯ ಒಂದು ಭಾಗದಲ್ಲಿ ಒಡೆಯರ್ ವಂಶದ ಹಾಲಿ ರಾಜನ ಖಾಸಗಿ ದರ್ಬಾರ್ ದಸರಾ ಸಂದರ್ಭದಲ್ಲಿ ನಡೆಯುತ್ತದೆ. ಕೆಲವು ವರ್ಷಗಳ ಹಿಂದಿನವರೆಗೂ ಅದು ಅಷ್ಟು ಬಹಿರಂಗವಾಗಿ ಪ್ರಚಾರದಲ್ಲಿರಲಿಲ್ಲ. ಈಗ ಯಾವ ಆಕ್ಷೇಪಣೆಯೂ ಇಲ್ಲದೇ ಪತ್ರಿಕೆಗಳು ಅದರ ಫೋಟೋವನ್ನು ಪ್ರಕಟಿಸುತ್ತದೆ. ಚಾಮುಂಡಿ ಬೆಟ್ಟದ ದೇವತೆಗೆ ಅರಸರು ಮಾಡುತ್ತಿದ್ದರೆಂಬ ನೆಪ ಹೇಳಿ, ಸರ್ಕಾರೀ (ಪೊಲೀಸ್) ಸೆಲ್ಯೂಟ್ ಮಾಡಿದರೆ, ಅದನ್ನೂ ವಿಶೇಷ ಸುದ್ದಿಯೆಂದು ಪತ್ರಿಕೆಗಳು ಬರೆಯುತ್ತವೆ.


ಅರಸೊತ್ತಿಗೆಯು ಊಳಿಗಮಾನ್ಯ ವರ್ಗ ಸಮಾಜದ ಪ್ರತೀಕವಾಗಿದ್ದದ್ದು, ಅದರ ಕುರಿತು ಪ್ರಜಾತಾಂತ್ರಿಕ ಸಮಾಜ ಮತ್ತು ಸರ್ಕಾರವು ಐತಿಹಾಸಿಕ ಕುತೂಹಲದಿಂದಾಚೆ ಇಟ್ಟುಕೊಳ್ಳಬೇಕಾದ ಆಸ್ಥೆ ಏನೂ ಇಲ್ಲ ಎನ್ನುವುದು ನಮ್ಮಲ್ಲಿ ಕಾಮನ್‌ಸೆನ್ಸ್ ಯಾಕಾಗಿಲ್ಲ? ಈ ದೇಶದಲ್ಲಿ 'ಪ್ರಜಾತಂತ್ರ'ವು ಜಾರಿಗೆ ಬಂದದ್ದು ಅರಸೊತ್ತಿಗೆಯನ್ನು ಕೊನೆಗೊಳಿಸಿ ಅಲ್ಲ, ಬದಲಿಗೆ ಅರಸೊತ್ತಿಗೆಯ ತಲೆ ಮೇಲೆ ಕೂತಿದ್ದ ವಸಾಹತುಶಾಹಿ ಆಳ್ವಿಕೆಯನ್ನು ಕೊನೆಗೊಳಿಸಿದ್ದರಿಂದ ಹೀಗಾಗಿದೆಯೇ? ಅಥವಾ ಈ ಪ್ರಜಾತಂತ್ರದ ಮಾದರಿಯಲ್ಲೇ ಸಮಸ್ಯೆ ಅಡಗಿದೆಯೇ ಎಂಬ ಪ್ರಶ್ನೆಯನ್ನಂತೂ ಹಾಕಿಕೊಳ್ಳಬೇಕಾಗುತ್ತದೆ.

ಜನರ ತಲೆ ಮೇಲೆ ಕೂತು ಹೋಗುವ ಸಂಸ್ಕೃತಿ 1947ರ ನಂತರ ಅಥವಾ 1950ರ ನಂತರ ಈ ದೇಶದಲ್ಲಿ ಅಳಿಸಿಹೋಗಿರಲಿಲ್ಲ ಎಂಬುದೇನೋ ಸರಿ. ಆದರೆ ಅಂತಹ ಸಂಸ್ಕೃತಿಯ ಕುರಿತು 60ರ ದಶಕದಿಂದಲೇ ಸ್ಪಷ್ಟವಾದ ವಿರೋಧ ಮೈಸೂರೂ ಸೇರಿದಂತೆ ಹಲವೆಡೆ ಕಂಡು ಬಂದಿತು. ಬಹಿರಂಗವಾಗಿ ಅರಸೊತ್ತಿಗೆಯ ಸಂಸ್ಕೃತಿಯ ಪ್ರದರ್ಶನ, ಮಡೆಸ್ನಾನ ಇತ್ಯಾದಿಗಳು ನಡೆಯುವುದಕ್ಕೆ ಅಲ್ಲಲ್ಲಿ ಕಡಿವಾಣ ಬಿತ್ತು. ಸಾರ್ವಜನಿಕವಾಗಿ ಅದನ್ನು ಸಮರ್ಥಿಸಿಕೊಳ್ಳುವುದು ಅಷ್ಟಾಗಿ ನಡೆಯುತ್ತಿರಲಿಲ್ಲ. ಆದರೆ ಕಳೆದ ಕೆಲವು ವರ್ಷಗಳಿಂದ 'ಕಾನೂನುಬದ್ಧವಾಗಿ' ಅವೆಲ್ಲವನ್ನೂ ನಡೆಸಿಕೊಂಡು ಹೋಗುವುದು ಸಾಧ್ಯವಾಗುತ್ತಿದೆ. ಕುದ್ರೋಳಿ ದೇವಸ್ಥಾನದಲ್ಲಿ ವಿಧವೆಯರು ಪೂಜೆ ಮಾಡಲು ಅವಕಾಶ ಕೊಟ್ಟಿದ್ದನ್ನು ಟಿವಿ ಚಾನೆಲ್‌ಗಳಲ್ಲಿ ಮನುಸ್ಮೃತಿಯನ್ನು ಉಲ್ಲೇಖಿಸಿ ಮಾತನಾಡಲು ಸಾಧ್ಯವಾಗುತ್ತಿದೆ. ಮಾಧ್ಯಮಗಳು 'ಜನರ ನಂಬಿಕೆ'ಗೆ ಕೊಡುತ್ತಿರುವ ಮಹತ್ವ ಸಂವಿಧಾನಕ್ಕೆ ಕೊಡುವ ಮಹತ್ವಕ್ಕಿಂತಲೂ ಹೆಚ್ಚಾಗಿದೆ. ಇನ್ನು ಸಂವಿಧಾನದ ಆಶಯಗಳನ್ನು ಮತ್ತಷ್ಟು ವಿಸ್ತರಿಸಿ, ಸಮಾಜದಲ್ಲಿ ವೈಜ್ಞಾನಿಕತೆ ಮತ್ತು ಪ್ರಜಾತಂತ್ರವನ್ನು ಬೆಳೆಸುವ ಮಾತಂತೂ ದೂರವೇ ಉಳಿಯಿತು.

ಎಲ್ಲಿಯವರೆಗೆ ಪ್ರಜಾತಂತ್ರವನ್ನು ವಿಸ್ತರಿಸುವ ಕೆಲಸ ನಿರಂತರವಾಗಿ ನಡೆಯುವುದಿಲ್ಲವೋ, ಅಲ್ಲಿಯವರೆಗೆ ಪಲ್ಲಕ್ಕಿಗಳು ಮತ್ತು ಅಡ್ಡಪಲ್ಲಕ್ಕಿಗಳು ಹೆಚ್ಚಾಗುತ್ತಲೇ ಹೋಗುತ್ತವೆ. ಅದನ್ನು ಹೊರುವ ಬೋವಿಗಳು ಹಳೆಯ ರೂಪದಲ್ಲಿ, ಹೊಸ ರೂಪಗಳಲ್ಲಿ ಹೆಗಲು ಕೊಡುತ್ತಲೇ ಹೋಗುತ್ತಾರೆ. ಹಾಗಾಗಿ ಜೇವರ್ಗಿಯ ಅಡ್ಡಪಲ್ಲಕ್ಕಿಯನ್ನು ವಿರೋಧಿಸಿದ ಪ್ರಜಾತಂತ್ರವಾದಿಗಳಿಗೆ ನಮ್ಮ ಅಭಿನಂದನೆಗಳು ಸಲ್ಲಬೇಕು; ವಿರೋಧಕ್ಕೆ ಅವಕಾಶ ಕೊಟ್ಟಂತೆ ಮಾಡಿ, ಅಡ್ಡಪಲ್ಲಕ್ಕಿಗೇ ಅಡ್ಡಬಿದ್ದ ಸರ್ಕಾರಕ್ಕೆ ಧಿಕ್ಕಾರ ಹೇಳಬೇಕು.



ಬೂಸಿ ಬಸ್ಯ... ಮೋದಿ! 5



ಕೃಷಿಗೆ ಕರೆಂಟೇ ಇಲ್ಲ

ಯುಪಿಎ ಸರ್ಕಾರದ ಅಂತ್ಯವಿಲ್ಲದ ಹಗರಣಗಳಿಂದ ಜನತೆ ರೋಸತ್ತು ಹೋಗಿರುವ ಸನ್ನಿವೇಶದಲ್ಲಿ ಭರವಸೆಗಳ ಸರದಾರ ಮೋದಿ ದೇಶವನ್ನು ಗ್ಲಾನಿಯಿಂದ ಉದ್ಧರಿಸಬಲ್ಲ ವಿಮೋಚಕನಂತೆ ಕೆಲವರಿಗೆ ಗೋಚರಿಸುತ್ತಿದ್ದರೆ ಅದರಲ್ಲಿ ಅಚ್ಚರಿಯೇನೂ ಇಲ್ಲ, ಯಾಕೆಂದರೆ ಮೋದಿ ಹೆಸರಿಗೆ ಅಂಟಿಸಲಾಗಿರುವ 'ವಿಕಾಸ ಪುರುಷ', 'ಅಭಿವೃದ್ಧಿಯ ಹರಿಕಾರ' ಇತ್ಯಾದಿ ವಿಶೇಷಣಗಳ ಹಿಂದೆ ಒಂದು ವ್ಯವಸ್ಥಿತ ಪ್ರಚಾರಾಂದೋಲನವೆ ಇದೆ. ಆಪ್ಕೊ ಇಂಟರ್‌ನ್ಯಾಷನಲ್ ಎಂಬ ಗುತ್ತಿಗೆ ಜಾಹೀರಾತು ಸಂಸ್ಥೆ ಭಟ್ಟಂಗಿ ಕಾರ್ಪೊರೇಟ್ ಮಾಧ್ಯಮಗಳು ಮತ್ತು ಮೋದಿಯ ವಾಕ್ಚಾತುರ್ಯಗಳ ಅಜೇಯ ಕಾಂಬಿನೇಶನ್‌ನಿಂದಾಗಿ ಇಂಥಾ ಒಂದು ಭ್ರಮೆ ಸೃಷ್ಟಿಯಾಗಿದೆ. ಪ್ರೇಕ್ಷಕರು ಸುಳ್ಳನ್ನು ಸತ್ಯವೆಂದು, ಸತ್ಯವನ್ನು ಸುಳ್ಳೆಂದು ನಂಬುವಂತೆ ಮಾಡುವ ಕಲೆ ಮೋದಿಗೆ ಅತ್ಯದ್ಭುತವಾಗಿ ಸಾಧಿಸಿದೆ. ಹಾವಭಾವಗಳಿಂದ ಕೂಡಿದ ಭಾಷಣಗಳಲ್ಲಿ ಅಂಕಿಸಂಖ್ಯೆಗಳನ್ನು ಉದುರಿಸುತ್ತ ಅಭಿವೃದ್ಧಿಯ ಬಗ್ಗೆ ಮಾತನಾಡತೊಡಗಿದರೆ ಎಂಥವರೂ ಮರುಳಾಗಬೇಕು. ಆತ ಹೇಳುವ ಪ್ರಕಾರ ಗುಜರಾತ್ ರಾಜ್ಯದಷ್ಟು ಪ್ರಗತಿ ಸಾಧಿಸಿರುವ ರಾಜ್ಯ ಇನ್ನೊಂದಿಲ್ಲ, ಆದರೆ ಜನ ಸ್ವಲ್ಪ ಪ್ರಯತ್ನ ಮಾಡಿದರೆ ಸಾಕು, ಸತ್ಯಾಂಶ ತಿಳಿಯುತ್ತದೆ. ಉದಾಹರಣೆಗೆ

• ಕೃಷಿ ವಲಯವನ್ನು ತೆಗೆದುಕೊಂಡರೆ ಸರ್ಕಾರದ ಅಧಿಕೃತ ದಾಖಲೆಗಳೇ ಹೇಳುವಂತೆ ಕಳೆದೊಂದು ದಶಕದಲ್ಲಿ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ಗುಜರಾತಿ ರೈತರ ಸಂಖ್ಯೆ 600 ದಾಟುತ್ತದೆ. ವಾಸ್ತವದಲ್ಲಿ ಈ ಸಂಖ್ಯೆ ಇನ್ನೂ ದೊಡ್ಡದಿರಬಹುದು. ಯಾಕೆಂದರೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗಳಿಗೆ ನೀಡಲಾಗಿರುವ ಅನಧಿಕೃತ ಆದೇಶದಂತೆ ಇಂತಹ ಆತ್ಮಹತ್ಯೆ ಪ್ರಕರಣಗಳನ್ನು ಸಾಧ್ಯವಾದಷ್ಟೂ ದಾಖಲಾಗದಂತೆ ನೋಡಿಕೊಳ್ಳಲಾಗುತ್ತದೆ ಅಥವಾ ಅಪಘಾತವೆಂದು ಮುಚ್ಚಿಹಾಕಲಾಗುತ್ತದೆ ಎಂದು ಮೂಲಗಳು ಹೇಳುತ್ತವೆ. ಇಡೀ ಕೃಷಿ ವಲಯ ತೀವ್ರ ವಿದ್ಯುತ್ ಅಭಾವ ಎದುರಿಸುತ್ತಿದೆ. 2000ನೆ ಇಸವಿಯಲ್ಲಿ ಕೃಷಿಗೆ 43 ಪ್ರತಿಶತದಷ್ಟು ವಿದ್ಯುತ್ತನ್ನು ನೀಡಲಾಗುತ್ತಿತ್ತು, ಆದರೆ ಮುಂದಿನ ಹತ್ತು ವರ್ಷಗಳಲ್ಲಿ ಅದರ ಪ್ರಮಾಣ ಇಳಿಕೆಯಾಗುತ್ತಾ ಸಾಗಿ 2010ರಲ್ಲಿ ಶೇಕಡಾ 21ಕ್ಕೆ ಕುಸಿದಿದೆ. ಇವತ್ತು 3,75,000ಕ್ಕೂ ಅಧಿಕ ರೈತರು ವಿದ್ಯುತ್ ಸಂಪರ್ಕಕ್ಕಾಗಿ ಕಾಯುತ್ತಿರುವ ಪರಿಸ್ಥಿತಿ ಇದೆ.

• ಕೈಗಾರಿಕಾ ವಲಯದಲ್ಲಿ ಆಗಿದೆಯೆನ್ನಲಾದ ಪ್ರಗತಿಯೂ ನಿಜ ಚಿತ್ರಣವನ್ನು ನೀಡುವುದಿಲ್ಲ. ದೇಶದ ಒಟ್ಟು ಉತ್ಪಾದನೆಯಲ್ಲಿ ಗುಜರಾತ್‌ನ ಪಾಲು ಹೆಚ್ಚಾಗಿರುವುದು ನಿಜ. ಆದರೆ ಅದಕ್ಕೆ ರಿಲಾಯನ್ಸ್ ಮತ್ತು ಎಸ್ಸಾರ್ ಕಂಪೆನಿಗಳು ನಡೆಸುತ್ತಿರುವ ಎರಡು ಪೆಟ್ರೋಲಿಯಂ ರಿಫೈನರಿಗಳೆ ಕಾರಣ. ಇವೆರಡನ್ನು ಆಚೆಗಿಟ್ಟಾಗ ಮಿಕ್ಕೆಲ್ಲಾ ಕೈಗಾರಿಕೆಗಳ ಉತ್ಪಾದನೆ ಮೊದಲಿಗಿಂತ ಕಡಿಮೆಯಾಗಿರುವ ಅಸಲಿಯತ್ತು ಬಯಲಾಗುತ್ತದೆ. ಮೋದಿಗೂ ಮೊದಲೆ, 1960-90ರ ನಡುವಿನ ಮೂರು ದಶಕಗಳ ಅವಧಿಯಲ್ಲಿ ರಾಸಾಯನಿಕ, ಪೆಟ್ರೊಕೆಮಿಕಲ್ಸ್, ಔಷಧಿ, ಸಿಮೆಂಟ್, ಕ್ಷೀರೋದ್ಯಮ, ವಜ್ರ, ಆಭರಣ ಮುಂತಾದ ಕ್ಷೇತ್ರಗಳಲ್ಲಿ ಗುಜರಾತ್ ಸಾಧಿಸಿದ ಪ್ರಗತಿ ಇತರ ರಾಜ್ಯಗಳಿಗೆ ಮಾದರಿಯಾಗಿತ್ತು, ಮೋದಿ ಆಡಳಿತದ ಅವಧಿಯಲ್ಲಿ (2001-2010) ವಾರ್ಷಿಕ ಪ್ರಗತಿಯ ದರವನ್ನು ಪರಿಗಣಿಸಿದರೆ ಗುಜರಾತ್ (8.68%) ತೃತೀಯ ಸ್ಥಾನದಲ್ಲಿತ್ತು, 11.81% ಪ್ರಗತಿ ಸಾಧಿಸಿದ ಉತ್ತರಾಖಂಡ ಪ್ರಥಮ ಸ್ಥಾನದಲ್ಲಿದ್ದರೆ ಹರಿಯಾಣಾ (8.95%) ದ್ವಿತೀಯ ಸ್ಥಾನ ಗಳಿಸಿತ್ತು.

• ರಿಸರ್ವ್ ಬ್ಯಾಂಕ್‌ನ ಗವರ್ನರ್ ರಘುರಾಮ್ ರಾಜನ್ ನೇತೃತ್ವದ ಸಮಿತಿ ಇತ್ತೀಚೆಗೆ ಸಲ್ಲಿಸಿರುವ ವರದಿ ಕೂಡ ಮೋದಿಯ ಸುಳ್ಳುಗಳನ್ನು ಬಿಚ್ಚಿಡುತ್ತದೆ. ರಾಜನ್ ವರದಿಯ ಪ್ರಕಾರ ಗುಜರಾತ್ ಅಲ್ಪಾಭಿವೃದ್ಧಿ ಆಗಿರುವ ರಾಜ್ಯಗಳ ಪಟ್ಟಿಯಲ್ಲಿದೆ. ಈ ಪಟ್ಟಿಯಲ್ಲಿರುವ ಇನ್ನಿತರ ರಾಜ್ಯಗಳೆಂದರೆ ಮಣಿಪುರ, ಪಶ್ಚಿಮ ಬಂಗಾಳ, ನಾಗಾಲ್ಯಾಂಡ್, ಆಂಧ್ರ, ಜಮ್ಮು ಕಾಶ್ಮೀರ, ಮಿಜೋರಾಂ, ತ್ರಿಪುರ, ಕರ್ನಾಟಕ, ಸಿಕ್ಕಿಂ ಮತ್ತು ಹಿಮಾಚಲ ಪ್ರದೇಶ. ಹರಿಯಾಣಾ, ಉತ್ತರಾಖಂಡ, ಮಹಾರಾಷ್ಟ್ರ, ಪಂಜಾಬ್, ತಮಿಳ್ನಾಡು, ಕೇರಳ ಮತ್ತು ಗೋವಾ ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿರುವ ರಾಜ್ಯಗಳ ಪಟ್ಟಿಗೆ ಸೇರುತ್ತವೆ.

ಆಧಾರ: *Caravan, <http://indiatoday>, <http://www.rediff.com>, Frontline, <http://razaelahi.blogspot.in/>*

ಸಾಲಗಾರ ರಾಜ್ಯ



ಲೋಕಾಯುಕ್ತರೇ ಇಲ್ಲದಂಥಾ ತಥಾಕಥಿತ 'ವಿಕಾಸ ಪುರುಷ'ನ ರಾಜ್ಯದಲ್ಲಿ ಅಭಿವೃದ್ಧಿಯಾಗಿರುವವರು ಯಾರು? ಇನ್ಯಾರು, ಟಾಟಾ, ಅಂಬಾನಿ, ಮಿತ್ತಲ್, ಅದಾನಿ, ಕರ್ಸನ್ ಪಟೇಲ್‌ರಂತಹ ಕಾರ್ಪೊರೇಟ್ ಧಣಿಗಳು. ಇದು ಹೇಗೆ ಸಾಧ್ಯವಾಯಿತು? ಸಿಎಜಿ ವರದಿಯನ್ನು ಓದಿದರೆ ಸಾಕು, ಅವ್ಯವಹಾರಗಳ ಸರಣಿಯೇ ಬಿಚ್ಚಿಕೊಳ್ಳುತ್ತದೆ.

1) ಲಾರ್ಸನ್ ಅಂಡ್ ಟೂಬ್ರೊ, ಅದಾನಿ, ರಿಲೈಯನ್ಸ್, ಎಸ್ಸಾರ್ ಕಂಪೆನಿಗಳಿಗೆ ಭೂಮಂಜೂರಾತಿ ವಿಷಯದಲ್ಲಿ ಭಾರಿ ಪಕ್ಷಪಾತ ನಡೆದಿದೆ. ಭೂಕಬಳಿಕೆಗಳನ್ನು ಕ್ರಮಬದ್ಧಗೊಳಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ 2006-07ರಿಂದ 2010-11ರ ತನಕದ 1262 ಕಡತಗಳನ್ನು ಒದಗಿಸುವಂತೆ ಸಿಎಜಿ ಹೇಳಿದಾಗ ಕೇವಲ 594 ಕಡತಗಳನ್ನಷ್ಟೆ ನೀಡಲಾಗಿದೆ.

2) ಮುಂದ್ರಾ ಬಂದರು ಮತ್ತು ವಿಶೇಷ ಆರ್ಥಿಕ ವಲಯಗಳಿಗೆಂದು 2005-07ರ ಅವಧಿಯಲ್ಲಿ 5.47 ಕೋಟಿ ಚದರ ಮೀಟರುಗಳಷ್ಟು ಭೂಮಿ ಮಂಜೂರು ಮಾಡಲಾಗಿದೆ. ಆದರೆ 2011ರ ಅಂತ್ಯದವರೆಗೆ ಬಳಸಿದ್ದು ಬರೀ 98.66 ಲಕ್ಷ ಚದರ ಮೀಟರು. ಇದು ಒಪ್ಪಂದದ ನಿಯಮಗಳ ಉಲ್ಲಂಘನೆಯಾಗಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ವಾಸ್ತವದಲ್ಲಿ ಕಂಪೆನಿಗೆ ದಂಡ ವಿಧಿಸಬಹುದಿತ್ತು ಅಥವಾ ಭೂಮಿಯನ್ನು ವಾಪಸ್ಸು ಪಡೆಯಬಹುದಿತ್ತು.

3) 2007ರಲ್ಲಿ ಲಾರ್ಸನ್ ಅಂಡ್ ಟೂಬ್ರೊ ಸಂಸ್ಥೆ ಹಜೀರಾ ಎಂಬಲ್ಲಿ ಸ್ಥಾಪಿಸಲುದ್ದೇಶಿಸಿದ ಎರಡು ಉದ್ದಿಮೆಗಳಿಗೆ 8,53,247 ಚದರ ಮೀಟರು ಭೂಮಿಯನ್ನು ಭಾರಿ ರಿಯಾಯಿತಿ ದರದಲ್ಲಿ ನೀಡಲಾಗಿದೆ. ಜಿಲ್ಲೆಯ ಭೂಮೌಲ್ಯ ಮಾಪನಾ ಸಮಿತಿ ಚ.ಮೀ.ಗೆ ರೂ. 1000/1050ರ ದರ ಸೂಚಿಸಿದ್ದರೆ ರಾಜ್ಯದ ಸಮಿತಿ ಸೂಚಿಸಿದ ದರ ರೂ. 2020. ಅಂತಿಮವಾಗಿ ಸಚಿವ ಸಂಪುಟದ ನಿರ್ಧಾರದಂತೆ ರೂ 700/735ರ ದರದಲ್ಲಿ ಮಾರಾಟ ಮಾಡಲಾಗಿದೆ. ಎರಡು ವರ್ಷಗಳ ನಂತರ ಉದ್ದಿಮೆಗಳ ವಿಸ್ತರಣೆಗಾಗಿ ಸಂಸ್ಥೆ ಇನ್ನೂ 12.14 ಲಕ್ಷ ಚದರ ಮೀಟರುಗಳಿಗೆ ಬೇಡಿಕೆ ಇಟ್ಟಿತು. ಆಗಲೂ ಅದೇ ರೂ. 700ರ ದರದಲ್ಲಿ 5,79,577 ಚದರ ಮೀಟರು ಭೂಮಿ ನೀಡಲು ನಿರ್ಧರಿಸಿದ್ದು ಸಚಿವಸಂಪುಟ. ಹೀಗೆ ಕಡಮೆ ದರದಲ್ಲಿ ಮಾರಾಟ ಮಾಡಿದ್ದರಿಂದ ರಾಜ್ಯದ ಬೊಕ್ಕಸಕ್ಕಾದ ನಷ್ಟ ರೂ. 128.71 ಕೋಟಿ.

4) ಹಜೀರಾದಲ್ಲಿ ಸರ್ಕಾರಿ ಭೂಮಿಯನ್ನು ಅತಿಕ್ರಮಿಸಿದ್ದ ಇನ್ನೂ ಕೆಲವು ಕಾರ್ಪೊರೇಟುಗಳು ತಮ್ಮ ಅತಿಕ್ರಮಣವನ್ನು ಅದೇ ಕಡಮೆ ದರದಲ್ಲಿ ಕ್ರಮಬದ್ಧಗೊಳಿಸಲು ಮುಂದೆ ಬಂದವು. ಎಸ್ಸಾರ್ ಕಂಪೆನಿಗೆ ತೋರಿಸಿದ ಪಕ್ಷಪಾತ ಪರಿಣಾಮವಾಗಿ ಬೊಕ್ಕಸಕ್ಕೆ ರೂ. 238.50 ಕೋಟಿ ನಷ್ಟವಾಗಿದೆ.

5) ಗಾಂಧಿನಗರ ಜಿಲ್ಲೆಯಲ್ಲಿ ರಹೇಜ ಕಾರ್ಪೊರೇಷನ್‌ನ ಐಟಿ ಪಾರ್ಕ್‌ಗಾಗಿ 3,67,581 ಚ.ಮೀ. ಗೋಮಾಳ ಭೂಮಿಯನ್ನು ರೂ. 705ರ ಬದಲಾಗಿ ರೂ. 470ರ ದರದಲ್ಲಿ ನೀಡಿದ್ದರಿಂದಾಗಿ ಖಜಾನೆಗೆ 9.96 ಕೋಟಿ ನಷ್ಟ ಸಂಭವಿಸಿದೆ.

6) ಜಾಮ್‌ನಗರದಲ್ಲಿ ಎಸ್ಸಾರ್ ಕಂಪೆನಿಯ ಉದ್ದೇಶಿತ ವಿದ್ಯುತ್ ಉತ್ಪಾದನಾ ಉದ್ದಿಮೆಗೆ ಹೆದ್ದಾರಿ ಪಕ್ಕದ 30,54,915 ಚ.ಮೀ. ಜಮೀನನ್ನು ನೀಡಲಾಗಿದೆ. ಅಲ್ಲಿ ಸಿಎಜಿ ಸೂಚಿಸಿದ ಚ.ಮೀ.ಗೆ ರೂ. 107ರ ದರಕ್ಕೆ ಬದಲಾಗಿ ರೂ. 80ರ ದರವನ್ನು ನಿಗದಿಪಡಿಸಲಾಗಿದೆ.

7) ಅಹಮದಾಬಾದ್‌ನಿಂದ 30 ಕಿಮೀ ದೂರದಲ್ಲಿ "ಗಿಫ್ಟ್ ಸಿಟಿ" (ಗುಜರಾತ್ ಇಂಟರ್‌ನ್ಯಾಷನಲ್ ಫೈನಾನ್ಸ್ ಟೆಕ್ ಸಿಟಿ) ಹೆಸರಿನ ಒಂದು ಹೈಟೆಕ್ ಉಪನಗರ ನಿರ್ಮಾಣವಾಗುತ್ತಿದೆ. ಈ "ಗಿಫ್ಟ್" ಕಂಪೆನಿಯ ಕಡತಗಳನ್ನು ಆಡಿಟ್‌ಗೆ ಒಪ್ಪಿಸಲಾಗಿಲ್ಲ.

8) 2011-12ರ ಸಾಲಿನಲ್ಲಿ ಗುಜರಾತ್ ಪೆಟ್ರೊನೆಟ್ ಲಿಮಿಟೆಡ್ ಎಂಬ ಸರ್ಕಾರಿ ವಲಯದ ಸಂಸ್ಥೆ ಅನಿಲ ಸಾಗಾಟದ ದರಗಳಲ್ಲಿ ಗೋಲ್‌ಮಾಲ್ ಮಾಡಿ ಅದರ ಗುತ್ತಿಗೆದಾರನಾದ ರಿಲೈಯನ್ಸ್ ಕಂಪೆನಿಗೆ 52.27 ಕೋಟಿಯಷ್ಟು ಅನಗತ್ಯ ಲಾಭ ಬಾಚಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ.

9) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸರ್ಕಾರಿ ವಲಯದ ಉದ್ದಿಮೆಗಳ ಕಳಪೆ ನಿರ್ವಹಣೆಯಿಂದಾಗಿರುವ ಒಟ್ಟು ನಷ್ಟ ರೂ. 4052.37 ಕೋಟಿ; ವ್ಯರ್ಥ ಹೂಡಿಕೆಗಳಿಂದಾದ ನಷ್ಟ 166.77 ಕೋಟಿ.

10) 2011-12ರ ಸಾಲಿನಲ್ಲಿ ಗುಜರಾತ್ ರಾಜ್ಯದ ವಾರ್ಷಿಕ ಆದಾಯದಲ್ಲಿ ರೂ. 11,027 ಕೋಟಿ ಆರ್ಥಿಕ ಕೊರತೆ ಕಂಡುಬಂದಿದೆ. ಇದಕ್ಕೋಸ್ಕರ ಮಾರುಕಟ್ಟೆಯಿಂದ 15,083 ಕೋಟಿ ಸಾಲ ಎತ್ತಲಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇಂತಹ ಸಾಲದಲ್ಲಿ ಶೇಕಡಾ 41ರಷ್ಟು ಹೆಚ್ಚಳವಾಗಿದೆ. ಪರಿಣಾಮವಾಗಿ ಭವಿಷ್ಯದಲ್ಲಿ ಬಡ್ಡಿಯ ಹೊರೆ ವಿಪರೀತವಾಗಲಿದೆ.

ಈಗ ಹೇಳಿ ಈ ಮಾದರಿಯ 'ಅಭಿವೃದ್ಧಿ' ನಮಗೆ ಬೇಕೇ?

ಆಧಾರ - ***Hardnews*: ಏಪ್ರಿಲ್ *2013.***

ನ್ಯಾನೊ ಕಾರ್‌ನೊಳಗೆ ಮೋದಿ



2002ರ ಗಲಭೆಗಳ ನಂತರ ಉದ್ದಿಮೆಗಳು ಗುಜರಾತ್‌ನಲ್ಲಿ ಹೂಡಿಕೆ ಮಾಡಲು ಹಿಂಜರಿಯುತ್ತಿದ್ದ ಕಾಲವೊಂದಿತ್ತು, ಮೋದಿ ಎರಡು ವಿಧಗಳಲ್ಲಿ ಅದನ್ನು ಎದುರಿಸಿದ. ಒಂದು, ವ್ಯವಸ್ಥಿತ ಪ್ಲಾನ್ ಒಂದರ ಮೂಲಕ ಉದ್ಯಮ ಒಕ್ಕೂಟ ಸಿಐಐಯನ್ನು ತಲೆಬಾಗುವಂತೆ ಮಾಡಿದ. ಎರಡು, ಕಾರ್ಪೊರೇಟ್‌ಗಳನ್ನು ಆಕರ್ಷಿಸಲು ನಾನಾ ವಿಧದ ಆಮಿಷಗಳನ್ನೊಡ್ಡಿದ. ಸಿಂಗೂರ್ ರೈತರು ಟಾಟಾನ ಉದ್ದೇಶಿತ ನ್ಯಾನೊ ಕಾರ್ಖಾನೆಗೆ ಭಾರಿ ಪ್ರತಿರೋಧ ತೋರಿದ್ದು ಸರಿಸುಮಾರು ಇದೇ ಕಾಲದಲ್ಲಿ, ಟಾಟಾ ಬೇರೊಂದು ರಾಜ್ಯಕ್ಕಾಗಿ ಹುಡುಕಾಡತೊಡಗಿದ. ಮೋದಿ ಪಾಲಿಗಿದು ರೋಗಿ ಬಯಸಿದ್ದೂ ಹಾಲು, ವೈದ್ಯ ಹೇಳಿದ್ದೂ ಹಾಲು ಎಂಬಂತಾಯಿತು. ಆತ ತಕ್ಷಣ ಟಾಟಾನನ್ನು ಗುಜರಾತ್‌ಗೆ ಬರುವಂತೆ ಆಹ್ವಾನಿಸಿದ. ಆದರೆ ಟಾಟಾ ಹಾಕಿದ ಶರತ್ತುಗಳೇನು ಮತ್ತು ಮೋದಿ ಸರ್ಕಾರ ಹೇಗೆ ಟಾಟಾನಿಗೆ ನಮೋ ನಮಃ ಹೇಳಿ ಜನತೆಗೆ ಪಂಗನಾಮ ಹಾಕಿತೆನ್ನುವ ಸಂಗತಿ ಇದೀಗ ಬಯಲಾಗಿದೆ. ಒಪ್ಪಂದದ ಕಾಗದಪತ್ರಗಳಿಗೆ ಸಹಿ ಹಾಕುವ ಮುನ್ನಾ ದಿನ ಸಚಿವಸಂಪುಟದ ಸಭೆ ನಡೆದಿದೆ. ಆ ಸಭೆಯ ಟಿಪ್ಪಣಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದುಕೊಳ್ಳಲಾಗಿದ್ದು ಅದು ಇಡೀ ಕತೆಯನ್ನು ತೆರೆದಿಡುತ್ತದೆ. ಟಾಟಾ ಹಾಕಿದ್ದ ಡಿಮಾಂಡ್‌ಗಳು ಹೇಗಿವೆ ನೋಡಿ.


- 0.1% ಬಡ್ಡಿ ದರದಲ್ಲಿ 9670 ಕೋಟಿ ರೂಪಾಯಿ ಸಾಲ; ಮರುಪಾವತಿ 20 ವರ್ಷ ಕಳೆದು ಮಾಸಿಕ ಕಂತುಗಳಲ್ಲಿ, (ಗಮನಿಸಿ: 1. ನಿಯಮಾನುಸಾರ ಹೂಡಿಕೆ ಮೊತ್ತದ ರೂ. 2900 ಕೋಟಿ ಶೇಕಡಾ 10ಕ್ಕಿಂತ ಹೆಚ್ಚು ಸಾಲ ಕೊಡುವಂತಿಲ್ಲ. 2. ಪ.ಬಂಗಾಳ ಸರ್ಕಾರದ ಕೊಡುಗೆ ಹೀಗಿತ್ತು: 1% ಬಡ್ಡಿ ದರದಲ್ಲಿ ರೂ 200 ಕೋಟಿ ಸಾಲ; 20 ವರ್ಷ ಕಳೆದು 5 ವಾರ್ಷಿಕ ಕಂತುಗಳಲ್ಲಿ ಮರುಪಾವತಿ).
- ಮಾರಾಟ ತೆರಿಗೆಯಲ್ಲಿ ಭಾರಿ ರಿಯಾಯಿತಿ ಬೇಕು.
- ಸನಂದ್‌ನ ಭೂಮಿಯನ್ನು ತನಗೆ ಮಾರಾಟ ಮಾಡಬೇಕು. ಸ್ಟ್ಯಾಂಪ್, ನೋಂದಣಿ, ವರ್ಗಾವಣೆ ಮುಂತಾದ ಸಕಲ ಶುಲ್ಕಗಳನ್ನೂ ಸರ್ಕಾರವೇ ಭರಿಸಬೇಕು. (ಗಮನಿಸಿ: ಪ.ಬಂಗಾಳ ಸರ್ಕಾರ ಸಿಂಗೂರ್ ಭೂಮಿಯನ್ನು 90 ವರ್ಷಗಳ ಗೇಣಿಗೆ ನೀಡಲಾಗುವುದೆಂದು ಹೇಳಿತ್ತು)
- ಸುಂಕ ಇಲ್ಲದ ಮುಕ್ತ ವಿದ್ಯುತ್ತು.
- ಸ್ಥಳೀಯರಿಗೆ 85% ಉದ್ಯೋಗ ನೀಡಲು ಸಾಧ್ಯವಿಲ್ಲ.
- ಕಾರ್ಖಾನೆಗೆ ಸರ್ಕಾರಿ ವೆಚ್ಚದಲ್ಲಿ ಅನಿಲ ಕೊಳವೆಗಳನ್ನು ಒದಗಿಸಬೇಕು. ದಿನಾ 1.4 ಕೋಟಿ ಲೀಟರ್ ನೀರು ಕೊಡಬೇಕು; ಅಗತ್ಯಬಿದ್ದಾಗ ಕೊಳವೆ ಬಾವಿ ಕೊರೆಯುವ ಹಕ್ಕು ತನ್ನದು.
- ಸನಂದ್ ಹೊರತಾಗಿ ಮತ್ತೂ 100 ಎಕರೆ ಭೂಮಿ ನೀಡಬೇಕು.

ಇವೆಲ್ಲವನ್ನೂ ಮಂದಿಯೂರಿ ಸೈ ಎಂದ ಮೋದಿ, ವಿನಾಯಿತಿ/ರಿಯಾಯಿತಿ ಮೊತ್ತವನ್ನು ರಾಜ್ಯದೊಳಗೆ ಹೂಡಿಕೆ ಮಾಡಬೇಕೆಂಬ ಶರತ್ತನ್ನೂ ವಿಧಿಸಲಿಲ್ಲ.

ಇಂತು ತಮಗೆ ಬೇಕಾಬಿಟ್ಟಿಯಾಗಿ ಭೂಮಿ, ವಿದ್ಯುತ್ತು ನೀರು ಮತ್ತಿತರ ವಿನಾಯಿತಿ/ರಿಯಾಯಿತಿಗಳನ್ನು ವಿತರಿಸಿದ ಮೋದಿಗೆ ಕಾರ್ಪೊರೇಟು ಧಣಿಗಳು 'ವಿಕಾಸ ಪುರುಷ' ಇತ್ಯಾದಿ ಹತ್ತಾರು ಬಿರುದುಗಳನ್ನಿತ್ತು, ಹಾಡಿಹೊಗಳಿ, ವ್ಯಾಪಕ ಪ್ರಚಾರವನ್ನೂ ಒದಗಿಸುವುದರಲ್ಲಿ ಆಶ್ಚರ್ಯವೇನು ಬಂತು. ■

Honey-ಕಷಾಯ

ಶೌಚ-ಮಂದಿರ



ಶೌಚಾಲಯದಲ್ಲಿ
'ನಮೋ' ಜಪ
ಎಲ್ಲಿಗೆ ಬಂತು
ಬಿಜೆಪಿ ಸ್ಥಿತಿ ಪಾಪ!

ವಿಎಚ್‌ಪಿ ಚಿತ್ತ
ಮಂದಿರದತ್ತ
'ನಮೋ' ಚಿತ್ತ
ಶೌಚದತ್ತ..
ಇಬ್ಬರೂ ಸೇರಿ
'ಶೌಚಮಂದಿರ'
ಕಟ್ಟುವತ್ತ!

ಕಾಗದದಲ್ಲಿ
ಶೌಚಾಲಯದ
ಚಿತ್ರ ಬಿಡಿಸಿದ
ರಾಜ್ಯ ಚಡ್ಡಿಗಳು
ಬಯಲಿಗೆ ಓಡಿ
ಕದ್ದು ಶೌಚ ಮಾಡಿ
ಬಂದವಂತಲ್ಲ

■ ಪಿ.ಕೆ. ಮಲ್ಲನಗೌಡರ್

ರಂಭಾಪುರಿ ಚಟ್ಟದ ಸವಾರಿ ನಡದೇ ಹೋಯ್ತಂತಲ್ಲಾ!

ಥೂತ್ತೇರಿ

• ಯಾಹು

ಮೈಸೂರಲ್ಲಿ ಮರುಕಳಿಸಿದ ವೈಭವದಂತೆ ಅಂಬಾರಿಯಲ್ಲಿ ಚಾಮುಂಡಿ ಮೆರವಣಿಗೆ ನಡೆದರೆ, ಜೇವರ್ಗಿಯಲ್ಲಿ ರಂಭಾಪುರಿ ಮೆರವಣಿಗೆ ನಡೆದೇಹೋಯಿತಂತಲ್ಲಾ. ಮೈಸೂರಲ್ಲಿ ಆನೆಗಳು ಚಾಮುಂಡೇಶ್ವರಿ ವಿಗ್ರಹ ಹೊತ್ತು ಸಾಗಿದರೆ, ಜೇವರ್ಗಿಯಲ್ಲಿ ಜೀವಂತ ಜಗದ್ಗುರುವನ್ನು ಜೀವಂತ ಜನರೇ ಹೊತ್ತು ಸಾಗಿಸಿದಂತಲ್ಲಾ. ಈ ಜೀವಂತ ದೇಹದ ಮೆರವಣಿಗೆಗೆ ಬರೋಬರಿ ಮೂರು ಸಾವಿರ ಪೊಲೀಸ್ ಪೇದೆಗಳು ಪಹರೆ ಕಾದುಕಾದು ಸಾಕಾಗಿ, ಈ ಗುರುಗಳ ಮನೆ ಹಾಳಾಗ ಎಂದು, ಶಾಪ ಹಾಕಿ ಕಾಲ್ಕಿತ್ತರಂತಲ್ಲಾ. ನಾಡಿನಲ್ಲಿ ಸಂಭವಿಸುವ ಅನಾಹುತಗಳಿಗೆ ಅಥವಾ ಭದ್ರತೆಗೆ ಬಳಕೆಯಾಗಬೇಕಾಗಿದ್ದ ಪೊಲೀಸರ ಶ್ರಮ, ತಿಕ್ಕಲು ಜಗದ್ಗುರುವೊಬ್ಬನ ಚಟ್ಟದ ಮೆರವಣಿಗೆಗೆ ಬಳಕೆಯಾದುದನ್ನು ಗಮನಿಸಿದ ಬಸವಾನುಯಾಯಿಗಳು, "ಇದು ಮನುಕುಲಕ್ಕೆಸಗಿದ ಅಪಚಾರ" ಎಂದರಂತಲ್ಲಾ. ಇದೆಲ್ಲಕ್ಕಿಂತ ಮಜವಾದ ಸಂಗತಿಯೆಂದರೆ "ಗುರುಗಳು ಅಡ್ಡಪಲ್ಲಕ್ಕಿ ಹೊರಿಸಿಕೊಂಡು ಹೊರಡುವುದೇ ಆದರೆ, ನಾವು ಶ್ವಾನ ಪಲ್ಲಕ್ಕಿ ಹೊರುತ್ತೇವೆ" ಎಂದು ಶಪಥ ಮಾಡಿದ್ದವರು ಸೂಕ್ತ ಶ್ವಾನಗಳಿಗಾಗಿ ಹುಡುಕಿ ಸುಮ್ಮನಾದರಂತಲ್ಲಾ. ಈ ರಂಭಾಪುರಿ ಜಗತ್ತಿನಗುರು ಇಷ್ಟೆಲ್ಲಾ ಪ್ರತಿಭಟನೆ, ಟೀಕೆ ಟಿಪ್ಪಣಿಯನ್ನು ಬದಿಗೊತ್ತಿ ಕೊನೆಗೂ ಅಡ್ಡಪಲ್ಲಕ್ಕಿಗೆ ನುಗ್ಗಿ ವೀರಾಜಮಾನರಾಗಲು ಪ್ರಬಲ ಕಾರಣ ಇವರಿಗೆ ನರ್ಸ್ ರೇಣುಕಾಚಾರಿಯ ಗೆಳೆತನ ಎಂದು ಗುರುಗಳನ್ನು ಕಂಡರಾಗದ ಕುಹಕಿಗಳು ಆಡಿಕೊಂಡರಂತಲ್ಲಾ, ಥೂತ್ತೇರಿ!

***

ಕರ್ನಾಟಕದ ರಾಜಕಾರಣದ ಇತಿಹಾಸದಲ್ಲಿ ಗುಂಡೇಟಿನಿಂದ ಗಾಯಗೊಂಡ ಹುಲಿಯಂತಾಗಿರುವ ರಾಜಕಾರಣಿಯೊಂದು ಮೈಸೂರಿನ ಮೃಗಾಲಯಕ್ಕೆ ಹೋಗಿ, ಅಮೂಲ್ಯ ಎಂಬ ಹುಲಿಯನ್ನು ದತ್ತು ತೆಗೆದುಕೊಂಡು, "ಈ ದತ್ತು ಎಂದರೆ ನನಗೆ ತುಂಬಾ ಇಷ್ಟ, ನಾನೂ ಕೂಡ ದತ್ತು ಹೋದವನೆ" ಎಂದರಂತಲ್ಲಾ. ಇಂತಹ ಹೇಳಿಕೆ ಬೂಕನಕೆರೆ ಎಡೂರಪ್ಪನವರಿಂದಲ್ಲದೆ ಇನ್ನಾರಿಂದ ಸಾಧ್ಯ ಎಂದು ತಿಳಿದುಕೊಂಡು ಅವರನ್ನು ಮಾತನಾಡಿಸಲೆಂದು ಫೋನ್ ಮಾಡಿದರೆ ರಿಂಗಾಯ್ತು,

ರಿಂಗ್ ಟೋನ್: "ಮೈಸೂರು ದಸರಾ, ಎಷ್ಟೊಂದು ಸುಂದರ, ಚೆಲ್ಲಿದೆ ನಗೆಯಾ ಪನ್ನೀರಾ...

"ಹಲೋ ಯಾರು?"

"ನಾನು ಸಾರ್ ಯಾಹು, ಎಲ್ಲಿದ್ದಿರಿ ಸಾರ್?"


"ಮೈಸೂರು ಮೃಗಾಲಯದಲ್ಲಿದ್ದೀನಿ."

"ಅಲ್ಲೇನು ಮಾಡ್ತಾಯಿದ್ದಿರಿ ಸಾರ್?"

"ಪ್ರಾಣಿಗಳನ್ನು ನೋಡ್ತಾಯಿದ್ದೀನಿ."

"ಯಾಕ್ ಸಾರ್. ಮನುಷ್ಯರ ನೋಡಿ ಬೇಜಾರಾಯ್ತಾ?"

"ಬೇಜಾರಾಗಲ್ಲವೇನ್ರಿ ಮತ್ತೆ. ಅವುರಿಗಿಂತ ಕಾಡುಪ್ರಾಣಿಗಳೆ ಎಷ್ಟೋ ವಾಸಿ."



"ಸಾರ್, ದಯವಿಟ್ಟು ಪಾಪ ಆ ಕಾಡುಪ್ರಾಣಿಗಳಿಗೆ ನೀವು ಬಿಟ್ಟು ಬಂದ ಪಾರ್ಟಿ ಜನರ ಹೋಲಿಕೆ ಮಾಡಬೇಡಿ ಸಾರ್. ಆದ್ರುವೆ ಹೈಯಿನ ಅನ್ನೊ ಪ್ರಾಣಿಗೆ ಒಂದು ಪಡೆನ ಹೋಲುಸಬಹುದು."

"ಅದ್ಯಾವುದ್ರಿ ಹೈನ?"

"ಅದನ್ನ ನಮ್ಮಲ್ಲಿ ಕತ್ತೆ ಕಿರುಬ ಅಂತರೆ ಸಾರ್. ಇಂಗ್ಲಿಷಲ್ಲಿ ಹೈನ ಅಂತರೆ. ಒಂಥರ ಕುಹಕವಾಗಿ ನಗಾಡುತ್ತವೆ. ಹುಲಿ ಸಿಂಹಗಳು ಮಾಡಿದ ಬೇಟೆಗಳನ್ನು ಕಿತ್ತುಕೊಂಡು ತಿಂತವೆ ಸಾರ್."

"ಅಷ್ಟೊಂದು ಬಲಿಷ್ಠ ಪ್ರಾಣಿಗಳೆ?"

"ಅಂಗೇನು ಇಲ್ಲ ಸಾರ್. ದವಡೆ ಬಲಿಷ್ಠವಾಗಿದೆ ಅಷ್ಟೆ. ಹುಲಿ ಸಿಂಹ ಚಿರತೆಗಳಷ್ಟು ಓಡಕ್ಕಾಗಲ್ಲ ಆದ್ರಿಂದ ಓಡಿ ಬೇಟೆಯಾಡಿ ಕಡವೆ, ಜಿಂಕೆ, ಕಾಡೆಮ್ಮೆ ಹಿಡಿದಂತಹ ಪ್ರಾಣಿಗಳನ್ನು ಗುಂಪಾಗಿ ನುಗ್ಗಿ ಓಡಿಸಿ ತಾವು ಹೊಟ್ಟೆ ತುಂಬ ತಿಂದುಬುಡ್ತವೆ."

"ಇದೇನ್ರಿ ಈ ಪ್ರಾಣಿಗಳ ಕತೆ. ನನ್ನ ಸುತ್ತ ಇದ್ದ ಜನಗಳ ಕತೆ ಕೇಳಿದಂಗಿದೆಯಲ್ರೀ."

"ನಿಮ್ಮ ಅನುಮಾನ ಹಂಡ್ರೆಡ್ ಪರಸೆಂಟು ನಿಜ ಸಾರ್. ಅವು ತಾವು ಬೇಟೆಯಾಡಕ್ಕಾಗದೆಯಿದ್ರು ಬಲಿಷ್ಠ ಪ್ರಾಣಿಗಳನ್ನು ಪ್ರಚೋದಿಸಿ ಬೇಟೆಯಾಡಂಗೆ ಮಾಡ್ತವೆ. ನಿಮ್ಮ ವಿಷಯದಲ್ಲೂ ಹಾಗೆ ಆಯ್ತು ನೋಡಿ. ಬಲಿಷ್ಠ ನಾಯಕರಾದ ನಿಮ್ಮನ್ನ ಬಿಡ್ತೇಯಿಲ್ಲ ಅವು. ನೀವೇ ಬಿಟ್ಟು ಹೋಗ್ತಿನಿ ಅಂದಾಗ, ಶೋಭ ಅನ್ನೊ ಮಾಯಾಜಿಂಕೆ ಕಳಿಸಿ ಮಾರೀಚನ ತರ ವರ್ತನೆ ಮಾಡಿಸಿ ನಿಮ್ಮನ್ನ ಕೆಡವಿಕೊಂಡ್ರು."

"ನಿಜ ಕಂಡ್ರಿ ಯಾಹು. ನನಿಗೂ ಈಗ ಹಂಗೇ ಅನಿಸ್ತಾಯಿದೆ."

"ನಿಮ್ಮ ಸುತ್ತ ಇದ್ದ ಹೈನಾ ಪಡೆ ತುಂಬ ಅಮಾನುಷವಾದದ್ದು ಸಾರ್. ಈ ಕಾಡುಪ್ರಾಣಿ ಹೈನಾ ಇದೆಯಲ್ಲಾ, ಇದು ಪ್ರಾಣಿ ಇನ್ನು ಸತ್ತೇಯಿರಲ್ಲ, ಆದ್ರು ಕಿತ್ತುಗೊಂಡು ತಿಂತಾಯಿರತ್ತೆ, ಗರ್ಭಿಣಿ ಪ್ರಾಣಿನೂ ಬಿಡಲ್ಲ, ಎಳೆ ಪ್ರಾಣಿನೂ ಬಿಡಲ್ಲ."

"ಅಂಗಾದ್ರೆ ತುಂಬ ಅಮಾನುಷವಾದ ಪ್ರಾಣಿ ಕಣ್ರಿ ಅದು."

"ಹೌದು ಸಾರ್. ನನಗಂತೂ ಅದನ್ನ ನೋಡಿದೇಟಿಗೆ ಸಿಟ್ಟು ಬರುತ್ತೆ."

"ಈ ಮೈಸೂರು ಜೂನಲ್ಲಿದಾವೇನ್ರಿ?"

"ಆಫ್ರಿಕಾ ಖಂಡದಲ್ಲಿವೆ ಸಾರ್. ಅದು ಬಿಟ್ರೆ ಈಚೆಗೆ ನೀವು ಅಧಿಕಾರದಲ್ಲಿದ್ದಾಗ ಮನುಷ್ಯರೂಪದಲ್ಲಿ ನಿಮ್ಮ ಸುತ್ತ ಇದ್ದೊ."

"ನಿಜ ಕಣ್ರಿ ಯಾಹು. ನನಗೆಲ್ಲಾ ಈಗ ಗೊತ್ತಾಗ್ತಾಯಿದೆ."

"ಈಗ ಗೊತ್ತಾಗಿ ಏನು ಪ್ರಯೋಜನ ಸಾರ್. ಎಲ್ಲಾ ಮುಗಿದೋದ ಕತೆ. ಆದ್ರು ನಮಗೊಂದು ಭಯ ಏನಂದ್ರೆ, ನೀವು ಸಾಕಿದ ಹೈನಾಗಳು, ತಿಂದು ತುಂಬಾ ಕೊಬ್ಬಿಕೊಂಡು, ಹೊಸ ಲೀಡ್ರಿಗಾಗಿ ಕಾಯ್ತಾಯಿವೆ. ನೀವು ಮತ್ತೆ ಬಿಜೆಪಿಗೋದ್ರೆ ಹುಷಾರಾಗಿರಬೇಕು ಸಾರ್."

"ಏನು ಹುಷಾರೊ, ಏನು ಕತೆನೊ, ನನಗಂತು ಬೇಜಾರಾಗಿದೆ ಕಣ್ರಿ."

"ಬೇಜಾರೇಕೆ ಬಿಡಿ ಸಾರ್. ಯಾರು ನಿಮ್ಮ ಜೊತೆ ಇಲ್ಲದೆಯಿದ್ರು ಶೋಭ ಇದಾರಲ್ಲ."

"ಪಾಪ ಭಾಳ ಒಳ್ಳೆ ಹೆಣ್ಣುಮಗಳು ಕಂಡ್ರೀ. ನಿಜ ಹೇಳಬೇಕು ಅಂದ್ರೆ ನನ್ನ ಹೆಂಡ್ತಿಗಿಂತ ಒಳ್ಳೆ ವ್ಯಕ್ತಿ ಆಕೆ ಮೈಸೂರಿನ ಮಾವುತರು, ಕಾವಾಡಿಗಳ ಕುಟುಂಬದವರಿಗೆ ಊಟ ಬಡಿಸಿದ್ದು ನೋಡಿದ್ರೆ, ಈಗ್ಲು ಆಕೆ ಮೈಸೂರು ಜಿಲ್ಲಾ ಉಸ್ತುವಾರಿ ಮಂತ್ರಿ ಅನ್ನುಸ್ತಾಯಿದೆ."


"ನಿಜಕ್ಕೂ ಆಕೆ ಮೈಸೂರಿನ ಚಾಮುಂಡಿ ಮಗಳಿದ್ದಂಗೆ ಸಾರ್. ಹಾಗೆ ಬೆಟ್ಟದ ಮೇಲಕ್ಕೆ ಹೋಗಿ, ನಿಮ್ಮ ಓಲ್ಡ್ ಫ್ರೆಂಡ್ ತರ ಒಬ್ಬ, ಬಲಗೈಲಿ ಸಾಬರನ್ನ ಹೆದರಿಸೊ ಮಚ್ಚು ಎಡಗೈಲಿ ಹಲ್ಲಿಲ್ಲದ ಹಾವಿಡಕಂಡು ನಿಂತಿರೊ ಮಹಿಷಾಸುರನ್ನ ನೋಡಿ ಸಾರ್. ಆಗ ನಿಮ್ಮ ಆತ್ಮೀಯನ ಜ್ಞಾಪಕ ಬರಬವುದು."

"ನನ್ನಾತ್ಮೀಯ ಯಾರ್ರೀ?"

"ಇನ್ನಾರು ಸಾರ್; ಈಶ್ವರಪ್ಪ!!"

"ಥೂತ್ತೇರಿ!!!"

ಅಡ್ಡಪಲ್ಲಕ್ಕಿ ವಿರುದ್ಧ ಮಾತನಾಡಲು ಸಿದ್ದಲಿಂಗ ಸ್ವಾಮಿಗೆ ನೈತಿಕ ಹಕ್ಕಿಲ್ಲ



ಪತ್ರಿಕೆಯ ಅಕ್ಟೋಬರ್ 16, 2013ರ ಸಂಚಿಕೆಯಲ್ಲಿ ಪ್ರಕಟಗೊಂಡ 'ರಂಭಾಪುರಿ ಸ್ವಾಮಿಯ ಅಡ್ಡ ಪಲ್ಲಕ್ಕಿ ಕಿತಾಪತಿ' ಲೇಖನ ಓದಿ ತುಂಬಾ ಸಂತೋಷವಾಯಿತು. ಆದರೆ ಅವರ ಅಡ್ಡ ಪಲ್ಲಕ್ಕಿ ಉತ್ಸವವನ್ನು ವಿರೋಧಿಸಿದವರಲ್ಲಿ ಹರಿಹರದ ಪಂಚಮಸಾಲಿ ಜಗದ್ಗುರು ಸಿದ್ದಲಿಂಗಸ್ವಾಮಿಯ ಹೆಸರನ್ನು ಸೇರಿಸಿದ್ದೀರಿ. ಇದು ಅತ್ಯಂತ ಅವಮಾನದ ಸಂಗತಿ. ಏಕೆಂದರೆ ಆ ಸ್ವಾಮಿ ಒಬ್ಬ ಊಸರವಳ್ಳಿ, ಒಬ್ಬ ಫ್ಯಾಸಿಸ್ಟ್, ಸಮಯಸಾಧಕ.

ಷಣ್ಮುಖ ಶಿವಯೋಗಿಗಳ ನೆಲದಲ್ಲಿ ನಿಂತು ಮಾತನಾಡುವ ಯಾವ ನೈತಿಕ ಹಕ್ಕನ್ನೂ ಆ ಸ್ವಾಮಿ ಉಳಿಸಿಕೊಂಡಿಲ್ಲ. ಅವರು ಹಾಗೆ ಮಾತನಾಡಿರುವುದು ಷಣ್ಮುಖ ಶಿವಯೋಗಿಗಳಿಗೆ ಮಾಡಿದ ಅಪಮಾನ. ಈ ಹಿಂದೆ ದಾವಣಗೆರೆಯಲ್ಲಿ ಪ್ರಮೋದ್ ಮುತಾಲಿಕ್ ಎನ್ನುವ ಕೋಮುವಾದಿ ದೇಶ ರಕ್ಷಣೆಗೋಸ್ಕರ ಪರ್ಯಾಯ ಸೈನ್ಯ ಕಟ್ಟುತ್ತೇನೆಂದು ಒಂದು ಸಮಾವೇಶವನ್ನು ಮಾಡಿದ್ದ. ಅದರ ಸಾನಿಧ್ಯ ವಹಿಸಿದ್ದವರು ಇದೇ ಸಿದ್ದಲಿಂಗಸ್ವಾಮಿ. ಅಂದು ಆತ ಹೇಳಿದ್ದೇನೆಂದರೆ "ಧರ್ಮವನ್ನು ರಕ್ಷಿಸಲು ಶ್ರೀ ಕೃಷ್ಣ ಅವತಾರವೆತ್ತಿದ ಹಾಗೆ ಇಂದು ಹಿಂದೂ ಧರ್ಮ ರಕ್ಷಣೆ ಮಾಡಲು ಶ್ರೀ ಕೃಷ್ಣನೇ ಮುತಾಲಿಕ್ ಅವತಾರದಲ್ಲಿ ಬಂದಿದ್ದಾನೆ. ಇಂಥ ಪುಣ್ಯದ ಕೆಲಸಕ್ಕೆ ನಮ್ಮ ಆಶೀರ್ವಾದ ಸದಾ ಇರುತ್ತದೆ" ಎಂದು.

ಬರೀ ಇಷ್ಟೇ ಅಲ್ಲ, ಭಜರಂಗಿಗಳು, ಚಡ್ಡಿಗಳು ಮತ್ತು ಇತರೆ ಕೋತಿ ಬಳಗದವರು ಮಾಡುವ ಎಲ್ಲಾ ಕಾರ್ಯಕ್ರಮಗಳಲ್ಲಿ ಈತ ಭಾಗಿಯಾಗುತ್ತಾರೆ. ಇಂಥವರು ಅವಕಾಶ ಸಿಕ್ಕಾಗ ಪ್ರಗತಿಪರವಾಗಿ ಮಾತನಾಡಲು ಬರುತ್ತಾರೆಂದರೆ ಅದು ಪ್ರಗತಿಪರ ವಿಚಾರಕ್ಕೆ, ವಿಚಾರವಾದಿಗಳಿಗೆ ಮಾಡುವ ಅವಮಾನ. ಇದನ್ನು ಪತ್ರಿಕೆ ಗಮನಿಸಬೇಕು.

ನಿಡುಮಾಮಿಡಿ ಸ್ವಾಮಿಯವರ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಮಡೆಸ್ನಾನದ ವಿರುದ್ಧ ಸಮಾವೇಶ ಮಾಡಿದಾಗ ಅದರಲ್ಲಿ ಭಾಗಿಯಾಗಿದ್ದ ಈ ಸ್ವಾಮಿ, ಸಂವಾದದ ಸಂದರ್ಭದಲ್ಲಿ ನಾನೇ ಈತನಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ:

"ಮುತಾಲಿಕ್ ಜೊತೆಗೆ ವೇದಿಕೆ ಹಂಚಿಕೊಂಡ ನಿಮಗೆ ಇಲ್ಲಿ ಭಾಗವಹಿಸುವ ಯಾವ ನೈತಿಕ ಹಕ್ಕಿದೆ?" ಎಂದು.

ಅದಕ್ಕೆ ಕೊಟ್ಟ ಉತ್ತರ "ನಾವು ಅಲ್ಲಿ ಹೋದಾಗಲು ಇದನ್ನೇ ಹೇಳುತ್ತೇವೆ". ಅದಕ್ಕೆ ನನ್ನ ಮರುಪ್ರಶ್ನೆ "ಅಲ್ಲಿ ನೀವು ಪ್ರಗತಿಯ ವಿರೋಧಿಯಾಗಿ ಮಾತನಾಡಿದಕ್ಕೆ ನನ್ನ ಬಳಿ ಸಾಕ್ಷ್ಯಗಳಿವೆ." ಅದಕ್ಕೆ ಆತ ಉತ್ತರಿಸದೆ ಸುಮ್ಮನೆ ಕೂತಿದ್ದರು. ಅಂದು ನನ್ನ ಪಕ್ಕದಲ್ಲಿ ನಿಮ್ಮ ಪತ್ರಿಕೆ ಬಳಗದ ಚಂದ್ರಶೇಖರ್ ತೋರಣಗಟ್ಟೆ ಕೂಡ ಇದ್ದರು.

ಕೇವಲ ವೈಯಕ್ತಿಕವಾಗಿ ಪಂಚಾಚಾರ್ಯರ ಮೇಲೆ ಇವರಿಗಿರುವ ದ್ವೇಷದಿಂದ ಅಡ್ಡಪಲ್ಲಕ್ಕಿಯನ್ನು ವಿರೋಧಿಸಿದ್ದಾರೆಯೇ ಹೊರತು ತಾತ್ವಿಕವಾಗಿ ಅವರು ಎಂದೂ ಅದರ ವಿರೋಧಿಯಲ್ಲ. ಪೇಜಾವರ ಸ್ವಾಮಿಯ ಜೊತೆಯಲ್ಲಿ ವೇದಿಕೆ ಹಂಚಿಕೊಂಡು ಅವರಿಂದ ಶಭಾಷ್‌ಗಿರಿ ಪಡೆಯುವ ಇವರಿಗೆ ಇದನ್ನು ವಿರೋಧಿಸಿ ಮಾತನಾಡುವ ಯಾವ ನೈತಿಕ ಹಕ್ಕೂ ಇಲ್ಲ. ಮಾನವ ಹಕ್ಕುಗಳ ಉಲ್ಲಂಘನೆ ಮಾಡುವ ಅಡ್ಡಪಲ್ಲಕ್ಕಿ ಉತ್ಸವ ನಿಲ್ಲಲೇಬೇಕು. ಆದರೆ ಆ ಮಾತು ಇಂಥಾ ಪಿಶಾಚಿಗಳ ಬಾಯಿಂದ ಬರಬಾರದು.



- ಪಿ.ಷಣ್ಮುಖಸ್ವಾಮಿ, ದಾವಣಗೆರೆ

ಶಿವಪ್ಪನ ಮಕ್ಕಳು

ಯೋಗೀಶ್ ಮಾಸ್ತರರ ಅಂಕಣದಲ್ಲಿ ಹರಿಹರ ಸುತ ಅಯ್ಯಪ್ಪನ ಕಥೆಯ ಪ್ರಸ್ತಾಪವಿದೆ. ನಮ್ಮ ಪರಶಿವನಿಗೆ ಅವನ ಭಕ್ತರು ಮಕ್ಕಳನ್ನು ಯಾವತ್ತಿಗೂ ಸಹಜ ಸುಸ್ಥಿತಿಯಲ್ಲಿರುವಾಗ ಕರುಣಿಸಲೇ ಇಲ್ಲ.

ಮಣಿಕಂಠನ ಕಥೆಯಂತೆ ಎಲ್ಲರೂ ಕೂಡ ಗೊಂದಲದಲ್ಲಿರುವಾಗಲೇ ಹುಟ್ಟಿದ್ದು. ದಕ್ಷ ಯಜ್ಞದಲ್ಲಿ ಸತ್ತ ದಾಕ್ಷಾಯಣಿಯ ಸಾವಿನ ಕೋಪಕ್ಕೆ ಸಿಟ್ಟುಗೊಂಡಾಗ ವೀರಭದ್ರ ಹುಟ್ಟಿದರೆ, ಸುಬ್ರಹ್ಮಣ್ಯನ ಹುಟ್ಟಿಗೆ ವಿಷ್ಣುವಿನ ಪ್ರತಿರೂಪಿ (ವಿಷ್ಣು ಪುರಾಣದ ಪ್ರಕಾರ) ಯಾದ ಮನ್ಮಥನನ್ನೇ ಮೂರನೇ ಕಣ್ಣು ತೆರೆದು ಸುಡಬೇಕಾಗಿ ಬಂತು. ಅದೇ ರೀತಿ ಲೇಪಿಸುವ ಭಸ್ಮದ ಹೆಸರಲ್ಲಿ ಭಸ್ಮಾಸುರ ಹುಟ್ಟಿದರೆ, ಪತ್ನಿ ಪಾರ್ವತಿಯ ಮಗ ಗಣಪತಿಯ ಹುಟ್ಟೇ ಶಿವನಿಗೆ ಗೊತ್ತಿಲ್ಲದೇ ಹುಟ್ಟಿದ ದಿನವೇ ಆತನನ್ನು ಕೊಲ್ಲಬೇಕಾಗಿ ಬಂತು. ವಿಷ್ಣು ಪಾರ್ವತಿಯೇ ಮೊದಲಾದ ಕಾರಣದಿಂದಾಗಿ ಶಿವನಿಗೆ ಹಲವಾರು ಮಕ್ಕಳಿದ್ದರೂ ಗಂಗಾ ಸುತ ಭೀಷ್ಮನಿಗೆ ಸೋದರ (ದೊಡ್ಡ ದೇವತೆಗಳಿಗೆ ಹೆಣ್ಣು ಸಂತಾನವಿರದು) ಎನಿಸಿಕೊಳ್ಳಲು ಶಿವನ ಇನ್ನೊಂದು ಪತ್ನಿ ಗಂಗಾಮಾತೆಗಾಗಿ ಶಿವ ಮಕ್ಕಳನ್ನೇ ಕರುಣಿಸಲಿಲ್ಲ. ಒಟ್ಟಾರೆ ಭಕ್ತರ ಬಿಂದಾಸ್ ಕಲ್ಪನಾವಿಹಾರಕ್ಕೆ ನಮ್ಮ ಪಾಪದ ಶಿವಪ್ಪ ಬಲಿಪಶು ಅಷ್ಟೆ.

- ಶಶಿ, ಪುತ್ತೂರು

ನಮ್ಮ ನಡುವಿನ ಮೀರ್ ಸಾಧಕರುಗಳೇ ಬ್ರಾಹ್ಮಣ್ಯದ ಮುಖ್ಯ ಪಿಲ್ಲರುಗಳು

'ಬ್ರಾಹ್ಮಣ್ಯ' ಕುರಿತ ವಿಶೇಷಾಂಕ ಒಂದು ಸಂಗ್ರಹ ಯೋಗ್ಯ ಸಂಚಿಕೆಯಾಗಿ ಮೂಡಿಬಂದಿದೆ. ಚಿತ್ರದುರ್ಗದಲ್ಲಿ ನಡೆದ ಈ ಕುರಿತ ವಿಚಾರಗೋಷ್ಠಿಯಲ್ಲಿ ಇದರದೇ ಒಂದು ಮುಖವಾಗಿ ಬೆಳೆಯುತ್ತಿರುವ ನರಹಂತಕ ಮೋದಿಯ ಕುರಿತಾಗಿಯೂ ಜನಜಾಗೃತಿಯಾಗಬೇಕೆಂಬ ಸಭೆಯ ನಿರ್ಧಾರ ತರ್ಕಬದ್ಧವಾಗಿದೆ. ಯಾಕೆಂದರೆ, ವಿಶೇಷ ಸಂಚಿಕೆಯಲ್ಲಿ ಪಾರ್ವತೀಶರು ಬರೆದ 'ವಿಚಾರವಾದಿಗಳಿಗೊಂದು ಬಹಿರಂಗಪತ್ರ'ದ ಕೊನೆಯಲ್ಲಿ ಹೇಳುವಂತೆ ಈ ಸಾಮಾಜಿಕ ದಾರಿದ್ರ್ಯವಾದ ಬ್ರಾಹ್ಮಣ್ಯ ಯಾವತ್ತಿಗೂ "ಅಮರ" ಎನಿಸಿಕೊಳ್ಳಲು ಅತೀಮುಖ್ಯವಾದ ಕಾರಣವೆಂದರೆ ಅದು ಬ್ರಾಹ್ಮಣ್ಯದ ಸಂತ್ರಸ್ತರೆನಿಸಿಕೊಂಡೂ ಸಹ ಬ್ರಾಹ್ಮಣ್ಯದ ಬೌದ್ಧಿಕ ಗುಲಾಮಗಿರಿಯ ಜೀತದಲ್ಲಿರುವ ಮೋದಿ, ಉಮಾಭಾರತಿ, ಅಂಗಾರ, ಸದಾನಂದ ಗೌಡ, ಕವಿ ಸಿದ್ಧಲಿಂಗಯ್ಯ ತರಹದ ಶೂದ್ರ ಕುಡಿಗಳೇ ಎಂಬುದಿಲ್ಲಿ ಗಮನಾರ್ಹ.

ನೇರ ಸಾಂಪ್ರದಾಯಿಕ ವೈರಿಗಳ ವಿರುದ್ಧ ಹೇಗೂ ಹೋರಾಡಬಹುದು. ಆದರೆ ನಮ್ಮೊಳಗೇ ಇರುವ ಇಂತಹ ಮೀರ್ ಸಾಧಕರುಗಳೊಂದಿಗೆ ಹೋರಾಟ ಸುಲಭದ ಮಾತಲ್ಲ. ಬ್ರಾಹ್ಮಣರೆಂದು ಭಟ್ಟ, ಪುರಾಣಿಕ ಎಂದು ದೂರಬಹುದು ಆದರೆ ಗೌಡ, ಅಂಗಾರರನ್ನು ಸ್ಪಷ್ಟತೆ ಇಲ್ಲದೇ ಯಾವ ಆಧಾರದಲ್ಲಿ ಎದುರು ನಿಲ್ಲಲು ಸಾಧ್ಯ? ಮೊನ್ನಿನ ಟಿವಿ9ನ ಕಾರ್ಯಕ್ರಮದಲ್ಲಿ ಬ್ರಾಹ್ಮಣರ ಗೋಮಾಂಸ ಭಕ್ಷಣೆಯನ್ನು ಸುಳ್ಳೆಂದು ಸಮರ್ಥಿಸಲು ಛೂಬಿಟ್ಟದ್ದು ಮೋಹನಗೌಡನೆಂಬ ಶೂದ್ರನನ್ನು. ಇವರು ದಮನಿತ ವರ್ಗದ ಪ್ರತಿನಿಧಿಯಂತೆ ಮಾತಾಡುತ್ತಾ ಪ್ರಗತಿಪರರ ವಿಚಾರಕ್ಕೆ ತಮ್ಮದೇ ಆದ ರೀತಿಯ ಹೊಡೆತವನ್ನು ನೀಡುತ್ತಿರುತ್ತಾರೆ. ಇಂತಹ ಮನೆಮುರುಕರ ವಿರುದ್ಧ ಎಚ್ಚರ ವಹಿಸದೇ ಯಾವ ಬ್ರಾಹ್ಮಣ್ಯ ವಿರೋಧಿ ಚಳವಳಿಯೂ ನಿಷ್ಪ್ರಯೋಜಕ ಅಥವಾ ಪಾರ್ವತೀಶರು ಉಲ್ಲೇಖಿಸಿದಂತೆ 'ಅಮರ'- ಸಾವಿಲ್ಲದ್ದು ಎಂಬುದಂತೂ ದಿಟ.

- ರವಿ, ಪುತ್ತೂರು

'ಅನುಭವದ ವ್ಯಾಪ್ತಿ ಸಿನಿಮಾದಲ್ಲಿ ನೆರವಾಯಿತು'

'ಚಿತ್ರಮಂದಿರದಲ್ಲಿ' ಸಿನಿಮಾ ಹೀರೊ ಶಂಕರ್ ಆರ್ಯನ್



ಸಂದರ್ಶನ

■ ಯೋಗೇಶ್ ಮಾಸ್ಟರ್

ಕನ್ನಡ ಚಿತ್ರರಂಗದಲ್ಲಿ ಹೊಸ ಪ್ರತಿಭೆಗಳ ಆಗಮನ ಯಾವಾಗಲೂ ಸ್ವಾಗತಾರ್ಹವೇ. ಅದರಲ್ಲೂ, ರಂಗಭೂಮಿಯ ಹಿನ್ನೆಲೆ, ಚಿತ್ರರಂಗದ ವಿವಿಧ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಕಲಾವಿದನಿಗೆ ಅಗತ್ಯವಿರುವ ಎಲ್ಲಾ ಪ್ರತಿಭೆಗಳೂ ಮೇಳೈಸಿರುವವರು ತೆರೆಯ ಮೇಲೆ ಬರುತ್ತಿದ್ದಾರೆಂದರೆ ಸು-ಸ್ವಾಗತಾರ್ಹ. ರಂಗಭೂಮಿಯಿಂದ ಕಿರುತೆರೆ, ನಂತರ ಬೆಳ್ಳಿತೆರೆ ಜೊತೆಗೆ ಚಿತ್ರಕಥೆ, ಸಂಭಾಷಣೆಗಳೊಂದಿಗೆ ಚಿತ್ರ ನಿರ್ಮಾಣದ ಇತರ ತಂತ್ರ ಜ್ಞಾನದ ಅರಿವಿನ ಅನುಭವದೊಂದಿಗೆ ಶಂಕರ್ ಆರ್ಯನ್ ಇದೇ ತಿಂಗಳು 25ರಂದು "ಚಿತ್ರಮಂದಿರದಲ್ಲಿ" ಎಂಬ ಸಿನಿಮಾದ ನಾಯಕನಟನಾಗಿ ಚಿತ್ರಮಂದಿರಗಳಿಗೆ ರೀ-ಎಂಟ್ರೀ ಕೊಡುತ್ತಿದ್ದಾರೆ. ಹಲವು ವರ್ಷಗಳ ನಂತರ ತೆರೆಯ ಮೇಲೆ ಕಾಣಿಸಿ ಕೊಳ್ಳುತ್ತಿರುವ ಅವರ ವೃತ್ತಿಜೀವನದ ಬಗ್ಗೆ ಒಂದು ಇಣುಕು ನೋಟ.

ಸಂಜೆಯ ಸಮಯ. ಶಂಕರ್ ಆರ್ಯನ್‌ರವರ ಮನೆಯಲ್ಲಿ, ಮಗು ಶ್ರದ್ಧಾ ಗೌರಿಯೊಂದಿಗೆ ಆಟವಾಡುತ್ತಾ ಕುಳಿತಿರುವ ನಾಯಕ ನಟ, ರಂಗಕರ್ಮಿ, ಸಂಭಾಷಣಾ ಚತುರ ಇತ್ಯಾದಿಗಳ ಕಲಾವಿದ. ನಾನು 'ನನಗೆ ನಿಮ್ಮ ಸಂದರ್ಶನ ಬೇಕು' ಎಂದು ಪ್ರವೇಶಿಸಿದೆ. 'ಎಂಥಾ ಸಂದರ್ಶನ?' ಇದು ಶಂಕರನ ಪ್ರಶ್ನೆ! 'ನಾನು ಪ್ರಶ್ನೆಗಳನ್ನು ಕೇಳುತ್ತಾ ಹೋಗುತ್ತೇನೆ, ತಾವು ಉತ್ತರಿಸಬೇಕು' ಎಂದೆ. ಸರಿ, ಅಲ್ಲಿಂದ ನಮ್ಮ ಮಾತುಕತೆ ಶುರುವಾಯಿತು.

ಯೋಗೇಶ್: ಬಹು ನಿರೀಕ್ಷಿತ ಸಿನಿಮಾ 'ಚಿತ್ರಮಂದಿರದಲ್ಲಿ' ಇದೇ ತಿಂಗಳು 25ರಂದು ತೆರೆ ಕಾಣಲಿದೆ. ವಿಭಿನ್ನ ಬಗೆಯ ಪೋಸ್ಟರ್‌ಗಳನ್ನು ತೋರಿಸುತ್ತಾ ಸಿನಿಮಾ ತೀರಾ ಕುತೂಹಲ ಹುಟ್ಟಿಸಿರುವ ಈ ಚಿತ್ರದಲ್ಲಿ ಅಂತದ್ದೇನಿದೆ?

ಶಂಕರ: ಒಂದು ಸದಭಿರುಚಿಯ ಪ್ರಾಯೋಗಿಕ ಚಿತ್ರವನ್ನು ನಿರ್ಮಿಸುವ ಒಬ್ಬ ನಿರ್ದೇಶಕನ ಪ್ರಾಮಾಣಿಕ ಪ್ರಯತ್ನ. ಈ ಚಿತ್ರದ ನಿರ್ದೇಶಕ ಮತ್ತು ನಿರ್ಮಾಪಕರಾದ ವೆಂಕಟಾಚಲ ಪ್ರಕಾಂಡ ಓದುಗರು. ಬಹುಶಃ ಅವರ ಅಂತಹ ಓದುಗಾರಿಕೆಯಿಂದಲೇ ಇಂತಹ ಚಿತ್ರದ ಕಥೆಯನ್ನು ರಚಿಸಲು ಸಾಧ್ಯವಾಗಿರಬಹುದು. ಈ ಸಿನಿಮಾ, ಕಥೆ ಹೇಳುವ ತಂತ್ರದಿಂದಲೂ ವಿಶಿಷ್ಟ ಎಂದು ನನಗನಿಸುತ್ತದೆ. ಇದರ ಚಿತ್ರಕಥೆಯೇ ನನ್ನನ್ನೂ ಸೆಳೆದಿದ್ದು. ಸಾಮಾನ್ಯವಾಗಿ ಕಲೆ, ಸಾಹಿತ್ಯ, ರಂಗಭೂಮಿ, ಅದರಲ್ಲೂ ಸಿನಿಮಾಗೆ ಆಕರ್ಷಿತರಾದವರು ಎದುರಿಸುವಂತಹ ಪ್ರಾರಂಭಿಕ ಅಡ್ಡಿ ಆತಂಕಗಳು, ನೋವುಗಳು ಇದರಲ್ಲಿ ತೆರೆದುಕೊಳ್ಳುತ್ತವೆ. ರಿಸ್ಕ್ ತೆಗೆದುಕೊಳ್ಳದೇ ಕಂಫರ್ಟ್‌ಜೋನ್‌ನಲ್ಲಿಯೇ ಬದುಕುವ ಮಧ್ಯಮವರ್ಗದ ಮಂದಿ ತೋರಿಸುವ ತಾತ್ಸಾರವೂ ಇದರಲ್ಲಿದೆ. ಆದರೂ ತಮ್ಮ ಆಸಕ್ತಿಯ ನೆಲೆಯಲ್ಲಿಯೇ ಯಶಸ್ಸನ್ನು ಮುಟ್ಟಲು, ಬದುಕನ್ನು ಕಟ್ಟಿಕೊಳ್ಳಲು ಹೆಣಗಾಡುವ ಒಬ್ಬ ಕಥೆಗಾರನ, ಚಿತ್ರ ನಿರ್ದೇಶಕನ ಕಥೆಯಿದು. ಚಿತ್ರಮಂದಿರಕ್ಕೆ ಜನ ಯಾವುದೇ ಕಾರಣಗಳಿಂದ ಬಂದರೂ ಸಿನಿಮಾ ತಯಾರಕರ ಕನಸು ನನಸಾಗುವ ತುಡಿತವೇ ಈ ಚಿತ್ರದ ಕೇಂದ್ರವಸ್ತು. ನೋಡಿ, ಚಿತ್ರಕಥೆಯು ಸಾಮಾನ್ಯ ಚಿತ್ರ ಶೈಲಿಯದ್ದಾಗಿರದು ಎಂಬ ಭರವಸೆ ನನ್ನದು.

ಯೋಗೇಶ್: ಪೋಸ್ಟರ್ ಬಗ್ಗೆ ಹೇಳಲಿಲ್ಲ?

ಶಂಕರ: ಹಾ, ಪೋಸ್ಟರ್ ಡಿಸೈನ್ ಮಾಡಿದವರು ದೇವಿ ಆರ್ಟ್ಸ್. ನಿರ್ದೇಶಕರ ಪರಿಕಲ್ಪನೆ ಮತ್ತು ದೇವಿಯವರ ಸೃಜನಶೀಲತೆಗೆ ಫುಲ್ ಮಾರ್ಕ್ಸ್.

ಯೋಗೇಶ್: ಈ ಚಿತ್ರ ಪ್ರಾರಂಭವಾಗಿ ಬಹಳ ಕಾಲವಾಯಿತು. ಬಿಡುಗಡೆಯಾಗಲು ಯಾಕೆ ಇಷ್ಟು ತಡ?

ಶಂಕರ: ಚಿತ್ರೀಕರಣ ಮಾಡಲೇ ಬಹಳ ಕಾಲ ಹಿಡಿಯಿತು. ಇದರ ನಾಯಕ ನಟನಾದ ನನಗೆ ಬೇರೆ ಬೇರೆ ರೀತಿಗಳಲ್ಲಿ ಕಾಣಿಸಿಕೊಳ್ಳುವ ಒಂದು ಉತ್ತಮ ಅವಕಾಶ ಇದರಲ್ಲಿದೆ. ಪಾತಾಳ ಗರಡಿಯನ್ನು ಹಾಕಿ ಬಾವಿಯಲ್ಲಿ ಬಿದ್ದಿರುವ ವಸ್ತುಗಳನ್ನು ತೆಗೆಯುವ ಒಬ್ಬ ಕೆಳಸ್ತರದ ಕಪ್ಪನೆಯ ಗಟ್ಟಿಮುಟ್ಟಾದ ಯುವಕನ ಪಾತ್ರಕ್ಕೆ ನಾನು ಸುಮಾರು 90 ಕೆಜಿಯಷ್ಟು ನನ್ನ ದೇಹದ ತೂಕವನ್ನು ಹೆಚ್ಚಿಸಿಕೊಳ್ಳಬೇಕಿತ್ತು, ನಂತರ ಕಾಯಿಲೆ ಬೀಳುವ ನಾಯಕ ಉಲ್ಲಾಸ್‌ನ ಪಾತ್ರಕ್ಕೆ ದೇಹದ ತೂಕವನ್ನು ಇಳಿಸಿಕೊಂಡು ಸಣ್ಣಗಾಗಬೇಕಿತ್ತು, ಅದೇರೀತಿ ರೋಮ್ಯಾಂಟಿಕ್ ಹೀರೋ ಆಗಿ ಕಾಣಿಸಿಕೊಳ್ಳುವ ರೀತಿಗೆ ಬೇರೆಯೇ ದೇಹದಾರ್ಢ್ಯತೆ ಬೇಕಿತ್ತು, ನನ್ನ ಮೈ ತೂಕವನ್ನು ಇಳಿಸಿಕೊಳ್ಳುವ ಮತ್ತು ಏರಿಸಿಕೊಳ್ಳುವ ಜೊತೆಗೆ ಬೇರೆ ಬೇರೆ ಸೀಸನ್‌ಗಳಲ್ಲಿ ಶೂಟಿಂಗ್ ಮಾಡಬೇಕಾಗಿದ್ದ ಕಾರಣಗಳಿಂದಲೂ ಸಿನಿಮಾ ನಿರ್ಮಾಣಕ್ಕೆ ಸಮಯ ಬೇಕಾಯ್ತು.

ಯೋಗೇಶ್: ಹಾಗಾದರೆ ಚಿತ್ರದಲ್ಲಿಯೂ, ನಿಮ್ಮ ನಟನೆಯಲ್ಲಿಯೂ ವೈವಿಧ್ಯತೆಯನ್ನು ನಿರೀಕ್ಷೆ ಮಾಡಬಹುದು ಎನ್ನುತ್ತೀರಾ?

ಶಂಕರ: ಖಂಡಿತ. ವೈವಿಧ್ಯತೆ ನೀಡುವುದರಲ್ಲಿ ಖಂಡಿತ ಮೋಸವಿಲ್ಲ, ಇಡೀ ಚಿತ್ರೀಕರಣದ ಹಂತಗಳೇ ವಿವಿಧ ರೀತಿಯ ಅನುಭವಗಳಿಗೆ ಅವಕಾಶವಾಗಿತ್ತು, ವಿವಿಧ ಛಾಯೆಗಳಿರುವ ಇದರಲ್ಲಿನ ಪಾತ್ರಗಳನ್ನು ನಿರ್ವಹಿಸಲು ನನ್ನ ಹಿಂದಿನ ಅನುಭವಗಳು ತುಂಬಾ ಪುಷ್ಟಿ ನೀಡಿತು.

ಯೋಗೇಶ್: ಈ ಸಿನಿಮಾ ಯಾವ ಮಾದರಿಯದು? ಕಲಾತ್ಮಕವೇ, ವಾಣಿಜ್ಯವೇ, ಸೇತು (ಬ್ರಿಜ್) ಚಿತ್ರವೇ?

ಶಂಕರ: ನನಗೆ ಈ ತಾರತಮ್ಯದಲ್ಲಿ ಅಷ್ಟೊಂದು ನಂಬುಗೆಯಿಲ್ಲ. ಒಂದು ಒಳ್ಳೆಯ ಚಿತ್ರವನ್ನು ಮಾಡಬೇಕೆಂಬುದೇ ನಿರ್ದೇಶಕರ ಆಸೆಯಾಗಿತ್ತು, ಅದಕ್ಕೆ ನಾನೂ ಬದ್ಧನಾಗಿದ್ದೇನೆ. ನಿರ್ದೇಶಕರಿಗೆ ರಂಗಭೂಮಿಯ ಒಲವಿರುವುದರಿಂದ, ನನ್ನ ಹಿನ್ನೆಲೆಯೂ ರಂಗಭೂಮಿಯಾದ್ದರಿಂದ ಅವಶ್ಯಕತೆಯಿರುವ ಕಡೆಗಳಲ್ಲಿ ನಾಟಕೀಯತೆಗೂ ಹದವಾದ ಅವಕಾಶವಿದೆ.

ಯೋಗೇಶ್: ಏನವು ಹಿಂದಿನ ಅನುಭವಗಳು? ಜೀವನದ ಅನುಭವಗಳೇ ಅಥವಾ ಕಲಾವಿದನಾಗಿ ನಿಮ್ಮ ಅನುಭವಗಳೇ?

ಶಂಕರ: ಎರಡೂ... ನನಗೆ ಎರಡರಲ್ಲಿ ಭಾರೀ ವ್ಯತ್ಯಾಸವೇನಿಲ್ಲ, ನಾನು ರಂಗಭೂಮಿಯ ಹಿನ್ನೆಲೆಯಿಂದ ಬಂದವನು. ಅದರಲ್ಲೂ ಬಹಳ ಗಂಭೀರವಾದಂತಹ ಅಸಂಗತ ನಾಟಕಗಳಲ್ಲಿ, ಮಾಡುವವರಿಗೆ ಬಹು ಕಷ್ಟವೆನಿಸುವ, ನೋಡುಗರಿಗೆ ಇಷ್ಟವಾಗುವ ವಿಭಿನ್ನಶೈಲಿಯ ರಂಗಪ್ರಯೋಗಗಳಲ್ಲಿ ತೊಡಗಿಸಿಕೊಂಡಿದ್ದವನು. ಮೊಳೆ ಹೊಡೆಯುವುದು, ಪ್ರಾಪರ್ಟಿಗಳನ್ನು ಮಾಡುವುದು, ಕಾಸ್ಟ್ಯೂಮ್‌ಗಳನ್ನು ಮಾಡುವುದು, ನಾಟಕದ ಕೃತಿಯಲ್ಲಿ ಬೇಕಾದಂತ ಎಡಿಟ್ ಮಾಡುವುದು, ಈ ಎಲ್ಲದರ ಜೊತೆಗೆ ವೇದಿಕೆಯ ಮೇಲೆ ಬಂದು ಅಭಿನಯಿಸುವುದು; ಹೀಗೆ ಎಲ್ಲಾ ಪ್ರಕಾರ ಗಳಲ್ಲೂ ತೊಡಗಿಸಿಕೊಂಡಿದ್ದರಿಂದ ಅನುಭವ ಸಹಜ ವಾಗಿಯೇ ನನಗೆ ಟ್ರೆಷರ್ ಆಗಿತ್ತು, ಅಂತಹ ಸಮಯದಲ್ಲಿ ನನ್ನ ಗುರುತಿಸಿ 'ಗುಪ್ತಗಾಮಿನಿ' ಧಾರಾವಾಹಿಯಲ್ಲಿ ಮುಖ್ಯ ವಾದ ಪಾತ್ರಕ್ಕೆ ಸುಂದರಶ್ರೀಯವರು ನನ್ನ ತೊಡಗಿಸಿದರು. ಅಲ್ಲಿಂದ ಕಿರುತೆರೆಯಲ್ಲಿ ನನ್ನ ಅನುಭವದ ಸಂಗ್ರಹಣೆ ಪ್ರಾರಂಭವಾಯಿತು. ಈಗಲೂ ನನ್ನನ್ನು ಜನ 'ಗುಪ್ತಗಾಮಿನಿ'ಯ ಸಾಗರ್ ಎಂದೇ ಗುರುತಿಸುತ್ತಾರೆ. ಆಗ ಅದು ಅಷ್ಟು ಪ್ರಸಿದ್ಧವಾದ ಧಾರಾವಾಹಿ. ಅದರ ನಂತರ ಮತ್ತೊಂದು ಬಗೆಯ ವ್ಯಕ್ತಿತ್ವವನ್ನು ತೋರ್ಪಡಿಸುವಂತಹ 'ಪ್ರೀತಿಯೆಂಬ ಮಾಯೆ', 'ಯಾವ ಜನ್ಮದ ಮೈತ್ರಿ', ಜೊತೆಗೆ 'ನಂದಗೋಕುಲ'ದಲ್ಲಿ ಅಭಿನಯಿಸಿದೆ. ಈ 'ಗುಪ್ತಗಾಮಿನಿ' ಯಲ್ಲಿ ನನ್ನ ಪಾತ್ರವನ್ನು ನೋಡಿಯೇ ಬರಗೂರು ರಾಮಚಂದ್ರಪ್ಪನವರು ನನಗೆ ತಮ್ಮ 'ತಾಯಿ' ಸಿನಿಮಾದಲ್ಲಿ ಒಂದು ಮುಖ್ಯ ಪಾತ್ರವನ್ನು ನೀಡಿದರು. ಅದರ ನಂತರ ರಾಜಶೇಖರ್ ರಾವ್‌ರವರ ನಕ್ಸಲ್ ಕಥಾಹಂದರದಲ್ಲಿ ಪ್ರೇಮಕಥೆಯನ್ನು ಹೇಳುವಂತಹ 'ಒಂದು ಪ್ರೀತಿಯ ಕಥೆ' ಚಿತ್ರದಲ್ಲಿ ಪೂರ್ಣಪ್ರಮಾಣದ ನಾಯಕನಾಗಿ ಅಭಿನಯಿಸಿದೆ. ಆಮೇಲೆ ಕುಮಾರ್ ಗೋವಿಂದ್ 'ತಾಯಿ' ನಂತರದ ತಮ್ಮ ಚಿತ್ರಗಳಲ್ಲಿ ಅನೇಕ ರೀತಿ ತೊಡಗುವಂತೆ ಮಾಡಿದರು. ಅವೆಲ್ಲಾ ನನ್ನ ಅನುಭವ ಬೆಳೆಸಿದವು. ಹೀಗಾಗಿ, ಚಲನಚಿತ್ರವೊಂದಕ್ಕೆ ಕಥೆಯೊಂದನ್ನು ಆಯ್ಕೆ ಮಾಡಿ, ಚಿತ್ರಕಥೆ, ಸಂಭಾಷಣೆಗಳನ್ನು ಬರೆದು, ತಾಂತ್ರಿಕವಾಗಿ ನಿರ್ದೇಶನಗಳನ್ನು ಕೊಡುವವರೆಗೂ ನಾನು ಕೆಲಸ ಮಾಡಬಲ್ಲೆ.

ಯೋಗೇಶ್: ನೀವು ಈಗಾಗಲೇ ಕೆಲವು ಚಿತ್ರಗಳಿಗೆ ಸಂಭಾಷಣೆ, ಚಿತ್ರಕಥೆಗಳನ್ನು ಮಾಡಿಯೂ ಅನುಭವ ಪಡೆದುಕೊಂಡಿದ್ದೀರಿ ಎಂದೂ ನನಗೆ ತಿಳಿದಿದೆ.

ಶಂಕರ: ಮ್, ಅನುಭವಗಳನ್ನು ಪಡೆದುಕೊಂಡೆ ಎನ್ನುವುದಕ್ಕಿಂತ, ನನ್ನ ಅನುಭವಗಳನ್ನು ಅವರೊಡನೆ ಹಂಚಿಕೊಂಡೆ ಎಂದು ಹೇಳಬಹುದು. ನನ್ನ ಸ್ನೇಹಿತರಾದ ಎಂ.ಎಸ್. ಶ್ರೀನಾಥ್‌ರವರು ಹಾಸ್ಯಪ್ರಜ್ಞೆಯುಳ್ಳ ಒಬ್ಬ ಉತ್ತಮ ಕಥೆಗಾರರು ಮತ್ತು ನಿರ್ದೇಶಕರು. ಅವರು ಶರಣ್ ನಾಯಕನಟನಾದ 'ರ್‍ಯಾಂಬೋ' ಚಿತ್ರವನ್ನು ರಚಿಸಿ ನಿರ್ದೇಶಿಸುವಾಗ, ಅವರೇ ಮತ್ತೆ 'ವಿಕ್ಟರಿ' ಸಿನಿಮಾಗೆ ಕಥೆ ಬರೆಯುವಾಗ ಸಿನಿಮಾ ನಿರ್ಮಾಣದ ವಿವಿಧ ಹಂತಗಳಲ್ಲಿ ನೆರವಾಗಿದ್ದೆ. ಅದೇರೀತಿ ಅವರು ಈಗ 'ಪುಂಗಿದಾಸ' ಚಿತ್ರದ ನಿರ್ದೇಶನ ಮಾಡುವಾಗಲೂ ಜೊತೆಗಿದ್ದೇನೆ. ಇದೇ ರೀತಿ ಹಲವಾರು ಜನರೊಂದಿಗೆ ತೆರೆಯ ಹಿಂದೆ ನನ್ನ ಅನುಭವವನ್ನು ಹಂಚಿಕೊಳ್ಳುವುದರಿಂದ ಅನುಭವದ ನನ್ನ ವ್ಯಾಪ್ತಿ ಇನ್ನಷ್ಟು ದೊಡ್ಡದಾಗುತ್ತಿದೆ.

ಯೋಗೇಶ್: 'ಚಿತ್ರಮಂದಿರದಲ್ಲಿ' ಸಿನಿಮಾ ಅಲ್ಲದೆ ಇನ್ನು ಯಾವ ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದೀರಿ?

ಶಂಕರ: ಕಥೆ ಮತ್ತು ನಿರೂಪಣೆಯಲ್ಲಿ 'ಚಿತ್ರಮಂದಿರದಲ್ಲಿ' ಸಿನಿಮಾಗೆ ತದ್ವಿರುದ್ಧವಾದ 'ಸಡಗರ' ಎಂಬ ಚಿತ್ರದಲ್ಲಿ ನಟಿಸಿದ್ದೇನೆ. ಗೋಪಿ ಸೂರ್ಯ ನಿರ್ದೇಶಿಸುತ್ತಿರುವ ಈ ಚಿತ್ರದ ನಿರ್ಮಾಣ ಮಹೇಶ್ ಗೌಡರವರದು. ಇದರಲ್ಲಿ ನನ್ನೊಟ್ಟಿಗೆ ನಾಯಕಿಯಾಗಿರುವವರು ಯಜ್ಞಾಶೆಟ್ಟಿ. ಅದು ನವೆಂಬರ್ ಅಥವಾ ಡಿಸೆಂಬರ್ ಹೊತ್ತಿಗೆ ಬಿಡುಗಡೆಯಾಗುತ್ತಿದೆ. ಹಾಗೇ ದೇವರಾಜ್ ಕುಮಾರ್‌ರವರು ನಿರ್ದೇಶಿಸುತ್ತಿರುವ, ಟಿ ಎ ನಾಗಣ್ಣನವರು ನಿರ್ಮಿಸುತ್ತಿರುವ 'ಪ್ರೀತಿಯಲ್ಲಿ ಶಹಜಾನ್' ಚಿತ್ರವೂ ನವಂಬರ್‌ನಲ್ಲಿ ಸೆಟ್ಟೇರಲಿದೆ.

ಯೋಗೇಶ್: 'ಚಿತ್ರಮಂದಿರ'ದಲ್ಲಿ ಚಿತ್ರದ ಬಿಡುಗಡೆಯ ಬಗ್ಗೆ ನಿಮ್ಮ ಮುಂಬರುವ ಚಿತ್ರಗಳ ನಿರ್ದೇಶಕ ಮತ್ತು ನಿರ್ಮಾಪಕರು ಹೇಗೆ ಸ್ಪಂದಿಸುತ್ತಿದ್ದಾರೆ?

ಶಂಕರ: ಅವರ ಬೆಂಬಲ ಮತ್ತು ಪ್ರೋತ್ಸಾಹ ತುಂಬಾ ಇದೆ. 'ಚಿತ್ರಮಂದಿರ'ದಲ್ಲಿ ಚಿತ್ರದ ಪ್ರಮೋಷನ್‌ಗೆ 'ನನ್ನ ಪ್ರೀತಿಯಲ್ಲಿ ಶಹಜಾನ್' ಚಿತ್ರದ ನಿರ್ದೇಶಕ ದೇವರಾಜ್ ಕುಮಾರ್ ಟೊಂಕ ಕಟ್ಟಿ ನಿಂತಿದ್ದಾರೆ. ತಾವೇ ಸ್ವತಃ ನಿಂತು ಪ್ರಚಾರಕ್ಕೆ ತೊಡಗಿದ್ದಾರೆ. ಅದೇ ರೀತಿ 'ಸಡಗರ' ಚಿತ್ರದ ನಿರ್ದೇಶಕ ಗೋಪಿ ಸೂರ್ಯ ಕೂಡ ಸದಾ ನನ್ನ ಜೊತೆಗಿರುತ್ತಾರೆ. ಅದರಂತೆ ಈ ಚಿತ್ರಗಳ ನಿರ್ಮಾಪಕರಾದ ಟಿ ಎ ನಾಗಣ್ಣ ಮತ್ತು ಮಹೇಶ್ ಗೌಡರೂ ಸದಾ ಜೊತೆಗಿದ್ದು ಬೆಂಬಲಿಸುತ್ತಿದ್ದಾರೆ. ಇಂತವರ ಜೊತೆಗೆ ಇರುವ ನಾನು ನಿಜವಾಗಿ ಅದೃಷ್ಟವಂತ. ಇವರದ್ದು ಒಳ್ಳೆಯ ನಿದರ್ಶನ.


ಯೋಗೇಶ್: ನೀವು ನಿಮ್ಮನ್ನು ಕಿರುತೆರೆಗೆ ಕರೆತಂದ ಸುಂದರಶ್ರೀಯವರನ್ನು, ತೆರೆಗೆ ತಂದ ಬರಗೂರು ರಾಮಚಂದ್ರಪ್ಪ ರಾಜಶೇಖರ್ ರಾವ್‌ರವರನ್ನು, ನೃತ್ಯದಲ್ಲಿ ಅನುಭವ ನೀಡಿದ ಯಜ್ಞಾಶೆಟ್ಟಿ, ಹರ್ಷಾರವರನ್ನು ನೆನೆಸಿಕೊಂಡಿರಿ. ಹಾಗೆಯೇ ನಿಮ್ಮನ್ನು ಈ ಜಗತ್ತಿಗೆ ತಂದ ನಿಮ್ಮ ತಂದೆತಾಯಿಯರ ಬಗ್ಗೆ ಹೇಳಿ. ನಿಮ್ಮ ರಂಗಭೂಮಿಯ ಗುರು ಅಂತ್ಯಾರಾದರೂ ಇದ್ದರೆ ಅವರ ಬಗ್ಗೆ ಹೇಳಿ.


ಶಂಕರ: ನನ್ನ ತಂದೆ ಕರಣ್ ಬಹಾದ್ದೂರ್, ತಾಯಿ ಲಕ್ಷ್ಮಮ್ಮ. ಸಾಮಾನ್ಯ ಶ್ರಮಿಕರಾದ ಕಾರ್ಮಿಕ ಕುಟುಂಬದಿಂದ ಬಂದಿರುವವನು ನಾನು. ಅವರೆಲ್ಲಾ ತಮ್ಮ ಕಷ್ಟ ಕಾರ್ಪಣ್ಯಗಳ ನಡುವೆ ನನ್ನ ಆಸಕ್ತಿಗೆ ದಾರಿ ಮಾಡಿಕೊಟ್ಟಿದ್ದಾರೆ.

ಯೋಗೇಶ್: ನಿಮ್ಮ ರಂಗಭೂಮಿಯ ಹಿನ್ನೆಲೆಯ ಬಗ್ಗೆ ಅಷ್ಟು ಹೇಳಿದಿರಿ. ಯಾವ ತಂಡದಲ್ಲಿದ್ದಿರಿ? ಯಾವ ನಿರ್ದೇಶಕರು ನಿಮಗೆ ಗುರುವಾಗಿದ್ದರು? ಹೇಳಲೇ ಇಲ್ಲ. ಆ ರಂಗಕಲಾವಿದರ ಬಗ್ಗೆ ಯಾಕೆ ಹೇಳಲು ಮರೆತುಬಿಟ್ಟಿರಿ?

ಶಂಕರ: ಈ ಕಡೆಯ ಪ್ರಶ್ನೆ ನಿಜವಾಗಿ ಅತಿಯಾಯ್ತು. ನೀವು ನಿಮ್ಮ ಬಗ್ಗೆ ಏನು ಹೇಳಿಕೊಳ್ಳುವಿರೋ 'ನನ್ನ Son-ದರ್ಶನ' ಅಂತ ಹೇಳಿಕೊಂಡು ಅದನ್ನು ನೀವೇ ಬರೆದುಕೊಳ್ಳಿ......

ಎಂದು ನಗುನಗುತ್ತಾ ಪ್ರೀತಿಯಿಂದಲೇ ನನ್ನನ್ನು ಒಳಗೆ ತಿನ್ನಲೂ, ಕುಡಿಯಲೂ ಕರೆದುಕೊಂಡು ಹೋಗುವುದರೊಂದಿಗೆ ಈ ನಾಯಕ ನಟನ ಸಂದರ್ಶನ ಪೂರ್ಣಗೊಂಡು ಮುಗಿಯಿತು. ■





ರಾಮನ ಇನ್ನೊಂದು ಮುಖ

ಅಕ್ಟೋಬರ್ 23, 2013ರ ಸಂಚಿಕೆಯಲ್ಲಿ ಗೌರಿ ಲಂಕೇಶ್ ಅವರ 'ಕಂಡಹಾಗೆ' ಅಂಕಣದಲ್ಲಿ ಪ್ರಕಟವಾದ 'ಸೀತೆ ಮತ್ತು ಶಂಭೂಕನನ್ನು ಕೊಂದ ರಾಮ' ಎಂಬ ಲೇಖನ ಓದಿ ದಿಗ್ಭ್ರಾಂತನಾದೆ.

ನಾವು ಟೀವಿಯಲ್ಲಿ ನೋಡಿದ ರಾಮಾಯಣ ಧಾರಾವಾಹಿ ಮತ್ತು ಕೇಳಿದ ಕತೆ ಮಾತ್ರ ಗೊತ್ತು. ಆದರೆ ಪತ್ರಿಕೆಯಲ್ಲಿ ಪ್ರಕಟಗೊಂಡ ಕಹಿಯಾದ ಕಟುಸತ್ಯವನ್ನು ಓದಿ 'ರಾಮ ಹೀಗೆಯೂ ಇದ್ದನಾ?' ಎನ್ನುವಂತಾಯಿತು.

ಲಂಕೆಯಲ್ಲಿ ರಾವಣನನ್ನು ಕೊಂದ ನಂತರ ರಾಮನು ತನ್ನ ಮನುಷ್ಯತ್ವವನ್ನೇ ಮರೆತು ತನ್ನ ಧರ್ಮ ಪತ್ನಿ ಸೀತೆಗೆ ಹೇಳಿದ ಮಾತುಗಳು ಯಾರ ಮನಸ್ಸನ್ನೂ ನೋಯಿಸುತ್ತವೆ. ಕೊನೆಗೆ ಸೀತೆಯನ್ನು ಕಾಡಿಗೆ ಕಳಿಸುವ ವಿಷಯದಲ್ಲೂ ರಾಮನಿಗೆ ತನ್ನ ಪತ್ನಿಗಿಂತ ಜನರ ಮಾತೇ ಮುಖ್ಯವಾಗಿದ್ದು ಖಂಡನಾರ್ಹ.

ಇಂದಿನ ಆಧುನಿಕ ಯುಗದಲ್ಲಿಯೂ ಎಲ್ಲ ಯುವತಿಯರು "ನನಗೆ ಶ್ರೀರಾಮಚಂದ್ರನಂತ ಗಂಡ ಬೇಕು" ಎಂದು ಬಯಸುತ್ತಾರೆ. ಆದರೆ ರಾಮನು ಅರ್ಧ ಜೀವನವನ್ನು ತನ್ನ ಉಪಪತ್ನಿಯರೊಂದಿಗೆ ಕಳೆಯುತ್ತಿದ್ದದನ್ನು ಕೇಳಿ ಯಾರಿಗೂ ಅಂತಹ ಗಂಡ ಸಿಗಬಾರದು ಎಂದೆನಿಸುತ್ತದೆ.

ಒಬ್ಬ ಬ್ರಾಹ್ಮಣ ಯುವಕನ ಜೀವ ಉಳಿಸಲು ಒಬ್ಬ ಶೂದ್ರನಾದ ಶಂಭೂಕನನ್ನು ರಾಮ ಕೊಂದಿದ್ದು ನೀಚ ಕೃತ್ಯವಲ್ಲದೆ ಇನ್ನೇನಲ್ಲ.

ಒಟ್ಟಿನಲ್ಲಿ ಹೇಳುವುದಾದರೆ, ರಾಮನ ಒಂದು ಮುಖ ಮಾತ್ರ ನಮಗೆ ಪರಿಚಯವಿತ್ತು, ಆದರೆ ನೀವು ಆತನ ಇನ್ನೊಂದು ಮುಖ ಪರಿಚಯಿಸಿದ್ದು ಒಳ್ಳೆಯ ವಿಷಯವಾಗಿದೆ.

- ಸಂತೋಷಕುಮಾರ. ದಿ.ವಾಲಿ., ರಾಮದುರ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಕ್ಷಿಪ್ರವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 30-10-2013 RNI No. KARKAN2005/14646

ರಾಜು ಬೆಳಗೆರೆಯೆಂಬ ಡೈಲಾಗ್ ರೈಟರ್



"ಇವನಿಗೆ ಯಲಹಂಕ ಯಾವುದು ಶ್ರೀಲಂಕಾ ಯಾವುದು ಅನ್ನೋದು ಸರಿಯಾಗಿ ಗೊತ್ತಿಲ್ಲ. ಗರುಡ ಮಾಲ್ ನೋಡಿ ತಾಜ್ ಮಹಲ್ ಅನ್ನೋತಾನೆ" ಎಂಬ ಡೈಲಾಗ್ 'ಕೇಸ್ ನಂ.18/9' ಚಿತ್ರದ್ದು. ಇದನ್ನು ಬರೆದವರು ರಾಜು ಬೆಳಗೆರೆ.


ಸಂಭಾಷಣಾಕಾರರಾಗಿ ತಮ್ಮ ಮೊದಲ ಸಿನಿಮಾದಲ್ಲೇ ಭರವಸೆ ಮೂಡಿಸಿರುವ ಈ ಯುವಪ್ರತಿಭೆ, ಈಗಾಗಲೇ ಕನ್ನಡ ಚಿತ್ರರಂಗದ ಗಮನ ಸೆಳೆದಿದ್ದಾರೆ. ಈ ನಿಟ್ಟಿನಲ್ಲಿ ಸ್ವತಃ 'ಕೇಸ್ ನಂ.18/9' ಚಿತ್ರದ ನಿರ್ದೇಶಕ ಮಹೇಶ್ ರಾವ್ ತಮ್ಮ ಮುಂದಿನ ಚಿತ್ರ 'ಪ್ರಚಂಡ'ಕ್ಕೂ ರಾಜು ಬೆಳಗೆರೆ ಕೈಲಿ ಮಾತು ಬರೆಸುವುದರ ಜೊತೆಗೆ, ಕಥೆ, ಚಿತ್ರಕಥೆಯನ್ನೂ ಬರೆಸಿದ್ದಾರೆ. ಯೋಗಿ ಮತ್ತು ಸಿಂಧು ಲೋಕನಾಥ್ 'ಪ್ರಚಂಡ' ಚಿತ್ರದ ಹೀರೋ ಹೀರೋಯಿನ್.

ನಾಗಶೇಖರ್ ಮತ್ತು ಯತಿರಾಜ್ ನಾಯಕನಟರಾಗಿ ನಟಿಸುತ್ತಿರುವ 'ತರ್ಲೆ ನನ್ಮಕ್ಳು' ಚಿತ್ರಕ್ಕೂ ರಾಜು ಬೆಳಗೆರೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ಉಮೇಶ್ ಬಣಕಾರ್ ಹೀರೋ ಆಗುತ್ತಿರುವ 'ಮೆಜೆಸ್ಟಿಕ್ ಎಕ್ಸ್‌ಪ್ರೆಸ್' ಚಿತ್ರಕ್ಕೆ ಡೈಲಾಗ್ಸ್ ಜೊತೆಗೆ ಮೊದಲ ಬಾರಿಗೆ ಹಾಡುಗಳನ್ನೂ ಬರೆದಿದ್ದಾರೆ. ಅದೇ ರೀತಿ, ವಿಜಯ್ ರಾಘವೇಂದ್ರ ಅಭಿನಯಿಸುತ್ತಿರುವ 'ಅಮರ್ ಅಕ್ಬರ್ ಅಂತೋಣಿ'ಗೆ ಸಂಭಾಷಣೆ- ಹಾಡುಗಳು, ಕಾಂತಾ ಕನ್ನಲಿ ನಿರ್ದೇಶನದಲ್ಲಿ ಶರಣ್ ಅಭಿನಯಿಸುತ್ತಿರುವ ಹೆಸರಿಡದ ಚಿತ್ರಕ್ಕೆ ಸಂಭಾಷಣೆ-ಹಾಡುಗಳನ್ನೂ ಬರೆದಿದ್ದಾರೆ.

ಭವಿಷ್ಯದಲ್ಲಿ ಉತ್ತಮ ಸಿನಿಮಾ ಬರಹಗಾರನಾಗುವುದರ ಜೊತೆಗೆ, ಒಳ್ಳೆಯ ನಿರ್ದೇಶಕನೂ ಆಗಬೇಕೆಂಬ ಆಕಾಂಕ್ಷೆ ಹೊಂದಿರುವ ರಾಜು ಬೆಳಗೆರೆ ಈಗಾಗಲೇ 'ಹನಿ ಹನಿ', 'ಷಡ್ಯಂತ್ರ', 'ಕಾಶಿ ಫ್ರಂ ವಿಲೇಜ್' ಚಿತ್ರಗಳಿಗೆ ಸಹಾಯಕ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಹಾಗೇನೆ, ತಾವು ಸಂಭಾಷಣೆ ಬರೆದ ಚಿತ್ರಗಳ ಚಿತ್ರೀಕರಣದ ವೇಳೆ ಸ್ಪಾಟ್‌ನಲ್ಲಿದ್ದುಕೊಂಡು ನಿರ್ದೇಶನದ ಸೂಕ್ಷ್ಮಗಳನ್ನು ಇನ್ನಷ್ಟು ಅರಿಯುವ ಹಂಬಲ ಹೊಂದಿದ್ದಾರೆ. ರಾಜು ಬೆಳಗೆರೆಯಂಥ ಯುವ ಪ್ರತಿಭೆಗಳಿಂದ ಕನ್ನಡ ಚಿತ್ರಸಂಭಾಷಣೆ ಹಾಗೂ ಹಾಡುಗಳು ಮತ್ತಷ್ಟು ಹೊಸತನ ಕಾಣಲಿ ಎಂದು ಈ ಮೂಲಕ ಹಾರೈಕೆ.

ಯಶ್‌ಗೆ ಧಮಕಿ ಹಾಕಿದ ದರ್ಶನ್ ಹುಡುಗರು





ದರ್ಶನ್ ಹುಡುಗರು ಯಶ್‌ಗೆ ಧಮಕಿ ಹಾಕಿದ್ದಾರೆ ಅನ್ನುವ ಸುದ್ದಿ ಗಾಂಧಿನಗರದೊಳಗೆ ಹಬ್ಬಿದೆ. ಇದಕ್ಕೆ ಕಾರಣ ದರ್ಶನ್ ಬ್ಯುಸಿ ಇದ್ದಾಗ ಆತ ಮಾಡಲಾಗದ ಪಾತ್ರಗಳನ್ನು ಯಶ್ ಮಾಡಬಹುದು ಎಂಬ ಅಘೋಷಿತ ಸಿದ್ಧಾಂತ ಗಾಂಧಿನಗರದಲ್ಲಿ ಈಗ ರೂಢಿಗೆ ಬಂದಿರುವುದು.


ದರ್ಶನ್ ಹಾಗೂ ಯಶ್ ಇಬ್ಬರೂ ಮೈಸೂರು ಮೂಲದವರಾಗಿದ್ದು, ಇಬ್ಬರ ಭಾಷೆ, ಇಮೇಜು ಹೆಚ್ಚುಕಡಿಮೆ ಒಂದೇ ಆಗಿದೆ. ಜೊತೆಗೆ 'ಕಿರಾತಕ', 'ಡ್ರಾಮ', 'ಗೂಗ್ಲಿ' ಚಿತ್ರಗಳಲ್ಲಿ ಯಶ್ ನಿರ್ವಹಿಸಿದ ಪಾತ್ರಗಳು ಇಂತಹ ಹೋಲಿಕೆಗೆ ಎಡೆಮಾಡಿಕೊಡುತ್ತದೆ. ಹೀಗಾಗಿ ದರ್ಶನ್ ಕೈಗೆಟುಕದ ಸಂದರ್ಭದಲ್ಲಿ ಗಾಂಧಿನಗರಿಗರ ಕಣ್ಣು ಸಹಜವಾಗಿ ಯಶ್ ಕಡೆ ಹರಿಯುತ್ತಿದೆ.




ಇದಕ್ಕೆ ಸರಿಯಾಗಿ ಇತ್ತೀಚೆಗೆ ಯಶ್ ಕೂಡ "ದರ್ಶನ್ ಮಾಡಬಹುದಾದ ಪಾತ್ರಗಳನ್ನು ನಾನೂ ಮಾಡಬಲ್ಲೆ" ಅಂತ ಹೇಳಿದ್ದಾರೆ. ಯಾವಾಗ ಯಶ್ ಹೀಗೆ ಹೇಳಿದರೋ ದರ್ಶನ್ ಸುತ್ತಲಿನವರಿಗೆ ರೇಗಿಹೋಗಿದೆ. ದರ್ಶನ್ ತಮ್ಮ ದಿನಕರ್, ಕೆಲವು ಹುಡುಗರ ಗುಂಪು ಕಟ್ಟಿಕೊಂಡು ಯಶ್‌ರನ್ನು ಹುಡುಕಿಕೊಂಡು ಹೋಗಿ "ಯಂಗೈತೆ ಮೈಗ? ದರ್ಶನ್ ಮಾಡೋ ಕ್ಯಾರೆಕ್ಟರ್‌ಗಳನ್ನು ನೀನ್ ಮಾಡ್ತೀಯ? ನೀನು ದರ್ಶನ್‌ಗೆ ಕಾಂಪಿಟೇಟರ್ರಾ?" ಎಂಬರ್ಥದಲ್ಲಿ ಆವಾಜ್ ಹಾಕಿದ್ದಾರೆ ಎಂದು ಅಲ್ಲಲ್ಲಿ ಕೇಳಿಬರುತ್ತಿದೆ. ಆರಂಭದಲ್ಲಿ 'ಮೆಜೆಸ್ಟಿಕ್' ಚಿತ್ರದಲ್ಲಿ ಗೆದ್ದಿದ್ದ ದರ್ಶನ್ ಆ ಭರದಲ್ಲಿ ಒಂದರಹಿಂದೆ ಒಂದರಂತೆ ಅನೇಕ ಚಿತ್ರಗಳನ್ನು ಒಪ್ಪಿಕೊಂಡಿದ್ದರು. ಅವರು ನಟಿಸಿದ್ದ 'ಲಾಲಿಹಾಡು' ಹಿಟ್ ಆಯಿತು. ಆದರೆ 'ನನ್ನ ಪ್ರೀತಿಯ ರಾಮು' ಚಿತ್ರವನ್ನು ಜನ ನೋಡಲಿಲ್ಲ. ಇದು ಹೀಗೆ ಸಾಗಿ ಕೊನೆಗೆ ದರ್ಶನ್ ತಮ್ಮ ಮಾರ್ಕೆಟನ್ನೇ ಕಳೆದುಕೊಂಡಿದ್ದರು. ದರ್ಶನ್‌ಗೆ ಮಾರ್ಕೆಟ್ಟೇ ಇಲ್ಲ ಎಂಬ ಸ್ಥಿತಿ ಎದುರಾಗಿದ್ದಾಗ ಸುದೀಪ್ ತುಂಬಾ ಬ್ಯುಸಿ ಆಗಿದ್ದರು. ಆಗ ಸುದೀಪ್ ಡೇಟ್ಸ್ ಸಿಗದ ಜನರ ಗಮನ ಇದೇ ದರ್ಶನ್ ಕಡೆ ವಾಲಿತ್ತು. ಕೊನೆಗೆ ಅದೇ ದರ್ಶನ್ ಕೈ ಹಿಡಿದಿದ್ದು. ಅಂದರೆ ಸುದೀಪ್ ಮಾಡಲಾಗದಿದ್ದ ಸಿನಿಮಾಗಳೆಲ್ಲ ದರ್ಶನ್ ಕಡೆ ತಿರುಗಿದ್ದವು. ಆ ಟೈಮಿಗೆ ಸರಿಯಾಗಿ 'ಕಲಾಸಿಪಾಳ್ಯ', 'ಗಜ' ತರಹದ ಸಿನಿಮಾಗಳು ಹಿಟ್ ಆಗಿದ್ದರಿಂದ ದರ್ಶನ್ ಬಚಾವಾದರು.

ಈಗ ದರ್ಶನ್ ಮಾಡಲಾಗದ ಸಿನಿಮಾಗಳು ಯಶ್ ಕಡೆ ತಿರುಗುತ್ತಿರುವುದರಿಂದ ದರ್ಶನ್ ಹುಡುಗರು ಕೋಪ ಮಾಡಿಕೊಳ್ಳುವುದರಲ್ಲಿ ಅರ್ಥ ಇಲ್ಲ. ಎಲ್ಲಾ ಸಿನಿಮಾಗಳಲ್ಲೂ ದರ್ಶನ್ ಒಬ್ಬರೇ ನಟಿಸಲು ಸಾಧ್ಯವಿಲ್ಲ. ಹಾಗಂತ ಯಶ್ ಎಲ್ಲಿಂದಲೋ ಓಡಿಬಂದವರಲ್ಲ, ಮೈಸೂರಿನ ಅಪ್ಪಟ ಕನ್ನಡದ ಹುಡುಗ. ದರ್ಶನ್, ಸುದೀಪ್, ಪುನೀತ್‌ಗಿರುವಷ್ಟೇ ಸಮಾನ ಹಕ್ಕು ಗಾಂಧಿನಗರದಲ್ಲಿರಲು ಯಶ್‌ಗೂ ಇದೆ ಅನ್ನುವುದನ್ನು ಎಲ್ಲರೂ ಅರಿತರೆ ಕ್ಷೇಮ.

ತುಳುಚಿತ್ರಗಳ ಸುಗ್ಗಿಕಾಲ



ಯಾವಾಗ 'ಒರಿಯರ್ದೊರಿ ಅಸಲ್' ಬರೋಬ್ಬರಿ ನೂರಾ ನಲವತ್ತೈದು ದಿನ ಓಡಿತೋ, ಭರ್ಜರಿ ಲಾಭ ಮಾಡಿತೋ ತುಳು ಚಿತ್ರರಂಗಕ್ಕೆ ಹೊಸ ಚೈತನ್ಯ ಬಂದಿತು. ಆ ದೆಸೆಯಲ್ಲಿ ಆರಂಭವಾದ 'ರಿಕ್ಷಾ ಡ್ರೈವರ್' ಈಗಾಗಲೇ ಬಿಡುಗಡೆಯಾದ ಎಲ್ಲಾ ಕಡೆ ಹೌಸ್ ಫುಲ್ ಪ್ರದರ್ಶನ ಕಾಣುತ್ತಿದೆ. ನವರಾತ್ರಿಯ ಪ್ರಯುಕ್ತ ಕೆಲಕಾಲ ಕಲೆಕ್ಷನ್ ಇಳಿಮುಖ ಕಂಡಿದ್ದರೂ ಇದೀಗ ಮತ್ತೆ ಚೇತರಿಸಿಕೊಂಡಿದೆ. ಜನ ಥಿಯೇಟರುಗಳ ಕಡೆ ಗುಂಪುಗುಂಪಾಗಿ ಬರುತ್ತಿದ್ದಾರೆ. ಮಂಗಳೂರು, ಬಿ.ಸಿ. ರೋಡ್, ಕಾರ್ಕಳ, ಪುತ್ತೂರು, ಉಡುಪಿಗಳಲ್ಲಿ ಬಿಡುಗಡೆಯಾಗಿರುವ ಈ ಚಿತ್ರದ ಕಲೆಕ್ಷನ್ ನೋಡಿ ಖುಷಿಯಾಗಿರುವ ನಿರ್ಮಾಪಕ ಪ್ರವೀಣ್ ಕುಮಾರ್ ಕೊಂಚಾಡಿ ಬೆಂಗಳೂರು, ಮುಂಬೈ, ಮಡಿಕೇರಿ ಸೇರಿದಂತೆ ಕೊಲ್ಲಿ ರಾಷ್ಟ್ರಗಳಲ್ಲೂ 'ರಿಕ್ಷಾ ಡ್ರೈವರ್' ಬಿಡುಗಡೆ ಮಾಡುವ ಯೋಜನೆ ಹೊಂದಿದ್ದಾರೆ. ಹ.ಸೂ.ರಾಜಶೇಖರ್ ಈ ಚಿತ್ರದ ನಿರ್ದೇಶಕ.



ಕಾರ್ತಿಕ್ ಬಂಜಾನ್, ಸಾರಾ ಶರ್ಮ, ನೇಹಾ ಸಕ್ಸೇನ, ಅವಿನಾಶ್, ಪದ್ಮಜಾ ರಾವ್, ಚಿತ್ರಾ ಶೆಣೈ ಪ್ರಮುಖ ತಾರಾಗಣದಲ್ಲಿರುವ 'ರಿಕ್ಷಾ ಡ್ರೈವರ್' ಹಾಡುಗಳೂ ಈಗಾಗಲೇ ತುಳುನಾಡಿನಲ್ಲಿ ಹಿಟ್ ಆಗಿವೆ. 'ಉದಲ್ ಕದಲ್' ಎಂಬ ಹಾಡನ್ನು 'ವರ್ಲ್ಡ್ ತುಳುವಾಸ್ ನೆಟ್‌ವರ್ಕ್' ವೆಬ್ ಸೈಟ್‌ನಲ್ಲಿ ಹತ್ತಿರ ಹತ್ತಿರ ಎರಡು ಲಕ್ಷ ಜನ ಕೇಳಿದ್ದಾರೆ. ಉದಿತ್ ನಾರಾಯಣ್, ಶಂಕರ್ ಮಹಾದೇವನ್, ರಾಜೇಶ್ ಕೃಷ್ಣನ್ ಈ ಹಾಡನ್ನು ಹಾಡಿದ್ದಾರೆ. 'ರಿಕ್ಷಾ ಡ್ರೈವರ್' ಸಕ್ಸಸ್ ಕಂಡು ಇನ್ನಷ್ಟೇ ಬಿಡುಗಡೆಯಾಗಬೇಕಿರುವ 'ನಿರೆಲ್', 'ಬರ್ಕೆ' ಎಂಬ ತುಳು ಚಿತ್ರಗಳಿಗೆ ಬಲ ಬಂದಂತಾಗಿದೆ. 'ನಿರೆಲ್' ಕೂಡ ಅತ್ಯುತ್ತಮ ಚಿತ್ರವೆನಿಸಲಿದೆ ಎನ್ನುವ ಮಾತುಗಳೂ ದಕ್ಷಿಣ ಕನ್ನಡದಲ್ಲಿ ಕೇಳಿಬರುತ್ತಿವೆ. ಎರಡು, ಮೂರು ವಾರಕ್ಕೆ ಸುಸ್ತಾಗುತ್ತಿರುವ ಕನ್ನಡದ ದೊಡ್ಡ ದೊಡ್ಡ ಸ್ಟಾರ್‌ಗಳ ಚಿತ್ರಗಳ ಮುಂದೆ ಪುಟ್ಟ ಮಾರುಕಟ್ಟೆ, ಸೀಮಿತ ಪ್ರೇಕ್ಷಕರನ್ನು ಹೊಂದಿರುವ ತುಳು ಚಿತ್ರಗಳು ಹೀಗೆ ಯಶಸ್ಸು ಕಾಣುತ್ತಿರುವುದು ನಿಜಕ್ಕೂ ಶ್ಲಾಘನೀಯ.

ಬಂದಳು ವಾರಣಾಸಿ ಸಿಲ್ಕ್ ಸಾನ್ವಿ



ವಾರಣಾಸಿ ಮೂಲದ ಸಾನ್ವಿ ಶ್ರೀವಾತ್ಸವ್ ಎಂಬ ಚೆಡಗಿ ಚಿರಂಜೀವಿ ಸರ್ಜಾ ಜೋಡಿಯಾಗಿ ಅಭಿನಯಿಸಿದ 'ಚಂದ್ರಲೇಖಾ' ಚಿತ್ರ ಪೂರ್ಣಗೊಂಡಿದೆ. ಓಂ ಪ್ರಕಾಶ್ ರಾವ್ ನಿರ್ದೇಶನದ ಈ ಚಿತ್ರದ ಮೂಲಕ ಸಾನ್ವಿ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟಿದ್ದಾಳೆ. ತೆಲುಗಿನ 'ಅದ್ದಾ' ಚಿತ್ರದ ಮೂಲಕ ಎಲ್ಲರ ಗಮನ ಸೆಳೆದ ಈಕೆಗೆ ಮಾಡರ್ನ್ ಗರ್ಲ್ ಪಾತ್ರಗಳಂತೆಯೇ ದಕ್ಷಿಣ ಭಾರತದ ಗ್ರಾಮೀಣ ಹೆಣ್ಣುಮಗಳ ಪಾತ್ರಗಳಲ್ಲಿ ಕಾಣಿಸಿಕೊಳ್ಳುವಾಸೆಯಂತೆ.

'ಚಂದ್ರಲೇಖಾ' ಒಂದು ಇಂಟರೆಸ್ಟಿಂಗ್ ಸಿನಿಮಾ ಆಗಿದ್ದು, ನಿರ್ದೇಶಕ ಓಂ ಪ್ರಕಾಶ್ ಹೃದಯವಂತ ವ್ಯಕ್ತಿ ಎಂದು ಸಾನ್ವಿ ಹೇಳಿಕೊಂಡಿದ್ದಾಳೆ.

ಅಂದಹಾಗೆ 'ಚಂದ್ರಲೇಖಾ' ತೆಲುಗಿನ 'ಪ್ರೇಮ ಚಿತ್ರ ಕಥಂ' ಚಿತ್ರದ ಕನ್ನಡ ಅವತರಣಿಕೆ. ಚಿರಂಜೀವಿ ಸರ್ಜಾ, ಸಾನ್ವಿಯ ಜೊತೆಗೆ ನಾಗಶೇಖರ್, ಸಾಧುಕೋಕಿಲ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಚಿತ್ರದಲ್ಲಿ ಸಾಕಷ್ಟು ಕಾಮಿಡಿ ಸನ್ನಿವೇಶಗಳಿದ್ದು, ರೋಮ್ಯಾನ್ಸಿಗೂ ಅವಕಾಶವಿದೆಯಂತೆ.


ಪಾಕ್ ಗಡಿಯಲ್ಲಿ 'ಟ್ಯೂಬ್‌ಲೈಟ್'



ಲಡಾಕ್‌ನ 'ಕರ್ದೂಂಗ್ಲಾ ಪಾಸ್'ನಲ್ಲಿ ಚಿತ್ರೀಕರಣಗೊಂಡ ವಿಶ್ವದ ಪ್ರಥಮ ಚಿತ್ರ ಎಂಬ ಹೆಗ್ಗಳಿಕೆಗೆ ಕನ್ನಡ ಚಿತ್ರವೊಂದು ಪಾತ್ರವಾಗಿದೆ. ಆ ಚಿತ್ರದ ಹೆಸರು 'ಟ್ಯೂಬ್ ಲೈಟ್'. 18,380 ಅಡಿಗಳ ವಿಶ್ವದ ಅತೀ ಎತ್ತರದ ಮೋಟಾರ್ ರೈಡಿಂಗ್ ರಸ್ತೆ ಎಂಬ ಖ್ಯಾತಿ ಇರುವ ಈ ವಿಶಿಷ್ಟ ಜಾಗದಲ್ಲಿ 'ಟ್ಯೂಬ್ ಲೈಟ್' ಚಿತ್ರತಂಡ ಇತ್ತೀಚೆಗಷ್ಟೇ ಶೂಟಿಂಗ್ ಮುಗಿಸಿಕೊಂಡು ಬಂದಿದೆ. ಲಡಾಕ್‌ನಿಂದ 58 ಕಿ.ಮೀ. ದೂರದಲ್ಲಿರುವ 'ಕರ್ದೂಂಗ್ಲಾ ಪಾಸ್' ನಲ್ಲಿ ಶೂಟಿಂಗ್ ಮಾಡುವುದಿರಲಿ, ಸುಮ್ಮನೆ ಸ್ವಲ್ಪ ಹೊತ್ತು ಇದ್ದು ಬರುವುದೂ ಕೂಡ ಕಷ್ಟ. ಯಾಕೆಂದರೆ ಅಲ್ಲಿ ಆಮ್ಲಜನಕದ ಕೊರತೆ ತೀರಾ ಇದ್ದು ನಿಧಾನವಾಗಿ ಉಸಿರುಗಟ್ಟುತ್ತದೆ. ಆದ್ದರಿಂದ ಸಾಮಾನ್ಯವಾಗಿ ಅಲ್ಲಿ ಯಾರಾದರೂ ಹೆಚ್ಚೆಂದರೆ 20 ನಿಮಿಷ ಇರಬಹುದಷ್ಟೇ. ಇಂತಹ ಜಾಗದಲ್ಲಿ 'ಟ್ಯೂಬ್ ಲೈಟ್' ಚಿತ್ರತಂಡ ಕಷ್ಟಪಟ್ಟು ಬರೋಬ್ಬರಿ 1.15 ಗಂಟೆ ಇದ್ದು ಚಿತ್ರದ ಕೆಲವು ಅಗತ್ಯ ದೃಶ್ಯಗಳನ್ನು ಚಿತ್ರೀಕರಿಸಿಕೊಂಡಿದೆ.

'ಟ್ಯೂಬ್‌ಲೈಟ್' ಚಿತ್ರತಂಡ 'ಕರ್ದೂಂಗ್ಲಾ ಪಾಸ್'ಗೆ ಹೋಗುವ ಮಾರ್ಗ ಮಧ್ಯದಲ್ಲಿ ಇನ್ನೊಂದು ಸಾಹಸವನ್ನೂ ಮಾಡಿಬಂದಿದೆ. ಅದೇನೆಂದರೆ, ಇಂಡಿಯನ್ ಆರ್ಮಿಯ ಜಿಪ್ಸಿ ವಾಹನವೊಂದು ಡ್ರೈವರ್‌ನ ಅರಾಜಕತೆಯಿಂದ ಆಯತಪ್ಪಿ ಬರೋಬ್ಬರಿ ನೂರಡಿ ಆಳಕ್ಕೆ ಬಿದ್ದಿದೆ. ಅದನ್ನು ನೋಡಿದ 'ಟ್ಯೂಬ್‌ಲೈಟ್' ಚಿತ್ರತಂಡ ತಕ್ಷಣ ಅಲ್ಲಿಗೆ ಹೋಗಿ ನೂರಡಿ ಕೆಳಕ್ಕೆ ಇಳಿದು ಬಿದ್ದ ಜಿಪ್ಸಿಯೊಳಗೆ ಸಿಕ್ಕಿಕೊಂಡಿದ್ದ ಮಿಲಿಟರಿ ಮಂದಿಯನ್ನು ಅನಾಮತ್ತು ಹೆಗಲ ಮೇಲೆ ಹಾಕಿಕೊಂಡು ಮೇಲಕ್ಕೆ ಹೊತ್ತು ತಂದಿದೆ. ಪುಣ್ಯಕ್ಕೆ ಯಾವ ಯೋಧನಿಗೂ ಏನೂ ಅಪಾಯವಾಗಲಿಲ್ಲ.

ಅಂದಹಾಗೆ, ವೇಣುಗೋಪಾಲ್ ಅವರಿಗೆ ನಿರ್ದೇಶಕರಾಗಿ ಇದು ಚೊಚ್ಚಲ ಚಿತ್ರ. 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಖ್ಯಾತಿಯ ಮನೋಹರ್ ಜೋಷಿ ಈ ಚಿತ್ರದ ಕ್ಯಾಮರಾಮ್ಯಾನ್. ಉಳಿದಂತೆ ಗುರುನಂದನ್, ಅಜಯ್ ರಾಜ್ (ಮುಂಗಾರು ನಂಜುಂಡ), ಆರ್ಯನ್ ಬರಕ್ಕ, ರಾಜೇಂದ್ರ, ಸಾಧುಕೋಕಿಲ, ತಬಲಾ ನಾಣಿ, ಜೈಜಗದೀಶ್ ಚಿತ್ರದ ತಾರಾಗಣದಲ್ಲಿದ್ದಾರೆ. ಮನಾಲಿಯ ರೋ ಟಾಂಗ್ ಪಾಸ್, ಕೆಲಾಂಗ್, ಸರ್ಚು, ಪಾಂಗ್ ಸೇರಿದಂತೆ ಲೆಹ್ - ಲಡಾಕ್‌ನಲ್ಲಿ ಶೂಟಿಂಗ್ ಮುಗಿಸಿದೆ. ವಿಶೇಷವೆಂದರೆ, ಸಿಂಧೂನದಿ ಹಾಗೂ ಇಂಡಸ್‌ವ್ಯಾಲಿಯ 'ಸಂಗಮ'ದಲ್ಲಿ ಚಿತ್ರದ ಕೆಲವು ದೃಶ್ಯಗಳನ್ನು ಶೂಟ್ ಮಾಡಲಾಗಿದೆ. ಈ ಜಾಗದಿಂದ ಪಾಕಿಸ್ತಾನದ ಗಡಿ ಕೇವಲ 30 ಕಿ.ಮೀ. ಮಾತ್ರ!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com